# ಕರ್ನಾಟಕ ವಿಧಾನ ಪರಿಷತ್ತು

**(158ನೆಯ ಮುಂದುವರೆದ ಅಧಿವೇಶನ)**

**ಗುರುವಾರ, 13ನೇ ಮಾರ್ಚ್ 2026**

## ವಿಷಯಾನುಕ್ರಮಣಿಕೆ (INDEX)


**1. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**1300 – ಹೊಲಿಗೆ ಯಂತ್ರ ವಿತರಣೆ ಯೋಜನೆ ಕುರಿತು.**

– ಡಾ॥ ಯತೀಂದ್ರ ಎಸ್

– ಶ್ರೀ ಶಿವರಾಜ ಎಸ್ ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**ತಡೆ ಹಿಡಿಯಲಾದ ಪ್ರಶ್ನೆ.**

**980 – ಬೆಂಗಳೂರು ನಗರ ಜಿಲ್ಲೆಯ ಕಂದಾಯ ಭೂಮಿಗಳಲ್ಲಿ ನಿರ್ಮಿಸಿರುವ ಲೇಔಟ್‌ಗಳ ಕುರಿತು.**

– ಶ್ರೀ ಹೆಚ್.ಎಸ್. ಗೋಪಿನಾಥ್

– ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

– ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**1302 – ಬಾಗಲಕೋಟೆ ಜಿಲ್ಲೆಯಲ್ಲಿನ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಮನೆಗಳ, ಯೋಜನೆಗಳ ಹಾಗೂ ಪ್ರಗತಿಯ ವಿವರವನ್ನು ನೀಡುವ ಕುರಿತು.**

– ಶ್ರೀ ಪಿ.ಹೆಚ್. ಪೂಜಾರ್

– ಶ್ರೀ ಶಿವರಾಜ ಎಸ್ ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**1145 – ಬೀದರ್ ಜಿಲ್ಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸ್ಥಿತಿಗತಿ ಹಾಗೂ ಮೂಲ ಸೌಕರ್ಯಗಳ ಕುರಿತು.**

– ಡಾ॥ ಎಂ.ಜಿ. ಮುಳೆ

– ಶ್ರೀ ಶಿವರಾಜ ಎಸ್ ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**1238 – ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ನೌಕರರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ನೀಡುವಾಗ ಆಗುತ್ತಿರುವ ಅನ್ಯಾಯದ ಕುರಿತು.**

– ಶ್ರೀ ಶಶಿಲ್ ಜಿ ನಮೋಶಿ

– ಶ್ರೀ ಶಿವರಾಜ ಎಸ್ ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**1289 – ಕಲ್ಯಾಣ ಕರ್ನಾಟಕದ ಪ್ರದೇಶಗಳಲ್ಲಿ ಐಟಿ ಬಿಟಿ ಕಂಪನಿಗಳ ಸ್ಥಾಪನೆ ಬಗ್ಗೆ.**

– ಶ್ರೀ ಕೆ.ಎಸ್. ನವೀನ್

– ಶ್ರೀ ಪ್ರಿಯಾಂಕ್ ಖರ್ಗೆ ಸಚಿವರು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)

**1137 – ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಕುರಿತು.**

– ಶ್ರೀ ಎಸ್. ಕೇಶವ ಪ್ರಸಾದ್

– ಶ್ರೀ ಡಿ. ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**1286 – ಅಲೆಮಾರಿಗಳು ಕನಿಷ್ಟ ಸೌಕರ್ಯಗಳಿಲ್ಲದೇ ಬದುಕು ನಡೆಸುತ್ತಿರುವ ಬಗ್ಗೆ ಕುರಿತು.**

– ಡಾ॥ ತಳವಾರ್ ಸಾಬಣ್ಣ

– ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**1201 – ವಿದ್ಯಾರ್ಥಿ ನಿಲಯಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ..**

– ಶ್ರೀ ತಿಪ್ಪಣ್ಣಪ್ಪ ಕಮಕನೂರ

– ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**1252 – ಭಿಕ್ಷಾಟನೆಯನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಬಗ್ಗೆ.**

– ಡಾ॥ ಕೆ. ಗೋವಿಂದರಾಜ್

– ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**1194 – ಸಿಂಧನೂರು ತಾಲ್ಲೂಕಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವ ಬಗ್ಗೆ.**

– ಶ್ರೀ ಬಸನಗೌಡ ಬಾದರ್ಲಿ

– ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**1220 – ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಕಳೆದ 3 ವರ್ಷಗಳಲ್ಲಿ ಪಾವತಿ ಮಾಡಲಾದ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನದ ಕುರಿತು.**

– ಶ್ರೀಮತಿ ಹೇಮಲತಾ ನಾಯಕ್

– ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು)

**1290 – ಸಮಾಜ ಕಲ್ಯಾಣ ಇಲಾಖೆ ಮತ್ತು ಭೋವಿ ಅಭಿವೃದ್ಧಿ ನಿಗಮದ ಅನುದಾನದ ಬಗ್ಗೆ.**

– ಶ್ರೀ ಟಿ.ಎನ್. ಜವರಾಯಿಗೌಡ

– ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

## 2. ನಿಯಮ 58(ಎ) ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು.

**ಅ) ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ಕೈಗಾರಿಕೆಗಳ ತೆರಿಗೆಯನ್ನು ಕೆ.ಐ.ಎ.ಡಿ.ಬಿ ಸಂಗ್ರಹಣೆ ಮಾಡುತ್ತಿರುವುದರಿಂದ, ಸಂಕಷ್ಟದಲ್ಲಿರುವ ಬೊಮ್ಮಸಂದ್ರ ಪುರಸಭೆಗೆ ತುರ್ತು ವಿಶೇಷ ಅನುದಾನ ಬಿಡುಗಡೆ ಮಾಡುವ ಬಗ್ಗೆ.**

- ಶ್ರೀ ಹೆಚ್.ಎಸ್. ಗೋಪಿನಾಥ್
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಆ) 2018ರಲ್ಲಿ ಪ್ರಾರಂಭಿಸಿರುವ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಮಖಂಡಿ–ಅಥಣಿ ಮಾರ್ಗ ಮಧ್ಯದಲ್ಲಿ ಬರುವ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಬಗ್ಗೆ.**

- ಶ್ರೀ ಹಣಮಂತ ರುದ್ರಪ್ಪ ನಿರಾಣಿ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಇ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ರೈತ ಸಂಪರ್ಕ ಕೇಂದ್ರಗಳಲ್ಲಿ ಅಕೌಂಟೆಂಟ್ ಹುದ್ದೆಗಳ ಭರ್ತಿಯಲ್ಲಿ ನಡೆಯುತ್ತಿರುವ ಅವ್ಯವಹಾರದ ವಿರುದ್ಧ ಕ್ರಮ ವಹಿಸುವ ಬಗ್ಗೆ.**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎನ್. ಚಲುವರಾಯಸ್ವಾಮಿ (ಕೃಷಿ ಸಚಿವರು)

**ಈ) ಮಂಗಳೂರಿನ ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೇ ಕೊಳಚೆ ನೀರು ನೇತ್ರಾವತಿ ನದಿಯ ಒಡಲು ಸೇರುತ್ತಿರುವುದನ್ನು ತಡೆಗಟ್ಟಲು ಕ್ರಮ ವಹಿಸುವ ಬಗ್ಗೆ.**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಉ) ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಹೋಬಳಿಯ ಅಕ್ಕಿರಾಂಪುರ ಗ್ರಾಮದಲ್ಲಿ ಪಾಳು ಬಿದ್ದಿರುವ ಕಸ್ತೂರಿ ಬಾ ವಿದ್ಯಾರ್ಥಿನಿಲಯವನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲು ಕ್ರಮ ವಹಿಸುವ ಬಗ್ಗೆ..**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಊ) ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಉಂಟಾಗಿರುವ ವಾಣಿಜ್ಯ ಸಿಲಿಂಡರ್ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸಿಲಿಂಡರ್ ಕೊರತೆಯಾಗದಂತೆ ಮತ್ತು ಕಾಳಸಂತೆಯಲ್ಲಿ ಮಾರಾಟವಾಗದಂತೆ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಸಚಿವರು)

**ಋ) ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಾಣಿಜ್ಯ ಬಳಕೆ ಎಲ್.ಪಿ.ಜಿ ಸಿಲಿಂಡರ್ ಪೂರೈಕೆ ಅಭಾವದಿಂದ ಉಂಟಾಗಿರುವ ಸಮಸ್ಯೆಗಳ ಕುರಿತು.**

- ಶ್ರೀ ಎಂ. ನಾಗರಾಜು

– ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳ ಸಚಿವರು)

**ಎ) ಕನ್ನಡ ಭಾಷೆ, ನೆಲ, ಜಲ ಸಂರಕ್ಷಣೆಗೆ ಹೋರಾಡುತ್ತಿರುವ ಸಂಘ-ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಗೌರವ ಸಲ್ಲಿಸುವ ಕುರಿತು.**

– ಶ್ರೀ ರಮೇಶ್ ಬಾಬು

– ಶ್ರೀ ಶಿವರಾಜ ಎಸ್ ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

**ಏ) ರಾಜ್ಯದ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು**

– ಶ್ರೀ ಕಿಶೋರ್ ಕುಮಾರ್ ಪುತ್ತೂರು

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಐ) ರಾಜ್ಯದಲ್ಲಿ ಬೇಸಿಗೆ ಮುನ್ನವೇ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಹಾಗೂ ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಮಾಡುವ ಬಗ್ಗೆ.**

– ಶ್ರೀ ಸಿ.ಟಿ. ರವಿ

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**3. ಕಾರ್ಯದರ್ಶಿಯವರ ವರದಿ.**

**4. ನಿಯಮ 58(ಎ) ಅಡಿಯಲ್ಲಿ ಪ್ರಸ್ತಾಪಿಸಲಾಗಿದ್ದ ಶೂನ್ಯವೇಳೆ ಪ್ರಸ್ತಾವಗಳಿಗೆ ಸರ್ಕಾರದಿಂದ ಲಿಖಿತ ಉತ್ತರ ಮಂಡನೆ.**

**ಅ) "ಬೆಳಗಾವಿ ಅಂಗನವಾಡಿ ಮಕ್ಕಳಿಗೆ 'ಎಕ್ಸ್‌ಪೈರಿ' ಮಿಲೆಟ್ ಲಡ್ಡು!' ನೀಡಿರುವ ಕುರಿತು.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಪರವಾಗಿ)

**ಆ) "ದಾಖಲೆಯಲ್ಲಿ ಜೋಳ ಬೆಳೆದ ರಾಯಚೂರು ರೈತರ ಕುರಿತು."**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ಆಹಾರಮ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖ ಸಚಿವರ ಪರವಾಗಿ)

**ಇ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಸರೆಯಾಗಿದ್ದ "ಜಿಲ್ಲಾ ಸಾಂತ್ವನ ಕೇಂದ್ರ" ಗಳನ್ನು ಸ್ಥಗಿತಗೊಳಿಸಲು ಮುಂದಾಗಿರುವ ಕುರಿತು.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಪರವಾಗಿ)

**ಈ) "ಹೆಚ್ಚುತ್ತಿಗೆ ಧಗೆ ಅಣೆಕಟ್ಟುಗಳಲ್ಲಿ ಇಳಿಕೆಗೆ ನೀರಿನ ಮಟ್ಟ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಸಾಧ್ಯತೆ ಮುಂಜಾಗ್ರತೆ ಮಂಗಳೂರು ಮಹಾನಗರ ಪಾಲಿಕೆ ಅಣಿಯಾಗಬೇಕೆನ್ನುವ" ಕುರಿತು.**

– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ)

**ಉ) ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರಿ ವೈದ್ಯರು ಹೊರ ರೋಗಿ ಸೇವೆ ಬಂದ್ ಮಾಡಲು ನಿರ್ಧರಿಸಿರುವ ಕುರಿತು.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಊ) "ಇ-ಖಾತೆಗೆ ಪರದಾಟ, ಸರ್ವರ್ ಡೌನ್ ನೆಪದಿಂದ ಕೈಗಾರಿಕಾ ಆಸ್ತಿ ನೋಂದಣಿಗೆ ತೊಡಕು!" ಉಂಟಾಗಿರುವ ಬಗ್ಗೆ.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ)

**ಋ) ಮಂಗಳೂರು ಮಹಾನಗರದಲ್ಲಿ 24x7 ನೀರು ಸರಬರಾಜು ಮಾಡಬೇಕಾಗಿದ್ದ ಜಲಸಿರಿ ಯೋಜನೆ 2023ಕ್ಕೆ ಮುಗಿಯಬೇಕಾಗಿದ್ದು, ಸದರಿ ಯೋಜನೆಯು ಈವರೆಗೂ ಮುಕ್ತಾಯವಾಗಿರುವುದಿಲ್ಲ ಎನ್ನುವ ಬಗ್ಗೆ.**

- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ)

## 5. ವರದಿಯನ್ನೊಪ್ಪಿಸುವುದು.

**ವಿಧಾನ ಪರಿಷತ್ತಿನ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಮೊದಲನೆಯ ವರದಿ ಮಂಡನೆ.**

- ಶ್ರೀ ಎಸ್.ಎಲ್. ಭೋಜೇಗೌಡ

## 6. ಖಾಸಗಿ ಸದಸ್ಯರ ಕಾರ್ಯಕಲಾಪ.

**ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕ, 2025 ಮಂಡನೆಗೆ ಅನುಮತಿ ಕೋರಿಕೆ.**

- ಶ್ರೀ ರಮೇಶ್ ಬಾಬು

(ಖಾಸಗಿ ವಿಧೇಯಕವನ್ನು ಮಂಡಿಸಲಾಯಿತು)

## 7. ವಿತ್ತೀಯ ಕಾರ್ಯಕಲಾಪ

**2026-2027ನೇ ಆಯವ್ಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ.**

- ಶ್ರೀ ಎಸ್. ಕೇಶವ ಪ್ರಸಾದ್
- ಶ್ರೀ ರಮೇಶ್ ಬಾಬು
- ಶ್ರೀ ಎನ್. ರವಿಕುಮಾರ್
- ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು).

(365) 13-03-2026 10-10 KH/VK (BNS)

# ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ, 13ನೇ ಮಾರ್ಚ್ 2026

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 10 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು

ಪೀಠದಲ್ಲಿ ಉಪಸ್ಥಿತರಾದರು.

**ಸಭಾಪತಿಯವರು:-** 15 ನಿಮಿಷಗಳು ನಿಧಾನವಾಯಿತು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನನ್ನಿಂದ ಅಲ್ಲ, ತಮಗೋಸ್ಕರ ನಿಧಾನವಾಯಿತು. ತಾವು ಏನೇನೋ ಮಾತನಾಡಬೇಡಿ. ನಾನು ಸರಿಯಾಗಿ 9-30 ಕ್ಕೆ ಬಂದಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನೀವು ಮಾತನಾಡಬೇಡಿ. ತಮ್ಮ ಜೊತೆ ಮಾತನಾಡಿ ಮೈಮೇಲೆ ಹಾಕಿಕೊಳ್ಳುವುದಿಲ್ಲ. ಡಾ॥ ಧನಂಜಯ ಸರ್ಜಿರವರು ಗೈರು ಹಾಜರಾಗಿದ್ದಾರೆ.

## 01. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ: 1300

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) (ಡಾ॥ ಯತೀಂದ್ರ. ಎಸ್. ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ನಾವು ಕೇಳುರುವಂತಹ ಪ್ರಮುಖ ಪ್ರಶ್ನೆಯೇನೆಂದರೆ, ಇವತ್ತು ನಮ್ಮ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈಗಾಗಲೇ ಶಕ್ತಿ ಯೋಜನೆ, ಗೃಹಲಕ್ಷ್ಮಿ ಯೋಜನೆಯಂತಹ ಮಹಿಳಾ ಕೇಂದ್ರಿಕೃತ ಯೋಜನೆಗಳನ್ನು ನೀಡಿ, ಮಹಿಳೆಯರಿಗೆ ಸ್ವಾವಲಂಬಿ ಬದುಕನ್ನು ನಿರ್ಮಿಸಲು ಆದ್ಯತೆ ನೀಡಲಾಗಿದೆ. ಅವರು ಯಾವ ಯಾವ ನಿಗಮದ ಅಡಿ ಸ್ವಾವಲಂಬಿ ಜೀವನವನ್ನು ನಡೆಸುವುದಕ್ಕೆ ಎಷ್ಟೆಷ್ಟು ಹೊಲಿಗೆ ಯಂತ್ರಗಳನ್ನು ಕೊಡುತ್ತಿದ್ದೀರಿ ಎನ್ನುವ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಹಾಗಾಗಿ ಶ್ರೀ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 2022-23ನೇ ಸಾಲಿನಲ್ಲಿ 28,204 ಹೊಲಿಗೆ ಯಂತ್ರಗಳಿಗೆ, 2024-25ನೇ ಸಾಲಿನಲ್ಲಿ 6,144 ಹೊಲಿಗೆ ಯಂತ್ರಗಳಿಗೆ ಮತ್ತು 2025-26ನೇ ಸಾಲಿನಲ್ಲಿ 21,562 ಹೊಲಿಗೆ ಯಂತ್ರಗಳಿಗೆ ಅರ್ಜಿಗಳು ಬಂದಿವೆ. ಆದರೆ, ದುರಾದೃಷ್ಟಾವಶಾತ್ ಇದು ಮಹಿಳೆಯರ ಕೇಂದ್ರಿಕೃತ ಯೋಜನೆಯಾಗಿದ್ದರೂ ಕೂಡ ಶ್ರೀ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ 2023-24ನೇ ಸಾಲಿನಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ ಎನ್ನುವುದು ಬಹಳ ಬೇಸರದ ಸಂಗತಿಯಾಗಿದೆ. ಈಗ ಗ್ರಾಮೀಣ ಭಾಗಗಳಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡುವಂತಹದ್ದು ಮತ್ತು ಅವರು ಮನೆಯಲ್ಲಿಯೇ ಕುಳಿತು ಕೆಲಸ ಮಾಡುವುದಕ್ಕೆ ಹೊಲಿಗೆ ಯಂತ್ರಗಳನ್ನು ಕೊಡುವಂತಹದ್ದು ಆಗಿದೆ. ಅವರಿಗೆ ನಾವು ಉದ್ಯೋಗವನ್ನು ನೇರವಾಗಿ ಕೊಡುವುದಿಲ್ಲ. ಆದರೆ, ಅವರಿಗೆ ಹೊಲಿಗೆ ಯಂತ್ರಗಳನ್ನು ಕೊಡುವುದಕ್ಕೆ ಇನ್ನು ಕ್ರಮ ತೆಗೆದುಕೊಂಡಿಲ್ಲ. ಅದೇ ರೀತಿ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಲ್ಲಿಯೂ ಕೂಡ ಇದೇ ರೀತಿ ಮಾಡಲಾಗಿದೆ. ಹಾಗಾಗಿ ಈ ಒಂದು ಯೋಜನೆಯನ್ನು ಬಹಳ ಒಳ್ಳೆಯ ರೀತಿಯಲ್ಲಿ ಮಾಡಬೇಕಾಗುತ್ತದೆ. 2022-23ನೇ ಸಾಲಿನಲ್ಲಿ 28,204 ಹೊಲಿಗೆ ಯಂತ್ರಗಳಿಗೆ ಅರ್ಜಿಗಳು ಬಂದಿದ್ದು, ಇದರಲ್ಲಿ 5,137 ಫಲಾನುಭವಿಗಳಿಗೆ ಮಾತ್ರ ಹೊಲಿಗೆ ಯಂತ್ರಗಳನ್ನು ನೀಡಲಾಗಿದೆ. 2025-26ನೇ

ಸಾಲಿನಲ್ಲಿಯೂ ಕೂಡ ಬಹಳಷ್ಟು ಅರ್ಜಿಗಳು ಬಂದಿರುವುದರಿಂದ, ಜಾಸ್ತಿ ಹೊಲಿಗೆ ಯಂತ್ರಗಳನ್ನು ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆನ್ನುವುದು ನಮ್ಮ ಕಳಕಳಿಯ ಮನವಿಯಾಗಿದೆ.

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, 2022-23ನೇ ಸಾಲಿನಲ್ಲಿ ಕೇಂದ್ರೀಯ ಭಂಡಾರದ ಮೂಲಕ ಹೊಲಿಗೆ ಯಂತ್ರಗಳನ್ನು ಕೊಟ್ಟಿದ್ದೇವೆ. ಇದಾದ ಮೇಲೆ 2023-24ನೇ ಸಾಲಿನಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದೇವೆ. ಇದನ್ನು ಏಕೆ ಮಾಡಿಲ್ಲವೆಂದರೆ, ಹೊಲಿಗೆ ಯಂತ್ರಗಳನ್ನು ಕ್ರಿಯಾ ಯೋಜನೆಯಲ್ಲಿ ಇಟ್ಟುಕೊಂಡಿರಲಿಲ್ಲ. ಹೊಲಿಗೆ ಯಂತ್ರಗಳಿಗೆ ಡಿಮೆಂಡ್ ಜಾಸ್ತಿ ಇದೆ. 2023-24ನೇ ಸಾಲಿನಲ್ಲಿ ಹೊಲಿಗೆ ಯಂತ್ರಗಳನ್ನು ಕ್ರಿಯಾ ಯೋಜನೆಯಲ್ಲಿ ಇಟ್ಟುಕೊಳ್ಳದಿರುವುದಕ್ಕೆ ಮಾಡಲಿಲ್ಲ. 2024-25ನೇ ಸಾಲಿನಲ್ಲಿ ಮಾಡಿದ್ದೇವೆ. 2025-26ನೇ ಸಾಲಿನಲ್ಲಿ ಟೆಂಡರ್ ಕರೆದಿದ್ದೇವೆ. ಟೆಂಡರ್ ಕರೆದು ಈಗಾಗಲೇ India Labs Private Limited ರವರ ಮುಖಾಂತರ ಖರೀದಿ ಮಾಡಿದ್ದೇವೆ. ಈಗ ಅದನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಈಗಾಗಲೇ ಶಾಸಕರ ಅಧ್ಯಕ್ಷತೆಯೊಳಗೆ ಸಮಿತಿ ಆಗುತ್ತಿರುವುದರಿಂದ, ಸ್ವಲ್ಪ ತಡವಾಗಿದೆ. ಏಕೆಂದರೆ, ಅಧ್ಯಕ್ಷರು ವಿತರಣೆ ಮಾಡುವುದಕ್ಕೆ ನಿಧಾನ ಮಾಡಿದ್ದಾರೆ. ನಾವೆಲ್ಲಾ ಖರೀದಿ ಮಾಡಿ ಎಲ್ಲಾ ಜಿಲ್ಲೆಗಳ ಗೋಡೌನ್‌ನಲ್ಲಿ ಇಡುವಂತಹ ಕೆಲಸವನ್ನು ಮಾಡಿದ್ದೇವೆ. ಶಾಸಕರ ಕಡೆಯಿಂದಲೂ ಒಂದಿಷ್ಟು ತಡವಾಗಿದೆ ಮತ್ತು 2022-23 ರೊಳಗೆ 2 ಸಾವಿರ ಹೊಲಿಗೆ ಯಂತ್ರಗಳನ್ನು ಕೇಂದ್ರೀಯ ಭಂಡಾರದಿಂದ ಕೊಟ್ಟಿದ್ದೇವೆ. ಆವತ್ತು ಬೆಲೆ ಜಾಸ್ತಿ ಇದ್ದು, ಇದನ್ನು ಶಾಸಕರು ಕೊಡುವುದು ನಿಧಾನವಾಗಿರುವುದರಿಂದ, ಮತ್ತೆ ಅವರು ನಮಗೆ ರೇಟ್ ಜಾಸ್ತಿಯಾಗಿದೆ. ನಾವು ಇಷ್ಟು ಕೊಡುವುದಕ್ಕೆ ಆಗುವುದಿಲ್ಲ ಎಂದು ಪ್ರಪೋಸಲ್ ಅನ್ನು ಕಳುಹಿಸಿದರು. ಅದಕ್ಕೆ ನಾವು ಸುಮಾರು 2,600 ಮತ್ತು ಈ ವರ್ಷದ್ದು ಸೇರಿ ಟೆಂಡರ್ ಕರೆದಿದ್ದೇವೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಆದಷ್ಟು ಬೇಗ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಐವನ್ ಡಿ'ಸೋಜಾ (ಮಾನ್ಯ ಯತೀಂದ್ರ. ಎಸ್ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಅವರು ಒಂದು ವರ್ಷ ಮಾಡಲಿಲ್ಲ. ನಮ್ಮ ಬೇಡಿಕೆಯೇನೆಂದರೆ, 28,204 ಅರ್ಜಿಗಳು ಬಂದಾಗ ಕೇವಲ 5,137 ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಕೊಡುವುದಾದರೆ, ತಮಗೆ ಈ ಯೋಜನೆಯಲ್ಲಿಯೂ ಏನು ಕಷ್ಟ ಇತ್ತು? ಹೊಲಿಗೆ ಯಂತ್ರಗಳನ್ನು ಕೊಡುವುದಕ್ಕೆ 28,204 ಅರ್ಜಿಗಳು ಬಂದಾಗ 5,137 ಫಲಾನುಭವಿಗಳಿಗೆ ಹೊಲಿಗೆ ಯಂತ್ರಗಳನ್ನು ಕೊಡುತ್ತೀರೆಂದರೆ, ಬೆಲೆ ಏರಿಕೆ ಆಗಿರುವಂತಹ ಕಾರಣವನ್ನು ಕೊಡುವಂತಹದ್ದು ಸಮಂಜಸ ಅಲ್ಲ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. 28,204 ಅರ್ಜಿಗಳು ಬಂದ ಮೇಲೆ, 28,204 ಫಲಾನುಭವಿಗಳಿಗೂ ಕೂಡ ಹೊಲಿಗೆ ಯಂತ್ರಗಳನ್ನು ಕೊಡಬೇಕು. ಏಕೆಂದರೆ, ಈಗ ಹೊಲಿಗೆ

ಯಂತ್ರಗಳನ್ನು ತೆಗೆದುಕೊಳ್ಳುವವರ ಸಂಖ್ಯೆಯೂ ಕಡಿಮೆಯಾಗಿದೆ. ಇದು ಅವರಿಗೆ ಉದ್ಯೋಗವನ್ನು ಕೊಡುವಂತಹದ್ದು. ಅವರ ಹಸಿವಿನ ಪ್ರಶ್ನೆ ಆಗಿರುತ್ತದೆ. ಗ್ರಾಮಾಂತರ ಭಾಗದಲ್ಲಿ ಅವರ ಕೆಲಸಕ್ಕೆ ಇದು ಬಹಳಷ್ಟು ಸಹಕಾರಿಯಾಗುತ್ತದೆ. ಹಾಗಾಗಿ ಮಾನ್ಯ ಸಚಿವರು ಇದಕ್ಕೆ ಹೆಚ್ಚು ಹಣವನ್ನು ಇಟ್ಟು, ಹೆಚ್ಚು ಹೊಲಿಗೆ ಯಂತ್ರಗಳನ್ನು ಕೊಡಬೇಕೆನ್ನುವುದು ನಮ್ಮ ಬೇಡಿಕೆಯಾಗಿದೆ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತೆ ನಮಗೂ ಕೊಡಬೇಕೆನ್ನುವ ಆಸೆ ಇದೆ. ನಮ್ಮ ಅನುದಾನದ ಇತಿ-ಮಿತಿಯೊಳಗೆ ಕೊಡುವಂತಹ ಕೆಲಸ ಆಗಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಎಷ್ಟು ಬುದ್ಧಿವಂತರಿದ್ದೀರಿ . . . .

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೇ, ಸಹಜವಾಗಿ ಎಲ್ಲರ ಅರ್ಜಿಗಳ ಸಂಖ್ಯೆ ಜಾಸ್ತಿ ಮಾಡಿದ್ದೇವೆ. 28,000 ದಿಂದ 30,000 ವರೆಗೂ ಅರ್ಜಿಗಳನ್ನು ಕರೆಯುತ್ತಾರೆ. ಆದರೆ, ನಮ್ಮ ಇತಿ-ಮಿತಿಯೊಳಗೆ ಕೊಡಬೇಕಲ್ಲವೇ?

(ಮುಂದು)

(366) 13.3.2026 10.20 ಪಿಕೆ:ಬಿಎನ್ಎಸ್ (ಸಭಾಪತಿಗಳ ಉಪಸ್ಥಿತಿ)

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ(ಮುಂದು)**

ನಾವು ಈಗಾಗಲೇ "ಸ್ವಾವಲಂಬಿ ಸಾರಥಿ" ಯೋಜನೆ, "ಗಂಗಾ ಕಲ್ಯಾಣ" ಯೋಜನೆಯಲ್ಲಿ ಹಣವನ್ನು ಕೊಡುತ್ತೇವೆ ಮತ್ತು ನೇರ ಸಾಲವನ್ನು ಸಹ ಕೊಡುವ ಕೆಲಸ ಮಾಡುತ್ತಿದ್ದೇವೆ. ಹಾಗಾಗಿ ನಮ್ಮ ಇತಿಮಿತಿಯನ್ನು ನೋಡಿಕೊಂಡು ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಇನ್ನೂ ಹೆಚ್ಚಿನ ಅನುದಾನ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಭೀಮರಾವ್ ಬಸವರಾಜ ಪಾಟೀಲ್‌ರವರು ತಮ್ಮ ಪ್ರಶ್ನೆ 1253 ಅನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ. ಮುಂದಿನ ಪ್ರಶ್ನೆ ಸಂಖ್ಯೆ: 1289, ಮಾನ್ಯ ಕೆ.ಎಸ್.ನವೀನ್ ಅವರದ್ದು. ಅವರು ಉಪಸ್ಥಿತರಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ನನ್ನದೊಂದು ಮನವಿ ಇದೆ. ನಮ್ಮ ಸದಸ್ಯರುಗಳು ಸದನಕ್ಕೆ ಬರುವ ಸಲುವಾಗಿ ನೀವು ಯಾವುದಾದರೂ ಒಂದು ಆಕರ್ಷಣೆಯನ್ನು ಇಡಬೇಕು. ಏಕೆಂದರೆ, ಈಗ ಸದನದಲ್ಲಿ ಮಂತ್ರಿಗಳೇ ಜಾಸ್ತಿ ಇದ್ದಾರೆ.

**ಸಭಾಪತಿಯವರು:–** ಇಪ್ಪತ್ತು ವರ್ಷದಿಂದ ಇವರ ಸಹವಾಸದಲ್ಲಿದ್ದೇನೆ. ಬಹಳ ಮಂದಿಯನ್ನು ಆಕರ್ಷಣೆ ಮಾಡುವ ಚಟ, ಗುಣ ಮಾನ್ಯ ಭೋಜೇಗೌಡರಿಗೆ ಇದೆ. ಸದಸ್ಯರು ಸದನಕ್ಕೆ ಬರಲು ಯಾವರೀತಿ ಆಕರ್ಷಣೆಯನ್ನು ಇಡಬೇಕು ಎಂದು ಹೇಳಿದರೆ ನಾನು ಮಾಡುತ್ತೇನೆ.

(ಸದನದಲ್ಲಿ ನಗು)

ಪ್ರಶ್ನೆ ಸಂಖ್ಯೆ ೯೮೦

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಒಂದು ಕಂದಾಯ ಭೂಮಿಯಲ್ಲಿ ಬಡಾವಣೆ ಮಾಡಿರುತ್ತಾರೆ. ಆದರೆ ಅದು ರಿಜಿಸ್ಟರ್ ಆಗಿರುವುದಿಲ್ಲ. ರಿಜಿಸ್ಟರ್ ಆಗಿರುವುದಕ್ಕೆ ಸರ್ಕಾರ ಬಿ–ಖಾತಾ ಕೊಡುತ್ತಿದೆ. ಇನ್ನು ಕೆಲವು ರಿಜಿಸ್ಟರ್ ಆಗದೇ ಇರುವುದನ್ನು ಏನು ಮಾಡಬೇಕು? ದಯವಿಟ್ಟು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಪ್ರಸ್ತುತವಾದ ಪ್ರಶ್ನೆಯನ್ನು ಕೇಳಿದ್ದಾರೆ. ಈ ಕಾಯಿದೆಯನ್ನು ಮಾಡಬೇಕಾದರೆ ನಮ್ಮದು ಒಂದು ನಿರ್ದಿಷ್ಟ ಉದ್ದೇಶವಿತ್ತು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾನೂನುಬಾಹಿರ ಬಡಾವಣೆಗಳನ್ನು ಏನು ಮಾಡಿದ್ದಾರೋ ಅವರೆಲ್ಲರನ್ನೂ ತೆರಿಗೆ ವ್ಯಾಪ್ತಿಗೆ ತರಬೇಕು. ಪ್ರಾರಂಭದಲ್ಲಿ back of the envelope calculation ಮಾಡಿದಾಗ, ಸುಮಾರು 1 ಕೋಟಿ ಆಸ್ತಿಗಳ ತೆರಿಗೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಕಾನೂನುಬಾಹಿರ ಬಡಾವಣೆಯಾಗಿದ್ದರೂ ಅವರಿಗೆ ಸರ್ಕಾರವೇ ನೀರು ಕೊಡುತ್ತಿದೆ, ವಿದ್ಯುತ್ ಇತ್ಯಾದಿ ಎಲ್ಲಾ ಸವಲತ್ತುಗಳನ್ನು ಕೊಡುತ್ತಿದೆ. ಆದರೆ, ಅವರಿಂದ ತೆರಿಗೆ ಬರುತ್ತಿರಲಿಲ್ಲ. ಅದಕ್ಕೋಸ್ಕರ ನಾವು ಸಂಬಂಧಪಟ್ಟ ಈ ಕಾಯಿದೆಯನ್ನು ತಂದೆವು. ತಾವುಗಳು ಕೂಡ ಇದನ್ನು ಒಪ್ಪಿದಿರಿ. ಕಾಯಿದೆ ಜಾರಿಯಾಗುತ್ತಿರುವುದರಿಂದ, ನಾವು 7.5.2025 ಕ್ಕೆ deadline ಕೊಟ್ಟು ಒಂದು cutoff date ಅನ್ನು ನೀಡಿದೆವು. ಅಲ್ಲಿಯ ತನಕ ಯಾವ ನಿವೇಶನಗಳು ಮಾರಾಟ ಆಗಿತ್ತೋ ಅವರಿಗೆ ಬಿ–ಖಾತಾ ಕೊಡಬಹುದಾಗಿತ್ತು. ಇದಾದ ನಂತರ, ಯಾವ ಮಾಲೀಕ ನಿವೇಶನಗಳನ್ನು ಇಟ್ಟುಕೊಂಡಿರುತ್ತಾನೋ ಅವನು ಅದನ್ನು ಮಾರುವುದಕ್ಕೆ ಹೋದರೆ ಅವರಿಗೆ ಕಷ್ಟವಾಗುತ್ತಿದೆ, ನಾನು ಅದನ್ನು ಒಪ್ಪುತ್ತೇನೆ. ಆದರೆ ನಾವು ಒಂದು ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ, ಒಂದು cutoff date ಇರಲೇಬೇಕಾಗುತ್ತದೆ. ನಾವು ಈ ದಿನಾಂಕವನ್ನು ವಿಸ್ತರಣೆ ಮಾಡುತ್ತಾ ಹೋದರೆ ಇದಕ್ಕೆ ಕೊನೆ ಎಂಬುದೇ ಇರುವುದಿಲ್ಲ. ಒಂದು ಬಡಾವಣೆಯವರು ಮಾರಾಟ ಮಾಡುತ್ತಿರುವ ನಿವೇಶನಕ್ಕೆ ಬಿ–ಖಾತಾ ಸಿಗುತ್ತಿದ್ದೆ, ಆದರೆ ಪಕ್ಕದಲ್ಲಿರುವ ಬಡಾವಣೆಯವರು ಇವತ್ತು ನಿವೇಶನ ಮಾರುತ್ತಿದ್ದರೂ ಅವರಿಗೆ ಸಿಗುತ್ತಿಲ್ಲ ಎಂಬುದು ಮಾನ್ಯ ಸದಸ್ಯರ

ಕಳಕಳಿಯಾಗಿದೆ ಮತ್ತು ಕೇಳಿರುವ ಪ್ರಶ್ನೆ ಪ್ರಸ್ತುತವಾಗಿದೆ. ಇದನ್ನು ನಾವು ಪುನರ್ಪರಿಶೀಲನೆ ಮಾಡುತ್ತಿದ್ದೇವೆ. ಈ ಸಮಸ್ಯೆಯನ್ನು ಬಗೆಹರಿಸಲು ಒಂದು ನಿಯಮಯನ್ನು ತರಬೇಕಾಗುತ್ತದೆ. ಹೀಗೆ ಮಾಡಿದರೆ ಮತ್ತೆ ಒಂದು cutoff date ನೀಡಬೇಕಾಗುತ್ತದೆ. ಒಬ್ಬ ಡೆವಲಪರ್ 4 ನಿವೇಶನಗಳನ್ನು ಇಟ್ಟುಕೊಂಡಿರುತ್ತಾನೆ. ಅದರಲ್ಲಿ 2 ನಿವೇಶನಗಳನ್ನು ಇವತ್ತು ಮಾರುತ್ತಾನೆ. ನೀವೇನು ಈಗ ಪ್ರಶ್ನೆ ಕೇಳಿದ್ದೀರೋ ಆ ನಿಟ್ಟಿನಲ್ಲಿ ಸರ್ಕಾರ ಪರಿಷ್ಕರಣೆ ಮಾಡಿದ ನಂತರ ಮತ್ತೆ ತನ್ನ ಹತ್ತಿರ ಇರುವ 2 ನಿವೇಶನಗಳನ್ನು ಒಂದು ವರ್ಷ ಆದಮೇಲೆ ಮಾರುತ್ತಾನೆ. ಅಂದರೆ, ಇಂಥದ್ದಕ್ಕೆ ಕೊನೆಯೇ ಇರುವುದಿಲ್ಲ. ಇಂಥದ್ದು ಬೆಂಗಳೂರಿನ ಸುತ್ತಮುತ್ತ, ಬೆಳಗಾವಿ, ಮಂಗಳೂರು ಇಂತಹ ಕಡೆ ಆಗುತ್ತಿದೆ. ಸ್ವಲ್ಪ ಕಾಲಾವಕಾಶ ಕೊಟ್ಟರೆ ಇಂತಹ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು) :-** ಮಾನ್ಯ ಸಭಾಪತಿಗಳೆ, ತಾವು ಅನುಮತಿ ಕೊಟ್ಟರೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಹತ್ತಾರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಅಕ್ರಮ ಬಡಾವಣೆಗಳನ್ನು ನಿರ್ಮಾಣ ಮಾಡಿಕೊಂಡು ಬಂದಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ, ಪಂಚಾಯತಿಯಲ್ಲಿ ಖಾತೆ ಇರುತ್ತಿರಲಿಲ್ಲ. ಮನೆಯಲ್ಲಿಯೇ ಒಂದು ಹಾಳೆಯಲ್ಲಿ ಕಂಪ್ಯೂಟರ್ ಪ್ರಿಂಟ್ ಔಟ್ ತೆಗೆದು, ಅದರಲ್ಲಿ "ಪಂಚಾಯತಿ ಖಾತೆ" ಎಂದು ಹಾಕುತ್ತಿದ್ದರು ಮತ್ತು ಅದು ನೋಂದಣಿ ಆಗಿ, ಮಾರಾಟ ಆಗುತ್ತಿತ್ತು. ಆ ಬಡಾವಣೆಗಳಿಗೆ ಪಂಚಾಯಿತಿ/ಸರ್ಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡಬೇಕಾಗಿತ್ತು. ಅಕ್ರಮ ಬಡಾವಣೆ ಮಾಡುತ್ತಿದ್ದವರು ಚೆನ್ನಾಗಿ ದುಡ್ಡು ಮಾಡುತ್ತಿದ್ದರು. ಅವರು ದುಡ್ಡು ಮಾಡುವುದರ ಬಗ್ಗೆ ನಮಗೆ ಅಸೂಯೆ ಇಲ್ಲ. ಆದರೆ ಅಲ್ಲಿ ಒಂದೂ ನಿಯಮ ಸಹ ಪಾಲನೆ ಆಗುತ್ತಿರಲಿಲ್ಲ. ರಸ್ತೆ ಇರುತ್ತಿರಲಿಲ್ಲ, C.A. (Civic Amenity) ಇರುತ್ತಿರಲ್ಲ, ಪಾರ್ಕ್‌ಗೆ ಜಾಗ ಇರುತ್ತಿರಲಿಲ್ಲ, ನೀರಿನ ಸೌಲಭ್ಯ, ಒಳಚರಂಡಿ ಇವು ಯಾವುದೂ ಇರುತ್ತಿರಲಿಲ್ಲ. 15-20 ಅಡಿಯ ರಸ್ತೆ ಇರುತ್ತಿತ್ತು. ಕೊನೆಗೆ ಸಾರ್ವಜನಿಕರೇ ಇದಕ್ಕೆಲ್ಲಾ ಬಲಿಯಾಗುತ್ತಿದ್ದರು. ಅಕ್ರಮ ಮಾರ್ಗದ ಮುಖಾಂತರ ಇದೆಲ್ಲ ಆಗುತ್ತಿತ್ತು. ಇಂತಹ ಅಕ್ರಮ ಬಡಾವಣೆಗಳಿಗೆ ನಾವು ಕಡಿವಾಣ ಹಾಕಿದ್ದೇವೆ. ಅಕ್ಟೋಬರ್, 2024ರಿಂದ ಸಂಪೂರ್ಣವಾಗಿ ಅಕ್ರಮ ಬಡಾವಣೆಗಳು ನೋಂದಣಿ ಆಗುವುದನ್ನು 100 ಕ್ಕೆ 99 ಭಾಗ ನಿಲ್ಲಿಸಿದ್ದೇವೆ. ಕೆಲವರು ರಂಗೋಲಿ ಕೆಳಗೆ ನುಗ್ಗುವವರು 1% ಇರಬಹುದು. ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಪ್ರಿಯಾಂಗ್ ಖರ್ಗೆಯವರು, ಸಹಾನುಭೂತಿಯಿಂದ ಪರಿಶೀಲನೆ ಮಾಡೋಣ ಎಂದು ಹೇಳಿದ್ದಾರೆ. ಒಂದು ಬಡಾವಣೆ ಆಗಿಹೋಗಿದೆ, ಆ ಬಡಾವಣೆಯಲ್ಲಿ ಅಕ್ಟೋಬರ್ 2024ಕ್ಕೆ ಮೊದಲು, ಅರ್ಧ ಸೈಟುಗಳು ಮಾರಾಟ ಆಗಿವೆ; ಇನ್ನೂ ಅರ್ಧ ಸೈಟುಗಳು ಹಾಗೆಯೇ ಇವೆ. ಆ ಸೈಟುಗಳಿಗೆ ಯಾವುದೇ ಖಾತಾ ಇಲ್ಲ. ಏಕೆಂದರೆ, ಅವೆಲ್ಲ ಆರ್.ಟಿ.ಸಿ. ಮೇಲೆ ಕುಳಿತಿವೆ. ಇವುಗಳಿಗೆ ಏನಾದರೂ ಒಂದು ಪರಿಹಾರ ಕೊಡಬೇಕು ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಈ ಕುರಿತು ಚರ್ಚೆ ಆಗಿದೆ. ಇದಕ್ಕೆ ಪರಿಹಾರ ಕೊಡಬೇಕಾದರೆ ಅಸಾಧಾರಣ ಹೆಜ್ಜೆ ಇಡಬೇಕಾಗುತ್ತದೆ. ಒಬ್ಬರು 2 ಎಕರೆ

ಬಡಾವಣೆ ಮಾಡಿ, 60 ನಿವೇಶನಗಳನ್ನು ಮಾಡಿರುತ್ತಾರೆ. ಇದರಲ್ಲಿ 20-30 ನಿವೇಶನಗಳು ಮಾರಾಟವಾಗಿರುತ್ತವೆ ಮತ್ತು ಮಿಕ್ಕ ನಿವೇಶನಗಳು ಡೆವಲಪರ್ ಹತ್ತಿರವೇ ಉಳಿದುಕೊಂಡಿರುತ್ತವೆ. ಆ ನಿವೇಶನಗಳಿಗೆ ಯಾವುದೇ ಖಾತೆ ಇರುವುದಿಲ್ಲ. ಆ ನಿವೇಶನಗಳನ್ನು ಈಗ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಿ ಎಂದು ತಾವು ಕೇಳುತ್ತಿದ್ದೀರಿ. ಒಂದು ವಿಚಾರ ಏನು ಮಾಡಬಹುದು ಎಂದರೆ, ಬಹುಶಃ ಈ forum ನಲ್ಲಿ ಹೇಳುವಂತಹ ವಿಷಯವಲ್ಲ, ಏಕೆಂದರೆ ಕಾನೂನಿನಲ್ಲಿ ಇದಕ್ಕೆ ಅವಕಾಶ ಇಲ್ಲ. ಅಕ್ರಮ ನಿವೇಶನಗಳನ್ನು ಮಾರಲು ಅವಕಾಶ ಕೊಡುತ್ತೇನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಉಳಿದಿರುವ ಆ 30 ನಿವೇಶನಗಳಿಗೆ plan approval ಗೆ submit ಮಾಡಿ, plan approval ತೆಗೆದುಕೊಂಡು ಆ ನಂತರ ಮಾರಾಟ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಗುತ್ತದೆಯೇ ಎಂದು ವಿಚಾರ ಮಾಡಬಹುದು. ಈ ಕುರಿತು ಚರ್ಚೆ ಕೂಡ ಆಗಿದೆ. ನಾನು ರಿಪೀಟ್ ಮಾಡುತ್ತೇನೆ. ಉಳಿದಿರುವ ನಿವೇಶನಗಳಿಗೆ ಸಂಬಂಧಪಟ್ಟಂತೆ plan approval ಗೆ submit ಮಾಡಿ, ಅಲ್ಲಿ civic amenity, park ಅಷ್ಟಕ್ಕೆ apply ಮಾಡಿ, road width ಗೆ ಒಂದು ವಿನಾಯಿತಿಯನ್ನು ಕೊಡಬೇಕಾಬಹುದು. ಅದನ್ನು ಕೊಟ್ಟು plan approval ಕೊಡುವುದಕ್ಕೆ ಆಗುತ್ತದೆ ಎನ್ನುವುದನ್ನು ನೋಡಬೇಕು. ಇದನ್ನು town planning department ನವರು ಮಾಡಬೇಕು. ಆರ್.ಡಿ.ಪಿ.ಆರ್. ಸಚಿವರಿಗೂ ಈ ಕುರಿತು ತೀರ್ಮಾನ ಮಾಡಲು ಕಷ್ಟವಾಗಬಹುದು. ಆರ್.ಡಿ.ಪಿ.ಆರ್. ನವರು, Urban Development Department ನವರು ಕುಳಿತುಕೊಂಡು Country and Town Planning department ಅವರ ಹತ್ತಿರ ಮಾತಾಡಿ ಅಲ್ಲಿಂದ ಏನಾದರೂ ಇಂತಹ case ಗೆ specifically modified plan ಕೊಡುವುದಕ್ಕೆ ಆಗುತ್ತದೆಯೇ ಎನ್ನುವುದರ ಬಗ್ಗೆ ವಿಚಾರ ಮಾಡಬಹುದು. ಇದನ್ನು ಮಾನ್ಯ ಸಚಿವರ ಹತ್ತಿರ ಬೇರೆ ಸಂದರ್ಭದಲ್ಲಿ ಮಾತನಾಡುತ್ತೇನೆ.

**ಶ್ರೀ ಹೆಚ್.ಎಸ್.ಗೋಪಿನಾಥ್:-** ಮಾನ್ಯ ಸಭಾಪತಿಗಳೆ, ನಾನು ಹೇಳಿದ್ದು ಏನೆಂದರೆ, ಒಂದೇ ಕಡೆ ನಿವೇಶನಗಳಿದ್ದು ಅದರಲ್ಲಿ ಕೆಲವನ್ನು ಮಾರಿ, ಕೆಲವನ್ನು ಮಾರದೇ ಇದ್ದಾಗ ಹಾಗೆ ಮಾಡಬಹುದು. Fragmented ಇದ್ದಾಗ ಹೇಗೆ plan sanction ಮಾಡುವುದಕ್ಕಾಗುತ್ತದೆ?

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಗಳೆ, ಕಾನೂನಿನ ಪ್ರಕಾರ ನೋಡಿದರೆ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಇಲ್ಲ. ಏಕೆಂದರೆ ಇಲ್ಲಿ ನಡೆದಿರುವಂಥದ್ದೇ ಅಕ್ರಮ. ಅಕ್ರಮ ಬಡಾವಣೆಯಲ್ಲಿ ಜಾಗ ಉಳಿಸಿಕೊಂಡಿದ್ದರೆ single plot approval ಗೆ ಹೋಗಬಹುದು. ಆದರೆ ನೀವು, ಆ ಜಾಗ ಬೇರೆ ಬೇರೆ ಲೊಕೇಷನ್‌ನಲ್ಲಿ ಇರುತ್ತದೆ ಎಂದು ಹೇಳುತ್ತಿದ್ದೀರಿ. ಇದು ಆಗಲೇ ಬೇಕು ಎನ್ನುವುದಾದರೆ ನಾವು ಏನಾದರೂ ಪರಿಹಾರ ಕೊಡಬೇಕಾಗುತ್ತದೆ. Actually, they do not deserve. Because, they have made illegal layouts. They are punishable under law. Under Section 96(2) of Karnataka Land Revenue Act, their land may be forfeited to the Government. Law is very clear. ಈಗ ಅದು ಬೇಡ. ಪರಿಹಾರ ಕೊಡಬೇಕು ಎಂದರೆ ಅವರೂ ಕೂಡ ಅರ್ಧ compromise ಆಗಬೇಕಾಗುತ್ತದೆ. ಸರ್ಕಾರ ಇಂತಹ

ಸ್ಥಿತಿಯಲ್ಲಿರುವವರಿಗೆ ಒಂದು outlet ಕೊಡುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾವು ಸಹ extreme ಹಂತಕ್ಕೆ ಹೋಗಿ ವಿಚಾರ ಮಾಡಬೇಕಾಗುತ್ತದೆ. ನಮಗೂ ಅದು ಸಲೀಸಾದ ತೀರ್ಮಾನವಾಗುವುದಿಲ್ಲ. ಸಕ್ರಮವಾಗಿ ಬುದುಕುವವರಿಗೆ ನಾವೇನೂ ಸಹಾಯ ಮಾಡುವುದಿಲ್ಲ. ಎಲ್ಲ ಕಾನೂನಿನ ಹೊರೆಯನ್ನು ಸಕ್ರಮವಾಗಿ ಬುದುಕುವವರೆ ಹೊತ್ತಿರುತ್ತಾರೆ. ಅಕ್ರಮ ಮಾಡಿದವರಿಗೆ ಒಂದೊಂದು ಅವಕಾಶ ಕೊಟ್ಟರೆ ಅದಕ್ಕೆ ಕೊನೆ ಎಲ್ಲಿ? ಆದರೆ ಈ transition ನಲ್ಲಿ ಕೆಲವರು ಸಿಕ್ಕಿ ಹಾಕಿಕೊಂಡಿದ್ದಾರೆ, ಅಂಥವರಿಗೆ ಪರಿಹಾರ ಕೊಡಿ ಎಂದು ಹೇಳುತ್ತಿದ್ದೀರಿ. ಈ ನಿಟ್ಟಿನಲ್ಲಿ ನಾನು ಒಂದು ಸಲಹೆ ಕೊಟ್ಟಿದ್ದೇನೆ. ಅದು ಬಿಟ್ಟು ಬೇರೆ ಏನಾದರೂ ಮಾರ್ಗಗಳಿದ್ದರೆ ಮಾನ್ಯ ಸದಸ್ಯರು ಹೇಳಬಹುದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಗಳೆ, ನಮ್ಮ Revenue Minister ಅವರು ಹೇಳುತ್ತಿರುವುದು ಸರಿಯಿದೆ. 10 ನಿವೇಶನಗಳನ್ನು ಇಟ್ಟುಕೊಂಡಿರುವವರು ಈಗ 5 ನಿವೇಶನಗಳನ್ನು ಮಾರಾಟ ಮಾಡುತ್ತಾರೆ, ಮುಂದಿನ ವರ್ಷ ಮತ್ತೆ 5 ನಿವೇಶನಗಳನ್ನು ಮಾರುತ್ತಾರೆ. ಆಗ ಏನು ಮಾಡಬೇಕು? Where is the end for this? As of now there is no provision. ಇದಕ್ಕೋಸ್ಕರವೇ unified land management system ನಲ್ಲಿ ತಂದು, ತೆರಿಗೆಗೆ ಅನೂಕೂಲವಾಗಲಿ ಎಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದರೆ, we cannot punish good citizens. ಯಾರು ಒಳ್ಳೆಯ ನಾಗರಿಕರಿದ್ದಾರೋ, ತೆರಿಗೆಯನ್ನು ಕಟ್ಟುತ್ತಿದ್ದಾರೋ ಅವರಿಗೆ ಅನ್ಯಾಯವಾಗಬಾರದು. ಮಾನ್ಯ ಸದಸ್ಯರು ಬೇರೆ ಏನಾದರೂ ಸಲಹೆ ಇದ್ದರೆ ಕೊಡಲಿ. ಅದನ್ನು ನಾವು ಸಕಾರಾತ್ಮಕವಾಗಿ ಸ್ವೀಕಾರ ಮಾಡುತ್ತೇವೆ. ಮಾನ್ಯ ಕೃಷ್ಣ ಭೈರೇಗೌಡರು ಹೇಳಿದ ಹಾಗೆ, ಅದು ಒಂದು outlet ಇರಬಹುದು, ಅಥವಾ guidance value ಜಾಸ್ತಿ ಮಾಡಿ ಅವರಿಗೆ ಫೈನ್ ಹಾಕುವುದೋ, ನಾಲ್ಕು ಪಟ್ಟು ಜಾಸ್ತಿ ಮಾಡುವುದೋ ಎನ್ನುವುದರ ಬಗ್ಗೆ ಚರ್ಚೆ ಆಗಿದೆ.

(ಮುಂದು)

(367) 13-3-2026 10.30 ಡಿಎಸ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿ ಕೊಂಡಿರುವವರಿಗೆ ಎಂದು ಅವರು ಹೇಳುತ್ತಾರೆ. ಬ್ಲಾಕ್, ವೈಟ್ ಇವರೆಡೇ ಇದ್ದರೆ ಕಾನೂನು ಇಂಪ್ಲಿಮೆಂಟೇಷನ್ ಆಗುತ್ತದೆ. ಆದರೆ, ನಾವು ಮಧ್ಯೆ ಕಲರ್ಸ್ ಕೊಟ್ಟರೆ ನಮ್ಮಲ್ಲಿ ಏನೆಲ್ಲಾ ದುರುಪಯೋಗ ಮಾಡುತ್ತಾರೆ ಎಂಬುದು ಅವರಿಗೂ ಚೆನ್ನಾಗಿ ಗೊತ್ತಿದೆ. ನನಗಿಂತ ಅವರಿಗೆ ಚೆನ್ನಾಗಿ ಅನುಭವ ಇದೆ. ಅದರ ಹೆಸರಿನಲ್ಲಿ ಹೊಸ ಬಡಾವಣೆಗಳು ಮತ್ತೆ ಪ್ರಾರಂಭವಾಗುತ್ತವೆ.

**ಶ್ರೀ ಹೆಚ್. ಎಸ್.ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ಈ ಸೆಂಟ್ರಲ್‌ನಲ್ಲಿ ಇರುವುದಕ್ಕೆ ಏನಾದರೊಂದು ಪರಿಹಾರ ಕೊಡಬೇಕೆಂದು ನಾನು ಕೇಳುತ್ತಿದ್ದೇನೆ. ಸೆಂಟ್ರಲ್‌ನಲ್ಲಿ ಇರುವುದಕ್ಕೆ ಅಷ್ಟೆ ನಾನು ಕೇಳುತ್ತಿದ್ದೇನೆ. ಅವರು ಹೊಸದಾಗಿ ಏನು ಮಾಡುವುದಿಲ್ಲವಲ್ಲಾ?

**ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಿಗೆ ಏನಾದರೂ ಪರಿಹಾರ ತಿಳಿದಿದ್ದರೆ ಹೇಳಲಿ, we will definitely try and implement it. ನಾವು, ನಗರಾಭಿವೃದ್ಧಿ ಇಲಾಖೆಯವರು ಸೇರಿ ಮಾತನಾಡುತ್ತೇವೆ. ಅವರು ಹೇಳಿದ ಹಾಗೆ ಇದನ್ನು ಯಾರು ಕೇಳಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ನಾವೇ ತಿಳಿದುಕೊಂಡು ಬಡವರಿಗೆ ಅನಾನುಕೂಲವಾಗಬಾರದು ಎಂದು ಸುಮಾರು ಒಂದು ಕೋಟಿ ರೂಪಾಯಿಗಳ ಆಸ್ತಿಗಳನ್ನು ನಾವು ತೆರಿಗೆ ವ್ಯಾಪ್ತಿಯಲ್ಲಿ ತರುತ್ತಿದ್ದೇವೆ. ಹಿಂದೆ ಎಂದೂ ಆಗಿಲ್ಲ. ಈಗ ಅವರಿಗೂ ದಾಖಲೆಗಳು ಸಿಕ್ಕಿತು, ಅವರಿಗೆ ಅಧಿಕೃತವಾಗಿ ಸರ್ಕಾರದ ಸೌಲಭ್ಯಗಳು ಸಿಗಬಹುದು, they can claim everything. But, as I said earlier, this is a grey area. So, if he has solution, we are more than happy to accept it.

**ಶ್ರೀ ಹೆಚ್.ಎಸ್.ಗೋಪಿನಾಥ್:-** ಮಾನ್ಯ ಸಭಾಪತಿಯವರೇ, ಪಂಚಾಯಿತಿಗೆ ಅಧಿಕಾರ ಕೊಟ್ಟು ಇನ್ಸ್‌ಪೆಕ್ಷನ್ ಮಾಡಿ detag ಮಾಡಿಕೊಡಬಹುದೇ ಎಂದು ನಾನು ಕೇಳುತ್ತಿದ್ದೇನೆ. ಸೆಂಟ್ರಲ್‌ನಲ್ಲಿ ಇರುವುದಕ್ಕೆ ಏನಾದರೂ ಮಾಡಬೇಕಲ್ಲವೇ ಎಂದು ನಾನು ಕೇಳುತ್ತಿದ್ದೇನೆ.

**ಶ್ರೀ ಪ್ರಿಯಾಂಕ್ ಖರ್ಗೆ:-** ಕೇಳಿದ್ದೇ ಕೇಳುತ್ತಿದ್ದೀರಿ. ಏನು ಮಾಡಬೇಕು ಎಂಬುದನ್ನು ಹೇಳಿ?

ಪ್ರಶ್ನೆ ಸಂಖ್ಯೆ: 1290

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

**ಪ್ರಶ್ನೆ ಸಂಖ್ಯೆ: 1302**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)(ಶ್ರೀ ಪಿ.ಹೆಚ್.ಪೂಜಾರ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆ ಮತ್ತು ಇತರೆ ಜಿಲ್ಲೆಗಳಲ್ಲಿ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಒಟ್ಟು ಜನಸಂಖ್ಯೆ 90,192 ಇದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಅವರಿಗೆ ಎಷ್ಟು ಮನೆಗಳನ್ನು ಕೊಟ್ಟಿದ್ದಾರೆ?

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:- (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಉತ್ತರದಲ್ಲಿ ಕೊಟ್ಟಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಅಷ್ಟು ಮನೆಗಳನ್ನು ಕೊಟ್ಟಿದ್ದೀರಾ?

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 115 ಮನೆಗಳನ್ನು ಮಂಜೂರು ಮಾಡಿದ್ದೇವೆ. ಈ ಪೈಕಿ ಒಟ್ಟು 86 ಮನೆಗಳು ಪೂರ್ಣಗೊಂಡಿದ್ದು, 11 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, 05 ಮನೆಗಳ ನಿರ್ಮಾಣ ಕಾಮಗಾರಿ ಪ್ರಾರಂಭಿಸಬೇಕಿದ್ದು, ಇನ್ನುಳಿದಂತೆ 13 ಮನೆಗಳನ್ನು ರದ್ದುಪಡಿಸಲಾಗಿದೆ. ಅಂದರೆ, ಅವರು ಸರಿಯಾದ ದಾಖಲೆಗಳನ್ನು ಕೊಡದಿರುವುದಕ್ಕೆ ರದ್ದುಪಡಿಸಲಾಗಿದೆ. ನಿಜವಾಗಿಯೂ ಅಲೆಮಾರಿಗಳು ಬೇರೆ ಬೇರೆ ಜಿಲ್ಲೆಗಳಲ್ಲೂ ಜಾಸ್ತಿ ಇದ್ದಾರೆ. ಇದನ್ನು ನಾವು 2007-08ರಲ್ಲಿ ಮಾಡಿರುವಂತಹ ಯೋಜನೆಯಾಗಿದೆ. ಅವತ್ತಿನ ಅವಧಿಯಲ್ಲಿ 1,25,000 ರೂಪಾಯಿಗಳನ್ನು ಒಂದು ಮನೆ ಕಟ್ಟುವುದಕ್ಕೆ ನಾವು ಹಣವನ್ನು ಇಟ್ಟಿದ್ದೆವು. ಹೀಗಾಗಿ ಅವತ್ತು ಯಾವ ಅಲೆಮಾರಿಗಳು ಅರ್ಜಿಯನ್ನು ಹಾಕುವಂತಹ ಪರಿಸ್ಥಿತಿಗೆ ಬರಲಿಲ್ಲ. 54 ಕೋಟಿ ರೂಪಾಯಿಗಳು ಇನ್ನು ವಸತಿ ಇಲಾಖೆಯಲ್ಲಿ ನಮ್ಮ ಹಣ ಇದೆ. ಅದಕ್ಕೆ ನಾನು ಆರ್ಥಿಕ ಇಲಾಖೆಯವರಿಗೆ 2-3 ಸಲ ಕಡತವನ್ನು ಕಳುಹಿಸಿದ್ದೇನೆ. ಒಂದು ಮನೆ ಕಟ್ಟುವುದಕ್ಕೆ ಕನಿಷ್ಠ ಮೂರು-ಮೂರೂವರೆ ಲಕ್ಷ ರೂಪಾಯಿಗಳನ್ನಾದರೂ ನಿಗದಿ ಮಾಡಬೇಕೆಂದು ಕೇಳಿದ್ದೇವೆ. ಈ ಸಲ ತುಮಕೂರು ಜಿಲ್ಲೆಯಲ್ಲಿ ಶಿರಾ, ಕೊಪ್ಪಳ ಜಿಲ್ಲೆ, ಚಿತ್ರದುರ್ಗ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಅಂದರೆ ಈ ಸಲ model ಆಗಿ ಮನೆಯನ್ನು ಕಟ್ಟಿಸಬೇಕೆಂದು ನಿರ್ಮಿತಿ ಕೇಂದ್ರದಿಂದ ಅದನ್ನು ಮಾಡಿ ಆರ್ಥಿಕ ಇಲಾಖೆಯಿಂದ ಅನುಮೋದನೆ ತೆಗೆದುಕೊಂಡು ಒಂದು ಹೊಸ model ನಲ್ಲಿ ಕಟ್ಟಿಸುವಂಥ ನಿರ್ಧಾರಕ್ಕೆ ಈ ವರ್ಷ ಕಾಲಿಟ್ಟಿದ್ದೇವೆ. ಮುಂದಿನ ಅವಧಿಯಲ್ಲಿ ಬಾಗಲಕೋಟೆ ಜಿಲ್ಲೆಯನ್ನು ತೆಗೆದುಕೊಳ್ಳುವಂಥ ಕೆಲಸ ಮಾಡುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಬಾದಾಮಿ, ಬಾಗಲಕೋಟೆ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ ಇವೆಲ್ಲಾ ಸೇರಿದರೆ ಒಟ್ಟು ಅವರ ಜನಸಂಖ್ಯೆ 90,192 ಇದೆ. ಅದರಲ್ಲಿ 115 ಮನೆಗಳನ್ನು ಕೊಟ್ಟಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇಷ್ಟು ಮನೆಗಳನ್ನು ಕೊಟ್ಟಿದ್ದಾರೆ, ಉಳಿದವರೆಲ್ಲಾ ಎಲ್ಲಿ ಹೋಗಬೇಕು? ಮಾನ್ಯ ಸಚಿವರಿಗಂತೂ ಈ ವಿಷಯದ ಬಗ್ಗೆ ಜಾಗೃತಿ ಇದೆ. ಮಾನ್ಯ ಸಚಿವರು ಆ ಸಮುದಾಯದಿಂದ ಬಂದಿಲ್ಲದಿದ್ದರೂ ಆ ಸಮುದಾಯಗಳ ಕಷ್ಟ-ಸುಖಗಳ ಬಗ್ಗೆ ಚೆನ್ನಾಗಿ ಗೊತ್ತಿರತಕ್ಕಂಥವರು. 90,000 ಜನಸಂಖ್ಯೆ ಎಂದರೆ ಒಂದು ಲಕ್ಷ ಜನಸಂಖ್ಯೆ ಇದ್ದಾರೆ. ಅಲೆಮಾರಿ/ಅರೆ ಅಲೆಮಾರಿ ಜನಾಂಗದವರು ಜಾಸ್ತಿ ಇರತಕ್ಕಂಥ ಜಿಲ್ಲೆಗಳಲ್ಲಿ ಬಾಗಲಕೋಟೆ ಜಿಲ್ಲೆಯು ಒಂದಾಗಿದೆ. ಆ ಜಿಲ್ಲೆಯಲ್ಲಿ ಸುಮಾರು 18 ಜಾತಿಯವರಿದ್ದಾರೆ. ಹಾಗಾಗಿ ಉದಾಹರಣೆಗೆ, ಅಲ್ಲಿ ಮಕ್ಕಳು ಓದತಕ್ಕಂಥವರಿಗೆ ವಿದ್ಯಾರ್ಥಿ ವೇತನ, ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯವೇನು? ಅವರಿಗೆ ಮನೆಗಳನ್ನು ಯಾವಾಗ ಕೊಡುತ್ತಾರೆ, ಏನಾದರೂ ಸರ್ವೆ ಆಗಿದೆಯೇ?

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಸರ್ವೆ ಆಗಿಲ್ಲ. ನಾವು ಕಾಂತರಾಜು ವರದಿಯನ್ನು ಸರ್ಕಾರಕ್ಕೆ ಕೊಟ್ಟರೆ ಅದನ್ನು ಅಕ್ಸೆಪ್ಟ್ ಮಾಡಿಕೊಳ್ಳಲಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕಾಂತರಾಜು ವರದಿಯನ್ನು ಅವರು ಗಾಳಿಗೆ ತೂರಿಬಿಟ್ಟರು.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಗಾಳಿಗೆ ತೂರಲಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕಾಂತರಾಜು ವರದಿಯನ್ನು ಎಲ್ಲಿ ಅನುಷ್ಠಾನ ಮಾಡಿದ್ದಾರೆ? ದೆಹಲಿಗೆ ಹೋಗಿ ಬಂದು ನಂತರ ಕಾಂತರಾಜು ವರದಿ ಇಲ್ಲ ಎಂದು ಹೇಳಿಬಿಟ್ಟರು.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಇವರು ಈ ರೀತಿ ಮಾತನಾಡಿದರೆ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾಗುತ್ತದೆ. ಏಕೆಂದರೆ 3-4 ವರ್ಷ ಇವರ ಸರ್ಕಾರವೇ ಇತ್ತು, ಇವರೇನು ಮಾಡಿದರು?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ಆಗಲಿಲ್ಲ, ಈಗ ಅವರನ್ನು ಆಯ್ಕೆ ಮಾಡಿದ್ದಾರೆ, ಅವರು ಏನು ಮಾಡಿದ್ದಾರೆ?

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಅವರು ಹಿಂದಕ್ಕೆ ಹೋದರೆ ನಾನು ಹಿಂದಕ್ಕೆ ಹೋಗಿ ಮಾತನಾಡಬೇಕಾಗುತ್ತದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯಿಂದ ಆಗಲಿಲ್ಲ, ಅವರು ಮಾಡುತ್ತಾರೆಂದು ಜನರು ಅವರಿಗೆ ಚಾನ್ಸ್ ಕೊಟ್ಟಿದ್ದಾರೆ. ಅವರು ಏನು ಮಾಡಿದ್ದಾರೆ?

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಹತ್ತು ವರ್ಷ ಆಗಿರುವುದರಿಂದ ಅದನ್ನು ಬಿಟ್ಟು ಮತ್ತೆ ಈಗ ನಾಯಕ್‌ರವರ ವರದಿಯನ್ನು ರೆಡಿ ಮಾಡುತ್ತಿದ್ದೇವೆ. ಅದು ರೆಡಿಯಾಗುತ್ತಿದೆ. ಈಗಾಗಲೇ ಸರ್ವೆ ಪೂರ್ಣಗೊಂಡಿದೆ. ಹತ್ತು ವರ್ಷಗಳಾದ ಮೇಲೆ ಮಾಡುವುದಕ್ಕೆ ಬರುವುದಿಲ್ಲವೆಂದು ಕಾನೂನಿನಲ್ಲೇ ಇದೆ. ಅಲೆಮಾರಿಗಳು ಯಾವ ಜಿಲ್ಲೆಯಲ್ಲಿ ಎಷ್ಟು ಇದ್ದಾರೆ ಎಂಬ ಅಂಕಿ-ಅಂಶಗಳಿಲ್ಲ. ಆದರೆ, ಅವರು ಎಲ್ಲೆಲ್ಲಿ ಇದ್ದಾರೆ ಎಂಬ ಮಾಹಿತಿ ಇದೆ. ಅದಕ್ಕೆ ಈ ವರ್ಷ ನಾವು ಏನು ಮಾಡಿದ್ದೇವೆಂದರೆ, 4 ಜಿಲ್ಲೆಗಳಲ್ಲಿ ಒಂದೊಂದು ಊರನ್ನು ಆಯ್ಕೆ ಮಾಡಿಕೊಂಡು ಮನೆ ಕಟ್ಟುತ್ತೇವೆ. ಹಿಂದೆ ಇದು ವಿಫಲವಾಗಿದೆ. ಇದು 2007-2008 ರಲ್ಲಿ ಪೂರ್ಣ ಪ್ರಮಾಣದಲ್ಲಿ ಸರಿಯಾದ ರೀತಿಯಲ್ಲಿ ಆಗಲಿಲ್ಲ. ಆ ದೃಷ್ಟಿಕೋನವನ್ನಿಟ್ಟುಕೊಂಡು 4 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಈಗ ಶಿರಾ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಊರನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಹೆಚ್ಚು ಅಲೆಮಾರಿಗಳು ಎಲ್ಲಿದ್ದಾರೆ ಅಲ್ಲಿ ಆಯ್ಕೆ ಮಾಡಿಕೊಂಡು ಅಲ್ಲೇ ಮನೆ ಕಟ್ಟುವುದರ ಜೊತೆಗೆ ಕಾಂಪೌಂಡ್ ಹಾಕಿ ಅವರು ತಮ್ಮ ಹಸು, ದನ, ಮೇಕೆಗಳನ್ನು ಸಾಕುವಂತಹ ವ್ಯವಸ್ಥೆ ಮಾಡುವ ದೃಷ್ಟಿಕೋನವನ್ನಿಟ್ಟುಕೊಂಡು ಈ ಸಲ ಈ ಯೋಜನೆಯನ್ನು ಬಹಳ ಪರಿಣಾಮಕಾರಿಯಾಗಿ ಮಾಡಬೇಕೆಂದು ಮಾಡಿದ್ದೇವೆ. ಬಾಗಲಕೋಟೆ ಜಿಲ್ಲೆಯವರಿಗೆ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ 4 ಜಿಲ್ಲೆಗಳಲ್ಲಿ ಒಂದೊಂದು ಊರನ್ನು model ಆಗಿ ಆಯ್ಕೆ ಮಾಡಿಕೊಂಡಿದ್ದೇವೆ. ಏಕೆಂದರೆ, ನಮ್ಮ ಬಜೆಟ್ ಇತಿಮಿತಿಯೊಳಗೆ ನಾವು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯನ್ನಿಟ್ಟುಕೊಂಡು ಆಯ್ಕೆ ಮಾಡಿಕೊಂಡಿದ್ದೇವೆ. ಮುಂದಿನ ದಿನಮಾನಗಳಲ್ಲಿ ಬಾಗಲಕೋಟೆ ಜಿಲ್ಲೆ, ನಾನು ಹುಟ್ಟಿ ಬೆಳೆದಂತಹ ಜಿಲ್ಲೆ, ತಾವು ಹುಟ್ಟಿ ಬೆಳೆದಂತಹ ಜಿಲ್ಲೆ, ಆ ಜಿಲ್ಲೆ ಬಗ್ಗೆ ನನಗೂ ಕಾಳಜಿ ಇದೆ, ಮುಂದಿನ ದಿನಮಾನಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ಜನ ಅಲೆಮಾರಿಗಳಿದ್ದಾರೆ ಎಂದು ಗುರ್ತಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮುಧೋಳವನ್ನು ತೆಗೆದುಕೊಳ್ಳಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಮುಧೋಳವನ್ನು ತೆಗೆದುಕೊಳ್ಳುತ್ತೇವೆ. ಈ ನಾಲ್ಕು ಜಿಲ್ಲೆಗಳಾದ ಮೇಲೆ ಮುಂದಿನ ದಿನಮಾನಗಳಲ್ಲಿ ಆ ಪ್ರಯತ್ನ ಮಾಡುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನೀವು ಅದೇ ಜಿಲ್ಲೆಯವರು ಎಂದು ಹೇಳಿದ್ದಕ್ಕೆ ನಾನು ಈಗ ಜಾಸ್ತಿ ಪ್ರಶ್ನೆ ಕೇಳಬೇಕಾಯಿತು. ಅಲೆಮಾರಿ/ಅರೆ ಅಲೆಮಾರಿಗಳಿಗೆ ಈಗಾಗಲೇ ಅನ್ಯಾಯವಾಗಿದೆ. ಯಾವ ರೀತಿ ಅನ್ಯಾಯವಾಗಿದೆ ಎಂದು ನಾನು ಇತಿಹಾಸಕ್ಕೆ ಹೋಗುವುದಿಲ್ಲ. ಅದಕ್ಕೆ ಈ ವಿಷಯದಲ್ಲಿ ನನಗನಿಸುವುದೇನೆಂದರೆ, ಮಾನವೀಯತೆ ದೃಷ್ಟಿಯಿಂದ ಇದರ ಬಗ್ಗೆ ರಾಜ್ಯಾದ್ಯಂತ ಯಾವ ಜಿಲ್ಲೆಯಲ್ಲಿ ಎಷ್ಟು ಜನಸಂಖ್ಯೆ ಇದೆ ಎಂದು ಸರ್ವೆ ಮಾಡಿ ಆದಷ್ಟು ಬೇಗ ಎಲ್ಲರಿಗೂ ಮನೆ ಸಿಗುವ ರೀತಿಯಲ್ಲಿ ಸರಿಯಾದ ನಾಗರಿಕ ಸೌಲಭ್ಯಗಳು ಸಿಗುವಂತಹ ರೀತಿಯಲ್ಲಿ ಮಾಡಲಿ. ಏಕೆಂದರೆ, ಈ ವಿಷಯದಲ್ಲಿ ಮಾನ್ಯ ಸಚಿವರಿಗೆ ಜಾಗೃತಿ ಇದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಶೇಷವಾಗಿ ಕಾಳಜಿ ಮಾಡಿದ್ದಾರೆ. ನನಗೂ ಅದರ ಕಮಿಟ್‌ಮೆಂಟ್ ಇದೆ. ಮುಂದಿನ ದಿನಮಾನಗಳಲ್ಲಿ ಸರ್ವೆ ಮಾಡಿ ಪೂರ್ಣ ಮಾಹಿತಿ ತೆಗೆದುಕೊಳ್ಳುತ್ತೇನೆ. ಇದು ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ವಿಶೇಷವಾದಂತಹ ಅವಶ್ಯಕತೆ ಇದೆ. ಅವರಿಗೆ ಕೊಡಬೇಕಾಗಿದೆ. ಏಕೆಂದರೆ ಅವರು ದಿನಾ ಬೇರೆ ಬೇರೆ ಊರುಗಳಿಗೆ ಹೋಗಿ ಜೀವನ ಮಾಡುತ್ತಿದ್ದಾರೆ. ಅವರಿಗೆ ಸರಿಯಾದ ಮನೆಯನ್ನು ಕೊಡುವಂತಹ ಕೆಲಸ ಮಾಡುತ್ತೇವೆ

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಒಂದು ಗಂಟೆ ಸಮಯ ಮಾನ್ಯ ಸಚಿವರು ಮಾತುಕತೆಗೆ ಕರೆಯಲಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ:-** ಮಾನ್ಯ ಸಭಾಪತಿಯವರೇ, ಆಯಿತು, ಅವರನ್ನು ಕರೆದು ಮಾತನಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 1145**

**(ಉತ್ತರ ಲಗತ್ತಿಸಲಾಗಿದೆ)**

**ಡಾ॥ ಎಂ.ಜಿ.ಮುಳೆ (ವಿಧಾನ ಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ, ಆದರೆ ಅದು ಸಮಾಧಾನಕರವಾಗಿಲ್ಲ. ಮೆಟ್ರಿಕ್ ಪೂರ್ವದಲ್ಲಿ ಒಟ್ಟು 38 ವಿದ್ಯಾರ್ಥಿನಿಲಯಗಳಿವೆ.

(ಮುಂದು)

**(368) 13/03/2026 10:40 ಎಸ್‌ಪಿಆರ್/ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಡಾ॥ ಎಂ.ಜಿ.ಮುಳೆ (ಮುಂದು):-**

ಬಾಡಿಗೆ ಕಟ್ಟಡಗಳಲ್ಲಿ 7 ಹಾಸ್ಟೆಲ್‌ಗಳಿವೆ. ಅದೇ ಪ್ರಕಾರವಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ 8 ಬಾಡಿಗೆಯಲ್ಲಿವೆ. ಸರ್ಕಾರವು ಲಿಖಿತ ಉತ್ತರದಲ್ಲಿ ಉಚಿತ ಎಂದು ತಿಳಿಸಿದ್ದು ಇದು temporary ಅಥವಾ ಪೂರ್ಣಾವಧಿಯವರೆಗೆ ಅವರು ದಾನ ನೀಡಿದ್ದಾರೆಯೇ? ಹೀಗಾಗಿ ಉಚಿತ ಎನ್ನುವುದು ಸ್ಪಷ್ಟವಾಗಿಲ್ಲ. ಹೊಸ ಕಟ್ಟಡಗಳು ಪ್ರಗತಿಯಲ್ಲಿವೆ ಎಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದ್ದು, ಇವುಗಳ ಪ್ರಗತಿಯ ವಿವರವನ್ನು ನೋಡಿದ್ದೇವೆ. ಆಡಳಿತಾತ್ಮಕ ಅನುಮೋದನೆ ದೊರೆತಿದೆ, ಎಂದರೆ, ಇನ್ನೂ ಕೆಲಸವು ಪ್ರಾರಂಭವಾಗಿರುವುದಿಲ್ಲ. 2022 ನೇ ಇಸ್ವಿಯಲ್ಲಿ ದುರಸ್ತಿಗಾಗಿ ಅವರಿಗೆ ಅನುದಾನವು ಬಿಡುಗಡೆಯಾಗಿದೆ. ಆದರೆ, ಇದು ಇನ್ನೂ ಅರ್ಥ ಸಹಿತ ಪ್ರಾರಂಭವಾಗಿಲ್ಲ. ಆದರೆ, ಅನುದಾನಗಳು ಬಿಡುಗಡೆಗೊಂಡಿವೆ. ಅಲ್ಲಿ K.R.I.D.L. (Karnataka Rural Infrastructure Development Limited) ಎಂಬ ಸರ್ಕಾರಿ ಏಜೆನ್ಸಿಯು ಇದೆ. ನಾಲ್ಕು ವರ್ಷಗಳಾದರೂ ಸಹ ಅಲ್ಲಿನ 37 ವಿದ್ಯಾರ್ಥಿನಿಲಯಗಳ ಕೆಲಸ ಇನ್ನೂ ಪ್ರಾರಂಭಗೊಂಡಿರುವುದಿಲ್ಲ. ಹೀಗಾಗಿ ಅಲ್ಲಿನ ವಿದ್ಯಾರ್ಥಿಗಳ ಪರಿಸ್ಥಿತಿ ಏನು?

**ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೆ, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಒಟ್ಟು 38 ಇದ್ದು, ಆ ಪೈಕಿ 30 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿದ್ದು, 7 ಬಾಡಿಗೆ ಕಟ್ಟಡದಲ್ಲಿವೆ. ಇಲ್ಲಿ ಉಚಿತ ಎಂದು ತಿಳಿಸಿದ್ದು, ಉಚಿತ ಎಂದರೆ, ಈಗಾಗಲೇ ಅಲ್ಲಿ ಹಾಸ್ಟೆಲ್ ಇದೆ. ಡಿಪ್ಲೋಮಾ ಮತ್ತು ಇಂಜನಿಯರಿಂಗ್ ಕಾಲೇಜುಗಳೊಳಗೆ ಹಾಸ್ಟೆಲ್‌ಗಳು ಇರುತ್ತವೆ. ಇವುಗಳನ್ನು ನಾವು ತೆಗೆದುಕೊಂಡು, ಅಲ್ಲಿ ಊಟದ ವ್ಯವಸ್ಥೆಯನ್ನು ಮಾಡುವ ಕೆಲಸವನ್ನು ಮಾಡಿದ್ದೇವೆ. ಹೀಗಾಗಿ ಇವುಗಳನ್ನು ಉಚಿತ ಎಂದು ಹೇಳುತ್ತಿದ್ದೇವೆ. ಇದರ ಜೊತೆಗೆ, ಹಾಸ್ಟೆಲ್ ಬಿಲ್ಡಿಂಗ್ ಬಗ್ಗೆಯೂ ಸಹ ಸದಸ್ಯರು ಪ್ರಸ್ತಾಪಿಸಿದರು. ನನಗೆ

ಅನ್ನಿಸಿದ ಮಟ್ಟಿಗೆ, ಇತಿಹಾಸದಲ್ಲಿಯೇ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯೊಳಗೆ ಈ ಎರಡು ವರ್ಷಗಳ ಅವಧಿಯಲ್ಲಿ ಕೆ.ಕೆ.ಆರ್.ಬಿ.ಡಿ. (Kalyana Karnataka Regional Development Board) ವತಿಯಿಂದ ದುಡ್ಡನ್ನು ಕೊಟ್ಟು, ಅತೀ ಹೆಚ್ಚು ಕಟ್ಟಡಗಳನ್ನು ಕೊಡುವ ಕೆಲಸವನ್ನು ಮಾಡಲಾಗಿದೆ. ಬೀದರ್ ಜಿಲ್ಲೆಗೊಂದೇ ಕನಿಷ್ಟ 12 ಕಟ್ಟಡಗಳನ್ನು ಮಂಜೂರು ಮಾಡಲಾಗಿದೆ. ಇದರ ಮಾಹಿತಿಯನ್ನೂ ಸಹ ನೀಡಲಾಗಿದೆ. ಇವುಗಳ ಕಾಮಗಾರಿಗಳನ್ನು ಪೊಲೀಸ್ ಹೌಸಿಂಗ್ ಮುಖಾಂತರ ಮಾಡಿಸಲಾಗುತ್ತಿದೆ. ಇದಕ್ಕೆ ಹಣವನ್ನೂ ಸಹ ಬಿಡುಗಡೆ ಮಾಡಲಾಗಿದೆ. ಇವುಗಳ ಪೂಜೆಯನ್ನು ಮಾಡಿದ್ದು, ಪೂರ್ಣ ಪ್ರಮಾಣದಲ್ಲಿ ಕಾಮಗಾರಿಯು ಪ್ರಾರಂಭವಾಗಿದೆ. ಇತ್ತೀಚಿಗೆ ಶ್ರೀ ಈಶ್ವರ ಖಂಡ್ರೆ ರವರ ಕ್ಷೇತ್ರದಲ್ಲಿ ಜಾಗದ ಸ್ವಲ್ಪ ತೊಂದರೆ ಇತ್ತು. ಅದನ್ನು ಸರಿಪಡಿಸಿ, ಈಗ ಅದನ್ನೂ ಸಹ ಪ್ರಾರಂಭಿಸಲಾಗಿದೆ. ಸದಸ್ಯರ ಮತ್ತೊಂದು ಪ್ರಶ್ನೆಗೆ ಉತ್ತರವೇನೆಂದರೆ, ಕೆ.ಆರ್.ಇ.ಡಿ.ಎಲ್. ಸಂಸ್ಥೆಯ ಮುಖಾಂತರ ಹಾಸ್ಟೆಲ್‌ಗಳ ದುರಸ್ತಿ ಕಾಮಗಾರಿಗಳನ್ನು ಮಾಡಿಸಲಾಗುತ್ತಿದೆ. ಅಂದರೆ, ಅಲ್ಲಿನ ಸ್ನಾನಗೃಹ, ಶೌಚಾಲಯ ಇತ್ಯಾದಿಗಳು…. ಅಲ್ಲಿ ಕೆಲವು ಅಡುಗೆ ಮನೆಗಳನ್ನು ಗುರ್ತಿಸಿದ್ದೇವೆ. ಇವುಗಳಿಗಾಗಿ ಕನಿಷ್ಠ 4 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ದುಡ್ಡನ್ನು ನೀಡಲಾಗಿದೆ. ಈ ಬಗ್ಗೆ ಕನಿಷ್ಠ 37 ಹಾಸ್ಟೆಲ್‌ಗಳನ್ನು ಗುರ್ತಿಸಲಾಗಿದ್ದು, ಇಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡಿದ್ದೇವೆ. ಇದನ್ನು ಮೀರಿ, ಸದಸ್ಯರು ಮತ್ತೆ ಏನಾದರೂ ಮಾಹಿತಿಯನ್ನು ನೀಡಿದರೆ ಅದನ್ನು ನೋಡಲಾಗುವುದು. ಸದಸ್ಯರ ಕೇಳಿರುವ ಪ್ರಶ್ನೆಗೆ ಸಂಬಂಧಪಟ್ಟಂತೆ, ನಾನು ಸವಿಸ್ತಾರವಾದ ಉತ್ತರವನ್ನು ನೀಡಿದ್ದೇನೆ. ಈ ವರ್ಷದಲ್ಲಿಯೂ ಕೂಡ ಮತ್ತೆ ಕೆ.ಕೆ.ಆರ್.ಡಿ.ಬಿ. ಸಂಸ್ಥೆಗೆ ಮನವಿಯನ್ನು ಮಾಡಿದ್ದೇವೆ. ನಮ್ಮ ಇಲಾಖೆಯ ಹಾಸ್ಟೆಲ್ ಕಟ್ಟಡಗಳಿಗಾಗಿ ನಾವು ಜಾಗವನ್ನು ಗುರ್ತಿಸಿದ್ದೇವೆ. ಈ ಬಾರಿಯೂ ಸಹ ನಾವು ಕೆ.ಕೆ.ಆರ್.ಡಿ.ಬಿ. ಸಂಸ್ಥೆಗೆ ಮನವಿಯನ್ನು ಮಾಡುತ್ತೇವೆ. ಇವರು ಈ ವರ್ಷವೂ ನೀಡಿದರೆ, ನಾವು ಅದನ್ನು ತೆಗೆದುಕೊಳ್ಳುತ್ತೇವೆ. ಅಂದರೆ ಇಡೀ ರಾಜ್ಯದಾದ್ಯಂತ ಪ್ರತಿ ವರ್ಷ 30 ಕಟ್ಟಡಗಳನ್ನು ನೀಡಿದರೆ, ಕೆ.ಕೆ.ಆರ್.ಡಿ.ಬಿ. ಸಂಸ್ಥೆಯ ವತಿಯಿಂದ ಪ್ರತಿ ವರ್ಷ 40-45 ಕಟ್ಟಡಗಳನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತಿದ್ದೇವೆ. ನನಗೆ ಅನ್ನಿಸಿದ ಹಾಗೆ, ಇನ್ನೊಂದು ವರ್ಷದಲ್ಲಿ ಅಥವಾ ಇನ್ನು ಒಂದೆರೆಡು ಅವಧಿಯೊಳಗೆ ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಅಂದರೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ವಸತಿ ಶಾಲೆಗಳ ಕಟ್ಟಡ ಪೂರ್ಣವಾಗುತ್ತದೆ ಎಂಬ ವಿಶ್ವಾಸವಿದೆ. ಕೆ.ಕೆ.ಆರ್.ಡಿ.ಬಿ. ಸಂಸ್ಥೆಯ ಅಧ್ಯಕ್ಷರು ನಮಗೆ ಬಹಳಷ್ಟು ಸಹಕಾರವನ್ನು ಮಾಡುತ್ತಿದ್ದಾರೆ. ಹೀಗಾಗಿ ಕೆ.ಕೆ.ಆರ್.ಬಿ.ಡಿ. ವ್ಯಾಪ್ತಿಯೊಳಗೆ ಬರುವ ಹಾಸ್ಟೆಲ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಮುಗಿಸುವ ಪ್ರಯತ್ನದೊಳಗೆ ನಾವು ಇದ್ದೇವೆ.

**ಡಾ॥ ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಲ್ಲಿ ನಾಲ್ಕು ವರ್ಷಗಳ ಅವಧಿ ಆಗಿದ್ದರೂ ಸಹ ಇನ್ನೂ ಕೆಲಸ ಪ್ರಾರಂಭಗೊಂಡಿರುವುದಿಲ್ಲ. ದುರಸ್ತಿಯ ವಿಚಾರದಲ್ಲಿ ಏನಾಗುತ್ತಿದೆ ಎಂದರೆ, ಫ್ಯಾನ್ ದುರಸ್ತಿಯ ಬಗ್ಗೆ ಹೇಳುವುದಾದರೆ, ಯಾವುದೋ ಹಳೆಯ ಫ್ಯಾನ್ ಅನ್ನು ತೆಗೆದು, ಅದಕ್ಕೆ ಕಲರ್ ಮಾಡಿ, ಅದನ್ನೇ ಪುನಃ ಕೂಡಿಸುತ್ತಿದ್ದಾರೆ. ಅಲ್ಲಿ ಈ ಪ್ರಕಾರವಾದ ದುರಸ್ತಿ ಕೆಲಸಗಳಾದರೆ, ಅಲ್ಲಿನ ಪರಿಸ್ಥಿತಿ ಏನಾಗುತ್ತದೆ?

ಗ್ರೂಪ್ `ಡಿ' ಮತ್ತು ವಾರ್ಡ್‌ನ್ ಸಿಬ್ಬಂದಿಗಳ ಕೊರತೆ ಇದೆ. ಅಲ್ಲಿ ಅರ್ಧಕ್ಕಿಂತಲೂ ಅಧಿಕ ಖಾಲಿ ಹುದ್ದೆಗಳಿವೆ. ಒಂದೊಂದು ವಾರ್ಡ್‌ನ್‌ಗೆ 2-3 ಹಾಸ್ಟೆಲ್‌ಗಳ ಉಸ್ತುವಾರಿಯನ್ನು ನೀಡಿರುತ್ತಾರೆ. ಇಂತಹ ಸಂದರ್ಭದಲ್ಲಿ ಅಲ್ಲಿನ ಹುಡುಗರ ಪರಿಸ್ಥಿತಿ ಏನಾಗುತ್ತದೆ? ಅಲ್ಲಿ ಮಕ್ಕಳ ಸುರಕ್ಷಿತ ಸಂಬಂಧ ಯಾವುದೇ ಕ್ರಮಗಳಿಲ್ಲ. ಹಾಲಿ ಇರುವ ಹಾಸ್ಟೆಲ್‌ಗಳ ಪೈಕಿ ಅರ್ಧಕ್ಕಿಂತಲೂ ಹೆಚ್ಚಿನ ಹಾಸ್ಟೆಲ್‌ಗಳಿಗೆ ಸಿ.ಸಿ.ಟಿ.ವಿ.ಯನ್ನು ಅಳವಡಿಸಿಲ್ಲ. ಅಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ? 2024, 2025 ಮತ್ತು 2026 ನೇ ಸಾಲಿನಲ್ಲಿ ನಮ್ಮ ಜಿಲ್ಲೆಗೆ ಯಾವುದೇ ಹೊಸ ಪ್ರಸ್ತಾವನೆಗಳನ್ನು ತೆಗೆದುಕೊಂಡಿರುವುದಿಲ್ಲ. ಇಡೀ ಜಿಲ್ಲೆಗೆ ಕೇವಲ ಎರಡು ಹೊಸ ಹಾಸ್ಟೆಲ್‌ಗಳ ಪ್ರಸ್ತಾವನೆಯನ್ನು ಮಾಡಲಾಗಿದ್ದು, ಇನ್ನು ಹೆಚ್ಚು ಮಾಡುವಂತೆ ನಾನು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೆ, ವಿದ್ಯಾರ್ಥಿಗಳ ಭದ್ರತೆಯ ಬಗ್ಗೆ ಅವರು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಈಗಾಗಲೇ ಅಡುಗೆಯವರನ್ನು, ನಿಲಯಪಾಲಕನ್ನು ಹಾಗೂ ಗ್ರೂಪ್ `ಡಿ' ದರ್ಜೆ ನೌಕರರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ಹುದ್ದೆಗಳು ಖಾಲಿ ಇವೆ. ಅದೇ ರೀತಿಯಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿಯೂ ಸಹ ಅತೀ ಹೆಚ್ಚು ಹುದ್ದೆಗಳು ಖಾಲಿ ಇವೆ. ಬೀದರ್ ಜಿಲ್ಲೆಯಲ್ಲಿರುವ 23 ಬಾಲಕಿಯರ ಹಾಗೂ 55 ಬಾಲಕರ ವಿದ್ಯಾರ್ಥಿ ನಿಲಯಗಳ ಪೈಕಿ 25 ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಸಿ.ಸಿ. ಕ್ಯಾಮೆರಾವನ್ನು ಅಳವಡಿಸಲಾಗಿದೆ. ಬಾಲಕಿಯರ ಹಾಸ್ಟೆಲ್‌ಗಳಿಗೆ ಕಡ್ಡಾಯವಾಗಿ ಕಾವಲುಗಾರರನ್ನು ನೇಮಿಸಲಾಗಿದೆ. 35 ಬಾಲಕರ ವಿದ್ಯಾರ್ಥಿನಿಲಯಗಳ ಪೈಕಿ 24 ಹಾಸ್ಟೆಲ್‌ಗಳಿಗೆ ಕ್ಯಾಮೆರಾ ಅಳವಡಿಸುವುದು ಇನ್ನೂ ಬಾಕಿ ಇದೆ. ಇವುಗಳನ್ನು ಹಂತ ಹಂತವಾಗಿ ಮಾಡಲಾಗುವುದು. ಬಾಲಕಿಯರ ಹಾಸ್ಟೆಲ್‌ಗಳ ಕೆಲಸವು ಪೂರ್ಣಗೊಂಡಿರುತ್ತದೆ.

**ಸಭಾಪತಿಯವರು:-** ಇದು ಇನ್ನೂ ಪೂರ್ಣಗೊಂಡಿರುವುದಿಲ್ಲ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೆ, ಬೀದರ್ ಜಿಲ್ಲೆಯೊಳಗೆ ಮಾಡಿದ್ದೇವೆ.

**ಸಭಾಪತಿಯವರು:-** ನಮ್ಮ ಜಿಲ್ಲೆಯಲ್ಲಿ ಮಾಡಿರುವುದಿಲ್ಲ.

**ಶ್ರೀ ಶಿವರಾಜ ಎಸ್.ತಂಗಡಗಿ:-** ಮಾನ್ಯ ಸಭಾಪತಿಯವರೆ, ಇದನ್ನು ನಾವು ಹಂತ- ಹಂತವಾಗಿ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಇದು ಪೂರ್ಣಗೊಂಡಿರುತ್ತದೆ. ಬಾಲಕರ ಹಾಸ್ಟೆಲ್‌ಗಳ ಪೈಕಿ ಇನ್ನು 20 ಬಾಕಿ ಇರುತ್ತದೆ. ಇದನ್ನೂ ಸಹ ಮಾಡಿಸುವ ಕೆಲಸವನ್ನು ಮಾಡುತ್ತೇವೆ. ಸುಮಾರು 52,000 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಪೈಕಿ ನಮ್ಮ ಇಲಾಖೆಯ ಹುದ್ದೆಗಳೂ ಸಹ ಇವೆ. ಇವುಗಳನ್ನೂ ಸಹ ಭರ್ತಿ ಮಾಡುವ ಕೆಲಸವನ್ನು ಮಾಡುತ್ತೇವೆ. ನಮಗೆ ಇರುವ ಇತಿಮಿತಿಯೊಳಗೆ ಹೊಸ ಹಾಸ್ಟೆಲ್‌ಗಳ ಬಗ್ಗೆ ವಿಚಾರ ಮಾಡುತ್ತೇವೆ. ಇಡೀ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ಅತೀ ಹೆಚ್ಚು ಬೇಡಿಕೆ ಇದೆ. ವರ್ಷಾ-ವರ್ಷಾ ಸುಮಾರು 1,41,000 ಮಕ್ಕಳಿಗೆ ಹಾಸ್ಟೆಲ್‌ಗಳನ್ನು ಪ್ರವೇಶಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಲ್ಲಿಯೂ ಸಹ ಇವೆ. ನಮ್ಮ ಇತಿಮಿತಿಯೊಳಗೆ ಎಷ್ಟು ಸಾಧ್ಯವಾಗುತ್ತದೆಯೋ ಹಾಗೂ ಪ್ರತಿಯೊಂದು 2-3 ಹಾಸ್ಟೆಲ್‌ಗಳನ್ನು ನೀಡುವ ಪ್ರಯತ್ನಗಳನ್ನು ಮಾಡುತ್ತೇವೆ.

**ಸಭಾಪತಿಯವರು:-** ಶ್ರೀ ಸಿ.ಟಿ.ರವಿ ರವರು ಕೇಳಿದ ಪ್ರಶ್ನೆ ಸಂಖ್ಯೆ: 1210 ವರ್ಗಾವಣೆಗೊಂಡಿರುತ್ತದೆ ಹಾಗೂ ಕಾಲಾವಕಾಶವನ್ನು ಕೋರಿರುತ್ತಾರೆ.

ಪ್ರಶ್ನೆ ಸಂಖ್ಯೆ: 1238
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯ ಸರ್ಕಾರಿ ನೌಕರರಿಗೆ ಓ.ಬಿ.ಸಿ. ಅಡಿ ದೊರೆಯುವ ಸೌಲಭ್ಯಗಳನ್ನು claim ಮಾಡುವುದಕ್ಕೆ ಯಾವ ನಿಯಮಗಳನ್ನು ಹಾಕಿದ್ದಾರೆ? ಆದರೆ ಇವುಗಳಿಗೆ ಕೇಂದ್ರ ಸರ್ಕಾರದ ಬೇರೆ ನಿಯಮಗಳು ಇವೆ. ಆದರೆ, ಅದೇ ರೀತಿಯಾಗಿ ರಾಜ್ಯ ಸರ್ಕಾರದ ನಿಯಮಗಳೂ ಸಹ ಬೇರೆಯಾಗಿವೆ. ಇವರಿಗೆ ಯಾವ ರೀತಿಯ ಸೌಲಭ್ಯಗಳನ್ನು ನೀಡಲಾಗುತ್ತದೆ ಎಂಬ ವಿವರಗಳನ್ನು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಇವರಿಗೆ 32% ರಷ್ಟು ನೀಡುತ್ತಿದ್ದು, ಇದು ಬೇರೆಯಾಗಿರುತ್ತದೆ. ಆದರೆ ಉತ್ತರದಲ್ಲಿ ಏನನ್ನು ತಿಳಿಸಿದ್ದಾರೆ ಎಂದರೆ, the relevant portion of Article 342A (3) of the Indian Constitution reads as follows;

> "(3) Notwithstanding anything contained in clauses (1) and (2), every State or Union territory may, by law prepare and maintain, for its own purposes, a list of socially and educationally backward classes, entries in which may be different from the Central List."

ಇಲ್ಲಿ ಏನಾಗಿದೆ ಎಂದರೆ, ಜಾತಿಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ right ಇದ್ದು, ಇವರು classify ಮಾಡಿ ಇದನ್ನು ಪ್ರವರ್ಗ-2(ಎ) ಮತ್ತು ಪ್ರವರ್ಗ-2(ಬಿ) ಇದನ್ನು ಇವುಗಳಿಗೆ ನೀಡುವುದನ್ನು ರಾಜ್ಯ ಸರ್ಕಾರವು ಮಾಡಬಹುದು.

(ಮುಂದು)

(369)13-03-2026/10-50/bkp-ks (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಶೀಲ್ ಜಿ. ನಮೋಶಿ(ಮುಂದು):-**

ಹೊರತಾಗಿ, ಓ.ಬಿ.ಸಿ.ಗೆ ಏನು ಕೇಂದ್ರ ಸರ್ಕಾರದ ರೂಲ್ಸ್ ಇದೆ, you have no right to change the Rule. This is what was upheld by the yesterday by the Hon. Supreme Court. ನಿನ್ನೆ ಸುಪ್ರೀಂ ಕೋರ್ಟ್ ಇದರ ಬಗ್ಗೆ ಆದೇಶ ಮಾಡಿದ್ದಾರೆ. ಬಹುಶಃ ಇವತ್ತು ಎಲ್ಲಾ ಪತ್ರಿಕೆಯಲ್ಲಿ ಅನೇಕ ಕಡೆ ಮೀಸಲಾತಿ ಬಗ್ಗೆ ಬಹಳ ಸ್ಪಷ್ಟವಾಗಿ ಪ್ರಕಟಿಸಿದ್ದಾರೆ. ಅಂದರೆ, ಆದಾಯ ಹೆಚ್ಚಿಗೆ ಇದ್ದರೂ ಕೂಡ... ಬಹಳ ಮುಖ್ಯವಾಗಿ ಇದರಲ್ಲಿ ಏನಿದೆ ಎಂದರೆ ನಮ್ಮ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರದ ಹುದ್ದೆಗಳಿಗೆ ಅಪ್ಲೈ

ಮಾಡುವಾಗ ನಮ್ಮ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಹುದ್ದೆಗಗಳಿಗೆ ನಮ್ಮ ರಾಜ್ಯದಲ್ಲಿಯೇ ಇರುವವರಿಗೆ ಅರ್ಜಿ ಹಾಕಲಿಕ್ಕೆ ಅವಕಾಶ ಕೊಡಬೇಕು. ಬೇರೆ ರಾಜ್ಯದಿಂದ ಬಂದು ಅಪ್ಲೈ ಮಾಡುವವರಿಗೆ salaried income ಮತ್ತು ಕೃಷಿ ಆಧಾರಿತವಾಗಿ ಬಂದಂತಹ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಆದರೆ, ನಮ್ಮ ರಾಜ್ಯದಲ್ಲಿನ ನಮ್ಮ ಮಕ್ಕಳಿಗೆ ಆದಾಯ ಹೆಚ್ಚು ಇದ್ದರೆ ನಿಮಗೆ ಅಪ್ಲೈ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿ, you are barring them and it is wrong. ಇದರ ಬಗ್ಗೆ ಸುಪ್ರೀಂ ಕೋರ್ಟ್ ಬಹಳ ಸ್ಪಷ್ಟವಾಗಿ ಹೇಳಿದೆ. ಸುಪ್ರೀಂ ಕೋರ್ಟ್ ಏನು ಹೇಳುತ್ತದೆ ಎಂದರೆ ಸರ್ಕಾರಿ ನೌಕರರ ವಿಚಾರದಲ್ಲಿ ಅವರ ವಾರ್ಷಿಕ ವೇತನ ಅಂದರೆ, salary ಅನ್ನು 8 ಲಕ್ಷ ರೂಪಾಯಿಗಳ ಲೆಕ್ಕಾಚಾರಕ್ಕೆ ಬಳಸುವುದಿಲ್ಲ. ಅಂದರೆ 8 ಲಕ್ಷ ರೂಪಾಯಿಗಳ ಸಂಬಳದ ಆದಾಯ ಇದೆ ಎಂದು ನೀವು ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಬದಲಿಗೆ ಅವರ ಹುದ್ದೆ ಶ್ರೇಣಿಯನ್ನು, ಅವರ ಹುದ್ದೆ (designation) ಏನಿದೆ, ಆ ಹುದ್ದೆಯನ್ನು ಆಧರಿಸಿ ನೀಡಲಾಗುತ್ತಿದೆ ಎಂದರೆ ಪೋಷಕರ ಹುದ್ದೆ ಗ್ರೂಪ್ –ಎ, ಅಥವಾ ಗ್ರೂಪ್–ಬಿ ಅಧಿಕಾರಿಗಳಾಗಿದ್ದರೆ ಮಾತ್ರ ಕೆನೆಪದರದಲ್ಲಿ ಸೇರುತ್ತಾರೆಂದು ಬಹಳ ಸ್ಪಷ್ಟವಾಗಿ ಹೇಳಿದೆ. ಇಲ್ಲಿ ಏನು ತಪ್ಪು ಮಾಡುತ್ತಿದ್ದಾರೆಂದರೆ…

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಬೇಗ ಕೇಳಿ. ಆಮೇಲೆ clarification ಅನ್ನು ಕೇಳಿ. ನೀವು ಭಾಷಣ ಮಾಡಲಿಕ್ಕೆ ಹೋಗಬಾರದು. ವಿಷಯ ಏನೆಂದು ಹೇಳಬೇಕು. ತಾವು to the point questions ಅನ್ನು ಮಾತ್ರ ಕೇಳಿ.

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಇಲ್ಲಿ ವೇತನದ ಆದಾಯ, ಕೃಷಿ ಆದಾಯವನ್ನು ನೀವು ಹಿಡಿದುಕೊಳ್ಳಬಾರದು ಎಂದು ಹೇಳಿ ಸುಪ್ರೀಂ ಕೋರ್ಟ್‌ನವರು ಸ್ಪಷ್ಟವಾಗಿ ಆದೇಶ ಮಾಡಿದ್ದಾರೆ. ಆದ್ದರಿಂದ, ರಾಜ್ಯ ಸರ್ಕಾರದವರೂ ಸಹ ನೀವು ಇದನ್ನು ಅಳವಡಿಸಿಕೊಳ್ಳಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. You (Government) have no right to change the rule as stated by the Hon. Supreme Court.

**ಸಭಾಪತಿಯವರು:–** ಈ ಬಗ್ಗೆ ಸಚಿವರು ಉತ್ತರ ಹೇಳುತ್ತಾರೆ, ನೀವು ಕುಳಿತುಕೊಳ್ಳಿ.

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ(ಹಿಂದುಳಿದ ವರ್ಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು):–** ಮಾನ್ಯ ಸಭಾಪತಿಯವರೆ, ಹಿಂದೆ ಕೇಂದ್ರ ಸರ್ಕಾರದೊಳಗೆ ಅದು ಇತ್ತು. ಅದು ಏನೆಂದರೆ, ತಂದೆ–ತಾಯಿಗಳ ಆದಾಯ ಮಾತ್ರ ತೆಗೆದುಕೊಳ್ಳಬೇಕೆಂದು ಇತ್ತು. ಆದರೆ, Article 342 ರೊಳಗೆ ನಮ್ಮ ರಾಜ್ಯದೊಳಗೆ ನಿಮಗೆ ಏನು ಬೇಕು, ಅದನ್ನು ಮಾಡಿಕೊಳ್ಳುವುದಕ್ಕೆ ನಮಗೂ ಅವಕಾಶಗಳು ಇವೆ. ಅದನ್ನೇ ಅನುಸರಿಸಿಕೊಂಡು ಇಲ್ಲಿಯವರೆಗೂ ಕೆಲಸಗಳನ್ನು ಮಾಡಿಕೊಂಡು ಬಂದಿರುತ್ತೇವೆ. ಈಗ ನೀವು ಏನು ಹೇಳುತ್ತಿದ್ದೀರಿ, ಅಂದರೆ, ಕೇಂದ್ರ ಸರ್ಕಾರದ ಹುದ್ದೆಗಳಿಗೆ ಅರ್ಜಿ ಹಾಕಬೇಕಾದರೆ ಅವರ ತಂದೆ–ತಾಯಿಯವರ ಆದಾಯವನ್ನು ಇಟ್ಟುಕೊಳ್ಳಬೇಕು. ರಾಜ್ಯ ಸರ್ಕಾರದೊಳಗೆ ತಂದೆ–ತಾಯಿಯವರ ಮತ್ತು

ಸಂಬಂಧಪಟ್ಟ ಅಭ್ಯರ್ಥಿ ಅಥವಾ ಅಭ್ಯರ್ಥಿ ಮದುವೆಯಾಗಿದ್ದಲ್ಲಿ ಆಕೆಯ ಗಂಡನ ಆದಾಯವನ್ನು ಪರಿಗಣಿಸಬೇಕೆಂದು ರಾಜ್ಯ ಸರ್ಕಾರದೊಳಗೆ ಅವಕಾಶ ಇತ್ತು. ಅದನ್ನೇ ಮುಂದುವರಿಸಿಕೊಂಡು ಬಂದಿದ್ದರು. ಇದರ ಬಗ್ಗೆ ಹಿಂದೆ ನಿಮ್ಮ ಸರ್ಕಾರದೊಳಗೆ ಇದನ್ನು ಬದಲಾವಣೆ ಮಾಡಬೇಕೆಂದು ಎರಡು ಬಾರಿ ಕ್ಯಾಬಿನೆಟ್‌ಗೆ ಹೋಗಿ ವಾಪಸ್ಸು ಬಂದಿದೆ. ಅದನ್ನು ನಿಮ್ಮ ಮಂತ್ರಿಗಳೇ ವಾಪಸ್ಸು ಕಳುಹಿಸಿದ್ದರು. ಈಗಲೂ ಸಹ ನಮ್ಮಲ್ಲಿಯೂ ಸಹ ಅದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ನಮ್ಮಲ್ಲಿನ ಕೆಲವು ಶಾಸಕರು ಇದರ ಬಗ್ಗೆ ವಿಚಾರ ಮಾಡಿ, ಇದರಲ್ಲಿ ಒಂದಿಷ್ಟು ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡು, ಚರ್ಚೆ ಮಾಡಿ ಅದರ ವಿವರಗಳನ್ನು ನಾವು ಸಹ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೇವೆ. ನಾನು ಸಹ ಇವತ್ತು ಬೆಳಗ್ಗೆ ಇದರ ಸಲುವಾಗಿಯೇ ಸುಪ್ರೀಂ ಕೋರ್ಟ್‌ಗೆ ಇಲ್ಲಿಂದ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಮತ್ತು ಕೆಲವು ಸಂಘ-ಸಂಸ್ಥೆಗಳು ಹೋಗಿದ್ದರು. ಇದರ ಬಗ್ಗೆ ನಿನ್ನೆ ಆದೇಶವಾಗಿದೆ. ಆ ಆದೇಶದ ಪ್ರತಿಯನ್ನು ನಾನು ಸಹ ಪತ್ರಿಕಾ ಮಾಧ್ಯಮದ ಪೇಪರ್‌ನಲ್ಲಿ ನೋಡಿ ಓದಿದ್ದೇನೆ. ಇವತ್ತು ಈ ಬಗ್ಗೆ ನನಗೆ ಪ್ರಶ್ನೆಯನ್ನು ಕೇಳಿದ್ದಕ್ಕೂ ಮತ್ತು ಇವತ್ತು ಉತ್ತರ ಕೊಡಲಿಕ್ಕೂ ಮತ್ತೆ ಸುಪ್ರೀಂ ಕೋರ್ಟ್‌ನಲ್ಲಿ ಈ ರೀತಿ ಆಗಿದೆ ಎನ್ನುವುದು ಕಾಕತಾಳಿಯಾಗಿದ್ದು ಅದೂ ಸಹ ಆಗಿದೆ. ಅದಕ್ಕೋಸ್ಕರ ಸುಪ್ರೀಂ ಕೋರ್ಟಿನ ಈ ಸಂಬಂಧದ ಪೂರ್ಣ ಪ್ರಮಾಣದ ಆದೇಶದ ಪ್ರತಿಯನ್ನು ತರಿಸುತ್ತೇನೆ. ತರಿಸುವುದರ ಮೂಲಕ ನಿಮ್ಮನ್ನೆಲ್ಲಾ ಕರೆಸುತ್ತೇನೆ. ಇದರ ಬಗ್ಗೆ ಸುಪ್ರೀಂ ಕೋರ್ಟ್‌ನ ಆದೇಶ ಏನಾಗಿದೆ ಅದರ ಪ್ರಕಾರವೇ ನಾವು ಮತ್ತು ನೀವುಗಳು ಮಾಡಲೇಬೇಕು. ಸುಪ್ರೀಂ ಕೋರ್ಟ್‌ನ ಆದೇಶವನ್ನು ತರಿಸಿಕೊಂಡು ಈ ಬಗ್ಗೆ ನಿಶ್ಚಿತವಾಗಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಏನು ಕಾನೂನುಗಳನ್ನು ಮಾಡಬೇಕೋ ಅದನ್ನು ಮಾಡುವಂತಹ ಕೆಲಸವನ್ನು ಈಗಾಗಲೇ ಮಾಡಬೇಕೆಂದು ನಾನು ಸಹ ಉದ್ದೇಶವನ್ನು ಇಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂಬಂಧದ ಕಡತವನ್ನು ಕಳುಹಿಸುವಂತಹ ಕೆಲಸವನ್ನು ಮಾಡಿದ್ದೇವೆ. ಈ ವಿಚಾರ ಕ್ಯಾಬಿನೆಟ್‌ಗೆ ಬರಬೇಕಾಗಿದೆ. ಆದ್ದರಿಂದ ಈ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕ್ಕೂ ಸಹ ತಂದು ಮುಖ್ಯಮಂತ್ರಿಗಳ ಜೊತೆಯಲ್ಲಿ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಇದರಿಂದ ಕೆಲವು ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿರುವುದು ನಮ್ಮ ಗಮನಕ್ಕೂ ಸಹ ಬಂದಿರುತ್ತದೆ. ಒಂದು ಕಡೆ ಅನ್ಯಾಯವಾಗುತ್ತದೆ ಮತ್ತು ಇನ್ನೊಂದು ಕಡೆ ನಿಜವಾದ ಬಡವರಿಗೂ ಸಹ ಅವಕಾಶಗಳು ಸಿಗುತ್ತವೆ. ಈಗ ತಂದೆ-ತಾಯಿ ಕೆಲಸ ಇರುತ್ತದೆ ಮತ್ತು ಅದರ ಜೊತೆಗೆ ಅವಳ ಗಂಡನೂ ಒಳ್ಳೆಯ ಸ್ಥಿತಿವಂತರು ಇರುತ್ತಾರೆ. ಇಲ್ಲವೆಂದರೆ ಅವರಾದರೂ ಸಹ ಒಂದು ಒಳ್ಳೆಯ ಸ್ಥಿತಿಯಲ್ಲಿ ಇರುತ್ತಾರೆ. ಇಂತಹವರಿಗೆ ಕೊಡುವುದಕ್ಕಿಂತಲೂ ಅವರಿಗೆ ಯಾರು ಇರಲಾರದೇ ಇನ್ನೊಬ್ಬರು ಯಾರು ಇರುತ್ತಾರೆ, ಅವರು ಸಹ ಕಷ್ಟದಲ್ಲಿ ಇರುತ್ತಾರೆ. ಅಂತಹವರಿಗೂ ಸಹ ಅವಕಾಶ ಸಿಗಬೇಕು. ಈ ಎರಡೂ ವಿಚಾರವಾಗಿ ಈ ಎರಡು ಸಂಗತಿಗಳನ್ನೂ ಸಹ ವಿಚಾರ ಮಾಡಿದ್ದೇವೆ. ಎರಡು ವಿಚಾರಗಳ ಬಗ್ಗೆ ಪರಿಶೀಲನೆ ಮಾಡಿ ಒಂದು

ನಿರ್ಧಾರಕ್ಕೆ ಬಂದಿರುತ್ತೇವೆ. ಮತ್ತೆ ನಾನು ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ಆದೇಶ ಏನಾಗಿದೆ, ಅದರ ಬಗ್ಗೆ ನಾನು ಸಹ ಮಾಧ್ಯಮದಲ್ಲಿ ನೋಡಿರುತ್ತೇನೆ. ಅದರ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿಯನ್ನು ತೆಗೆದುಕೊಂಡು ನಿಮ್ಮನ್ನೆಲ್ಲಾ ಕರೆಸಿ ಚರ್ಚೆ ಮಾಡಿ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ನನ್ನ ಒಂದೇ ಒಂದು ಪ್ರಶ್ನೆ ಏನೆಂದರೆ, ತಾವು ಏನು ತಂದೆ-ತಾಯಿ ಆದಾಯದ ಬಗ್ಗೆ ಹೇಳುತ್ತಿದ್ದೀರಿ. ಅದು ಖಂಡಿತವಾಗಿಯೂ ಸರಿ ಇದೆ. ತಂದೆ-ತಾಯಿಯವರ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳ ಎಂದು ಸುಪ್ರೀಂ ಕೋರ್ಟ್ ಆದೇಶ ಮಾಡಿದೆ. ಅದು ಬೇರೆ ವಿಚಾರ. ಇಲ್ಲಿನ ಪ್ರಶ್ನೆ ಏನೆಂದರೆ, Article 342A (3) ರ ಅಡಿಯಲ್ಲಿ, the salaried income of any government servant and Group 'C' and 'D' ನಲ್ಲಿ ಇದ್ದಂತಹವರು ಮತ್ತು ಅವರ ಕೃಷಿ ಆಧಾರಿತ ಆದಾಯವನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ ಎಂದು ಹೇಳ ಸ್ಪಷ್ಟವಾದ ಅದೇಶ ಇದೆ. ಮೊದಲು ಸಹ ಅದೇಶ ಇತ್ತು ಹಾಗೂ ಈಗಲೂ ಸಹ ಅದೇಶ ಇದೆ. The Hon'ble Supreme Court has endorsed that.

(ಗೊಂದಲ)

**ಶ್ರೀ ತಂಗಡಗಿ ಶಿವರಾಜ್ ಸಂಗಪ್ಪ(ಹಿಂದುಳಿದ ವರ್ಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು):-** ಮಾನ್ಯ ಸದಸ್ಯರೇ, ಈ ಆದೇಶವು ಮೊದಲು ಇರಲಿಲ್ಲ. ಈಗ ಆದೇಶವಾಗಿದೆ. ಅವರು ಹೇಳುತ್ತಿರುವ Article 342 ನ ಒಳಗೆ ಕೇಂದ್ರ ಸರ್ಕಾರದ್ದು ಇದೆ. ಆದರೆ, ಅದರಲ್ಲೂ ಸಹ ಬಹಳ ಸ್ಪಷ್ಟವಾಗಿ ಕೇಂದ್ರ ಸರ್ಕಾರದ ಒಳಗೆಯೇ ತೆಗೆದುಕೊಳ್ಳಬೇಕೆಂಬುದುದಿಲ್ಲ. ನಮ್ಮ ರಾಜ್ಯದ ವ್ಯಾಪ್ತಿಗೆ ಬರುವಂತಹದ್ದಕ್ಕೆ ಯಾವ ರೀತಿ ಅನುಕೂಲ ಮಾಡಿಕೊಡಬೇಕೆನ್ನುವ ದೃಷ್ಟಿಕೊನವು ಈ ಹಿಂದೆಯೇ ಆಗಿದೆ. ಅವರು ಕೇಂದ್ರ ಸರ್ಕಾರದ Article 342 ಅನ್ನು ಉಪಯೋಗ ಮಾಡಿಕೊಳ್ಳಬೇಕೆನ್ನುವುದಿಲ್ಲ. ಆದರೆ, ನಿನ್ನೆ ಸುಪ್ರೀಂ ಕೋರ್ಟ್ ಏನು ಆದೇಶ ಮಾಡಿದೆ ಅದನ್ನು ನಾನು ಪೂರ್ಣಪ್ರಮಾಣವಾಗಿ ಮಾಧ್ಯಮದಲ್ಲಿ ಓದಿದ್ದೇನೆ. ಅದರ ಆದೇಶ ಕಾಪಿ ಬಂದ ಮೇಲೆ ನಿಶ್ಚಿತವಾಗಿಯು ಸಹ ಸುಪ್ರೀಂ ಕೋರ್ಟ್ ಆದೇಶ ಏನು ಹೇಳುತ್ತದೇಯೋ ಅದನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಶಶೀಲ್ ಜಿ. ನಮೋಶಿ:-** ಅದರ ಪ್ರಕಾರ implement ಮಾಡಿ.

<u>ಪ್ರಶ್ನೆ ಸಂಖ್ಯೆ 1289</u>

<u>(ಉತ್ತರವನ್ನು ಲಗತ್ತಿಸಲಾಗಿದೆ)</u>

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಇದ್ದಂತಹದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ I.T. (Information Technology) and ಮತ್ತು B.T. (Biotechnology) ಗೆ ಸಂಬಂಧಪಟ್ಟಂತಹ ಸಂಸ್ಥೆಗಳನ್ನು ಪ್ರಾರಂಭ ಮಾಡಿರುವುದರ ಬಗ್ಗೆ ಮತ್ತು ಅಲ್ಲಿ ಅವರಿಗೆ ಏನಾದರೂ ಜಾಗವನ್ನು ಕೊಟ್ಟಿದ್ದೇವೆಯೇ ಇತ್ಯಾದಿ ಮಾಹಿತಿಗಳನ್ನು ನಾನು ಕೇಳಿದ್ದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರಿಗೆ ಈ ಕಲ್ಯಾಣ ಕರ್ನಾಟಕದಲ್ಲಿ ಬರುವಂತಹ 7 ಜಿಲ್ಲೆಗಳಲ್ಲಿ ಸುಮಾರು 22 ಇಂಜಿನೀಯರಿಂಗ್ ಕಾಲೇಜುಗಳು ಬರುತ್ತದೆ. ಮತ್ತೆ ಒಂದು I.I.I.T. (Indian Institute of Information Technology) ಬರುತ್ತದೆ. ಅಂದರೆ, ನಾನು ಈ ವಿವರವನ್ನು ಏತಕ್ಕೆ ಕೊಡುತ್ತಿದ್ದೇನೆಂದರೆ ಪ್ರತಿವರ್ಷ 22 ಕಾಲೇಜುಗಳಿಂದ ವಿದ್ಯಾರ್ಥಿಗಳ output ಆಗುತ್ತದೆ. ಆ output ಆದಂತಹ ಅಷ್ಟು ವಿದ್ಯಾರ್ಥಿಗಳು ಕೆಲಸಕ್ಕೆಂದು ಒಂದು ಕಡೆ ಬೆಂಗಳೂರಿಗೆ ಬರುತ್ತಾರೆ, ಇಲ್ಲವೇ ಹೈದ್ರಬಾದ್ ಕಡೆ ಹೋಗುತ್ತಾರೆ. ಆದರೆ, ತಾವು ಕೊಟ್ಟಿರುವ ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ Biotech and Agri-tech ಗೆ ಸಂಬಂಧಪಟ್ಟಂತೆ ಸಾಕಷ್ಟು ಕೆಲಸ ಆಗಿದೆ. ಮತ್ತೆ A.I. (Artificial Intelligence) ಗೆ ಸಂಬಂಧಪಟ್ಟ ಹಾಗೆ ರಾಯಚೂರಿನಲ್ಲಿ I.I.I.T. ನಲ್ಲಿಯೂ ಕೂಡ ಕೆಲವು ಕೆಲಸ ಆಗಿದೆ ಎಂದು ಹೇಳುತ್ತೀರಿ. ನಾನು ತಮಗೆ ಕೇಳುತ್ತಿರುವುದು ಏನೆಂದರೆ ತಾವು ಈ ಒಂದು 7 ಜಿಲ್ಲೆಗಳನ್ನು ಕೇಂದ್ರಿಕೃತವಾಗಿ ಕಲ್ಯಾಣ ಕರ್ನಾಟಕದ ಉದ್ಯೋಗ ಸೃಷ್ಟಿಯ ಕೇಂದ್ರೀಕೃತವಾಗಿ ಏತಕ್ಕೆ ನೀವು K.K.R.D.B. (Kalyana Karnataka Regional Development Board)ಯ ಅನುದಾನ ಏನಿದೆ, ಈ ಅನುದಾನದಲ್ಲಿ ಒಂದಿಷ್ಟು percentage ಅನ್ನು start-up ecosystem ಅನ್ನು ಮಾಡುವಂತಹದ್ದಕ್ಕೆ ಇಟ್ಟುಕೊಳ್ಳಬಾರದಾ? ಏಕೆಂದರೆ, ಅನೇಕ ಬಾರಿ ಏನಾಗಿಬಿಡುತ್ತದೆ ಎಂದರೆ ನಾವು ಜಾಗ ಕೊಡುವುದು ಒಂದೇ ಎಂದು ಭಾವಿಸುತ್ತೇವೆ. ಆದರೆ, ಕೇವಲ ಜಾಗ ಕೊಡುವುದರಿಂದ, ಯಾವುದೋ ಒಂದು ಸಂಸ್ಥೆ ಜಾಗ ಪಡೆದುಕೊಳ್ಳಬಹುದು, ಅದರಲ್ಲಿ ತನ್ನ ಕೆಲಸವನ್ನು ಮಾಡದೆಯೂ ಸಹ ಇರಬಹುದು. ಆದರೆ, ನಾವು ಈ ರೀತಿಯ start-up ecosystem ಅನ್ನು... ಏಕೆಂದರೆ, ಕಲಬುರಗಿ, ಬೀದರ್ ಹಾಗೂ ಹೈದ್ರಬಾದಿಗೂ distance ಅನ್ನು ನೋಡಿದರೆ ಅದು 150 ಕಿ.ಮೀ. ಇದೆ. ಹೈದ್ರಬಾದಿನಲ್ಲಿ ವಿಶ್ವದಲ್ಲಿರುವ ಎಲ್ಲಾ ತಂತ್ರಜ್ಞಾನದ ಕಂಪನಿಗಳು ಬರುತ್ತವೆ. ಆದರೆ, ನಮ್ಮ ಕಲಬುರಗಿ, ಬೀದರ್ ಮತ್ತು ರಾಯಚೂರು ಭಾಗಕ್ಕೆ ನಾವೇನಾದರೂ ಸ್ಪೂರ್ತಿದಾಯಕವಾಗಿರುವಂತಹ ಕಾರ್ಯಕ್ರಮಗಳನ್ನು ಕೊಡುವುದಾದರೆ, ಖಂಡಿತವಾಗಿಯೂ ಈ ಭಾಗ engineering degree ಮಾಡುವಂತಹ ವಿದ್ಯಾರ್ಥಿಗಳಿಗೆ ಸಾಕಷ್ಟು ಉದ್ಯೋಗ ಅವಕಾಶವನ್ನು ಕೊಟ್ಟಂತಾಗುತ್ತದೆ

ಹಾಗೂ ಆರ್ಥಿಕ ಬೆಳವಣಿಗೆಯಾಗುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಟ್ಟರೆ, ನಾನು ಎರಡು ಸಲಹೆಗಳನ್ನು ಕೊಡಬಯಸುತ್ತೇನೆ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಶ್ರೀ ನವೀನ್‌ರವರು ಹೇಳಿರುವಂತಹದ್ದನ್ನು ನಾನು ಒಪ್ಪುತ್ತೇನೆ. ನಮ್ಮ ಭಾಗದಲ್ಲಿ ಪ್ರತಿಭೆ ಇದೆ, ಮಾನವ ಸಂಪ್ನೂಲವಿದೆ. ಅದನ್ನು ಇನ್ನೂ ಹೆಚ್ಚು ರೀತಿಯಾಗಿ ನಾವು ಬೆಳಸಬೇಕಾಗುತ್ತದೆ. ನಾನು I.T. ಸಚಿವನಿದ್ದೇನೆ ಎಂಬುವ ಒಂದೇ ಕಾರಣಕ್ಕೆ ಅಲ್ಲಿ I.T. park ಅನ್ನು ಹಾಕುವುದ್ದಕ್ಕೆ ಬಹಳ ಸುಲಭ. ಅದು ಬರೀ ಒಂದು ಜಾಗ ಅಂದರೆ, real estate. ಆದರೆ, ನಾವು ನಿಜವಾಗಿಯೂ ಅಲ್ಲಿ ಪ್ರತಿಭೆಯನ್ನು ಉಳಿಸಬೇಕು ಹಾಗೂ ಬೆಳಸಬೇಕು. ಮತ್ತೆ ಬಂಡವಾಳ ತರಬೇಕೆಂದರೆ, ಮೊದಲನೇಯದಾಗಿ ಮಾನವ ಸಂಪ್ನೂಲವನ್ನು ಹೆಚ್ಚಿಸಬೇಕು. ಅದಕ್ಕೋಸರ ವಿಶೇಷವಾದಂತಹ ಕಾಳಜಿಯನ್ನು ವಹಿಸಿ ನಾವು 'ನಿಪುಣ ಕರ್ನಾಟಕ' ಯೋಜನೆಯನ್ನು ಹೆಚ್ಚಾಗಿ ನಮ್ಮ ಭಾಗದಲ್ಲಿ ಜಾರಿಗೊಳಸುತ್ತಿದ್ದೇವೆ.

**(ಮುಂದು)**

(370) 13.03.2026 11.00 ಎಸ್‌ವಿ-ಎಂಡಿ **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

We are focusing heavily on skilling in emerging technologies. ಅದು ಬಿ.ಎಸ್.ಸಿ., ಇರಬಹುದು, ಎಂ.ಎಸ್.ಸಿ.. ಇರಬಹುದು Engineering Graduates ಇರಬಹುದು STEM graduates ಗೆ ನಾವು ಹೆಚ್ಚು ಒತ್ತು ಕೊಡುತ್ತಿದ್ದೇವೆ. ಸುಮಾರು ಮೂರ್ನಾಲ್ಕು ಸಾವಿರ ಜನರಿಗೆ ನಾವು psychometric tests ಗಳನ್ನು ಮಾಡಿ ಅವರಲ್ಲಿರುವ ನ್ಯೂನತೆಗಳನ್ನು ಅಥವಾ skill gap ಏನಿದೆ, ಅದನ್ನು ಕೌಶಲ್ಯಾಭಿವೃದ್ಧಿ ಇಲಾಖೆಯವರೊಂದಿಗೆ ಸೇರಿ ಮಾಡುತ್ತಿದ್ದೇವೆ. ಅದರ ಬಗ್ಗೆ ಮಾನ್ಯ ಶಶೀಲ್ ಜಿ. ನಮೋಶಿಯವರಿಗೂ ಮಾಹಿತಿಯಿದೆ. ಏಕೆಂದರೆ ಅವರ ಕಾಲೇಜಿನಲ್ಲಿ ಆ test ಅನ್ನು ಮಾಡುವ ಪ್ರಯತ್ನ ನಾವು ಮಾಡಿದ್ದೆವು. ಅದನ್ನು ಹೊರತುಪಡಿಸಿ, 21 ಸಣ್ಣ ಪುಟ್ಟ ಕಂಪನಿಗಳು ಬಂದಿವೆ. K.D.E.M (Karnataka Digital Economy Mission) which is the part of the I.T-B.T, ಅವರಿಂದ ನೋಂದಣಿಯಾಗಿ ಬಂದಿರುವ ಕಂಪನಿಗಳವೆ. Without the help of the Government also ಸಾಕಷ್ಟು ಖಾಸಗಿ ಕಂಪನಿಗಳು set-up ಆಗಿವೆ. ಬಳ್ಳಾರಿಯಲ್ಲಿ B.B.C (Bengaluru Bioinnovation Centre) ಎಂಬುವವರ ಕಡೆಯಿಂದ ರೂ.55 ಕೋಟಿ ವೆಚ್ಚದಲ್ಲಿ ಆಗಲೇ Incubation Centre ಸುಮಾರು K.M.E.R.C (Karnataka Minning Environment Restoration Corporation) ನಲ್ಲಿ 4.5 ಎಕರೆ ಭೂಮಿಯನ್ನು ಮೀಸಲಿಟ್ಟಿದ್ದೇವೆ. ಗಣಿಗಾರಿಕೆಯ ದುಷ್ಪರಿಣಾಮದಿಂದ ಪರಿಸರದ ಮೇಲೆ ಏನೇನು ಹಾನಿಯಾಗುತ್ತದೆ ಅದನ್ನು ಅಧ್ಯಯನ ಮಾಡಿ soil restoration ಇರಬಹುದು, environment restoration

ಇರಬಹುದು, potability of water ಇರಬಹುದು, ಇವೆಲ್ಲವುಗಳನ್ನು ಕೂಡ ನಾವು ಮಾಡುತ್ತಿದ್ದೇವೆ. ಅದರ ಜೊತೆಗೆ ಇತ್ತೀಚೆಗೆ ಕಲಬುರಗಿಯಲ್ಲಿ ಕೃಷಿಕಲ್ಪ ಎನ್ನುವ ಫೌಂಡೇಷನ್ ಜೊತೆಗೆ ಸುಮಾರು ರೂ. 16.5 ಕೋಟಿ ಖರ್ಚು ಮಾಡಿ ತೊಗರಿ ಬೆಳೆಗೆ Agri-Tech Accelerator ಅನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ co-working spaces and Incubation Centres ಗಳನ್ನು ಕೂಡ ನಾವು ಪ್ರಾರಂಭ ಮಾಡುತ್ತಿದ್ದೇವೆ. ಈ ಬಾರಿಯ ಬಜೆಟ್‌ನಲ್ಲಿ I.I.I.T (Indian Institute of Information Technology) ರಾಯಚೂರಿನಲ್ಲಿ Centre of Excellence for Artificial Intelligence ಅನ್ನು ಮಾನ್ಯ ಬೋಸರಾಜು ಅವರು ಮತ್ತು ನಾವು ಸೇರಿ ಮಾಡುತ್ತಿದ್ದೇವೆ. ಅದು ಘೋಷಣೆಯಾಗಿದ್ದು, ಒಪ್ಪಂದವೂ ಕೂಡ ಆಗಿದೆ. Probably in another one or two months we will start that. ಬಹಳ ವಿಶೇಷವಾದಂಥ ಯೋಜನೆ ಅಂದರೆ ನಮ್ಮ ಸರ್ಕಾರ ಬಂದ ಮೇಲೆ ಕಳೆದ ವರ್ಷದಿಂದ Local Economic Acceleration Programme ಮಾಡಿದ್ದೇವೆ. ತಾವು ಹೇಳಿದಂತೆ ಪ್ರತಿಭೆಗಳು ಅಲ್ಲಿಯೇ ಉಳಿದುಕೊಳ್ಳಬೇಕು. ಬಂಡವಾಳ ಪ್ರತಿಭೆಯ ಬಳಿ ಹೋಗುವುದನ್ನು ಬಿಟ್ಟು, ಪ್ರತಿಭೆಯೇ ಬಂಡವಾಳದ ಬಳಿ ಬರುವಂತಾಗಿದೆ. ಅಂದರೆ ಬೆಂಗಳೂರಿಗೆ ಬರುತ್ತಿದ್ದಾರೆ. The idea is to ensure that we take investments to where talent is. Local Economic Acceleration Programme ಅಡಿಯಲ್ಲಿ ನೀವು ಹೇಳಿದಂತೆ K.K.R.D.B (Kalyana Karnataka Region Development Board), D.M.F (District Mineral Foundation), K.M.E.R.C (Karnataka Minning Environment Restoration Corporation)fund ಇರಬಹುದು ಇವರೆಲ್ಲರೂ ಕೂಡ ಸಹಕಾರ ಕೊಡುತ್ತಿದ್ದಾರೆ. ಈಗಾಗಲೇ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೊಪ್ಪಳ, ನವೋದಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಯಚೂರು ಮತ್ತು ಪ್ರೌಢದೇವರಾಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ವಿಜಯನಗರ ಇಲ್ಲಿ ಒಂದೂವರೆ ಕೋಟಿ ರೂಪಾಯಿಯನ್ನು ಪ್ರತಿ ಕಾಲೇಜಿಗೆ ಕೊಟ್ಟು ಅಲ್ಲಿ Innovation Laboratories ಗಳನ್ನು ನಾವು setup ಮಾಡಿದ್ದೇವೆ. ಅದನ್ನು ಹೊರತುಪಡಿಸಿ ಕಲಬುರಗಿಯಲ್ಲಿ Electronics Manufacturing ಕೂಡ ಆಗಬೇಕು ಎಂದು ಸುಮಾರು 37 ಎಕರೆಯಲ್ಲಿ plug and play facility ಗಾಗಿ ಮೀಸಲಿಟ್ಟು export oriented electronics building ಕೂಡ ರೆಡಿಯಾಗಿದೆ. ಅಲ್ಲಿ ಖಾಸಗಿ ಕಂಪನಿಗಳ ಜೊತೆ ನಾವು ಮಾತುಕತೆ ನಡೆಸುತ್ತಿದ್ದೇವೆ. ಅವರೂ ಕೂಡ ಬರುತ್ತೇವೆಂದು ಹೇಳಿದ್ದಾರೆ. Centre of Excellence in Agri-Tech ಅಂದರೆ Agri-Business Intelligence Centre ಅನ್ನು ಕೇಂದ್ರದ ಸಹಯೋಗದೊಂದಿಗೆ ಮಾಡುತ್ತಿದ್ದೇವೆ. ಅದಲ್ಲದೆ, ಕಿಯೋನಿಕ್ಸ್ ಐ.ಟಿ. ಪಾರ್ಕ್ ನಮ್ಮ ಕಲಬುರಗಿಯಲ್ಲಿದೆ, ಅಲ್ಲಿ 18 ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಅದರ ಪಕ್ಕ ಎರಡು ಎಕರೆ ಇದೆ. ಅಲ್ಲಿಯೂ ಕೂಡ ಒಂದು Centre of Excellence ಮಾಡಬೇಕು ಎಂದು ನಾವು ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೆವು. The New Age Innovation Network Centre ಎಂದು ಬಳ್ಳಾರಿಯಲ್ಲಿ 3, ಬೀದರ್‌ನಲ್ಲಿ 3, ಕಲಬುರಗಿಯಲ್ಲಿ 2 ಮಾಡಿದ್ದೇವೆ. ನೀವು ಹೇಳಿದಂತೆ ನವೋದ್ಯಮಗಳನ್ನು ಉತ್ತೇಜಿಸುವುದಕ್ಕೆ ನಾವು ಕೆ.ಕೆ.ಆರ್.ಡಿ.ಬಿಯಿಂದ ಅನುದಾನ ಪಡೆದಿದ್ದೇವೆ. ನಮ್ಮ ಇಲಾಖೆಯಿಂದಲೂ ಅನುದಾನ ನೀಡಿದ್ದು, 77

ನವೋದ್ಯಮಗಳಿಗೆ ನಾವು ಹಣವನ್ನು ಹಂಚಿಕೆ ಮಾಡಿದ್ದೇವೆ. ಸುಮಾರು ರೂ.5 ಕೋಟಿ ಅನುದಾನವನ್ನು ನಾವು ಕೊಟ್ಟಿದ್ದೇವೆ. ನಮ್ಮ ಹೆಚ್ಚಿನ ಗಮನ ಆ ಭಾಗದ ಕಡೆಯಿದೆ. ಗ್ರಾಮಾಂತರ ಇಂಜಿನಿಯರಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು ಇದ್ದು, ಅನುಚ್ಛೇದ 371(ಜೆ) ಯಿಂದ ಸಾಕಷ್ಟು ಜನರಿಗೆ ಇಂಜಿನಿಯರಿಂಗ್ ಸೀಟುಗಳು ಲಭಿಸುತ್ತಿವೆ. ನಮ್ಮ ಸಂಪೂರ್ಣವಾದ ಗಮನ ಯಾವುದಕ್ಕಿದೆಯೆಂದರೆ ಮೊದಲನೆಯದಾಗಿ ಕೌಶಲ್ಯಾಭಿವೃದ್ಧಿ, ಎರಡನೆಯದಾಗಿ Incubation and Co-working Spaces, Accelerators, Centres of Excellences, ಅದಾದ ನಂತರ Investments and Financial Policy. This is the structure that we have built. ಇದರ ಫಲಶ್ರುತಿಯನ್ನು ಕಳೆದ ಎರಡು ವರ್ಷಗಳಿಂದ ನೋಡುತ್ತಿದ್ದೇವೆ. ಅದಕ್ಕಿಂತ ಹೆಚ್ಚು ಸಲಹೆಯನ್ನು ನೀಡುವುದಿದ್ದರೆ ನಾವು ಖಂಡಿತವಾಗಿ ಸಕಾರಾತ್ಮಕವಾಗಿ ಸ್ವೀಕಾರ ಮಾಡುತ್ತೇವೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗಾಗಲೇ skilling and upskilling and Centre of Excellence ಕುರಿತು ಹೇಳಿದ್ದಾರೆ.

ಮಾನ್ಯ ಸಚಿವರೆ, ನಾನು ತಮ್ಮನ್ನು ಕೇಳುತ್ತಿರುವುದೇನೆಂದರೆ ಈಗ ಕಾಲೇಜುಗಳ ಹಂತದಲ್ಲಿ ಪ್ರತಿಭೆಗಳನ್ನು ತಯಾರು ಮಾಡಲಾಗುತ್ತಿದೆ ಎಂದು ಹೇಳಿದಿರಿ ಹಾಗೂ ಉತ್ತರದಲ್ಲಿಯೂ ಕೊಟ್ಟಿದ್ದೀರಿ. ಈ ಬಂಡವಾಳ ಹೂಡಿಕೆ ಅಂದರೆ ನವೋದ್ಯಮಗಳಿಗೆ ಅಥವಾ Startup Initiatives ಗಳಿಗೆ ಬಂಡವಾಳ ಕೊಡುವುದು ಕೂಡ ಅಷ್ಟೇ ಮುಖ್ಯವಾದುದು. ಅದಕ್ಕೆ ನನ್ನ ಒಂದು ಸಲಹೆಯಿದ್ದು, ತಾವು ಅದನ್ನು ಪರಿಶೀಲನೆ ಮಾಡಬಹುದು. ತಮ್ಮ ಇಲಾಖೆಯ ವತಿಯಿಂದ Private Venture Capitalists, Private Equity Investors and K.K.R.D.B (Kalyana Karnataka Region Development Board) ಈ ರೀತಿಯಾದ ಸಂಸ್ಥೆಗಳನ್ನು ಒಂದು ಪ್ಯಾನೆಲ್ ರೀತಿಯಲ್ಲಿ ಮಾಡಿ. It is neither a loan nor a subsidy. ಉಚಿತವಾಗಿ ಹಣ ಕೊಡಿ ಎಂದು ನಾನು ನಿಮಗೆ ಸಲಹೆ ಕೊಡುತ್ತಿಲ್ಲ. ಸರ್ಕಾರದ ಹಣವನ್ನು ಹೇಗೆ ಬೇಕಾದರೂ ಬಳಕೆ ಮಾಡಲಿ ಎನ್ನುವ ಸಲಹೆಯನ್ನು ನಾನು ಕೊಡುತ್ತಿಲ್ಲ. ಆದರೆ ಈ ರೀತಿಯ talent measure ಮಾಡುವಂಥ ಸಂಸ್ಥೆಗಳನ್ನು ಜೊತೆಗೂಡಿಸಿ ಯಾರಿಗೆ ಅರ್ಹತೆಯಿದೆ, ಯಾರಿಗೆ ನಾವು ಬಂಡವಾಳ ಕೊಡುವುದರಿಂದ ಅವರು ಒಂದು ಒಳ್ಳೆಯ ಸಂಸ್ಥೆಯನ್ನು ಪ್ರಾರಂಭಿಸಬಲ್ಲರು ಎನ್ನುವ ಪ್ರತಿಭೆಗಳನ್ನು ಗುರುತಿಸುವ ಪ್ರಯತ್ನ ಮಾಡಿ, ಅವರಿಗೆ subsidized cost ನಲ್ಲಿ ನೀಡಬೇಕು. ನೀವು ಹೊರಗೆ ಹೋದರೆ Private Equity Firms ask for 30-35 percent. ಆ risk factor ಅನ್ನು ನಮ್ಮ ಕಡೆಯಿಂದ ನಾವೇನಾದರೂ leverage ಮಾಡುವುದಕ್ಕಾಗುತ್ತದೆಯೇ? ಆ leverage ಮಾಡಿರುವಂಥ benefit ಅನ್ನು ಯಾರು promoters ಇರುತ್ತಾರೆಯೋ ಅವರಿಗೆ ಕೊಡುವುದಕ್ಕಾಗುತ್ತದೆಯೇ? ಅದರ ಮೂಲಕ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿಮ್ಮ ಸೆಂಟರ್‌ಗಳನ್ನು setup ಮಾಡಿದರೆ, ಸಂಸ್ಥೆಯನ್ನು ಪ್ರಾರಂಭಿಸಿದರೆ ಮುಂದಿನ ಐದು ವರ್ಷಗಳ risk quotient ಅನ್ನು ನಾವು cover ಮಾಡುತ್ತೇವೆ. ಯಾರೋ Private Equity ಯಲ್ಲಿ 35 percent ಕಟ್ ಮಾಡಿಕೊಳ್ಳುವ ಬದಲು ಆ ರಿಸ್ಕ್ ಅನ್ನು ನಾವು bear

ಮಾಡುತ್ತೇವೆಂದು ಹೇಳಿ ಸರ್ಕಾರ ಇವರೊಂದಿಗೆ ಕೈಜೋಡಿಸಬೇಕು. ಅವರ ಜೊತೆಯಲ್ಲಿ ನಾವು ಒಡಂಬಡಿಕೆಗಳನ್ನು ಮಾಡಿಕೊಂಡು ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಂಸ್ಥೆಗಳನ್ನು ಪ್ರಾರಂಭ ಮಾಡುವ ಪ್ರಯತ್ನ ಮಾಡಬೇಕು. ಕಲಬುರಗಿ ಭಾಗದಲ್ಲಿ ಅತಿಹೆಚ್ಚು ಪ್ರತಿಭೆಗಳಿವೆ. ಇತ್ತೀಚೆಗೆ ತಾವು ನೋಡಿರಬಹುದು. ಎ.ಐ. ಸಂಸ್ಥೆಯಾದ ಆಂಥ್ರೋಪಿಕ್‌ನ ಮುಖ್ಯಸ್ಥರು ನಮ್ಮ ಕರ್ನಾಟಕದವರೇ ಆದ ರಾಹುಲ್ ಪಾಟೀಲ್ ಅವರು ಈ ಭಾಗದಲ್ಲಿಯೇ ಓದಿ ಬೆಳೆದವರು, ಇಂದು ವಿಶ್ವದ ಅತಿ ದೊಡ್ಡ ಎ.ಐ. ಸಂಸ್ಥೆಯನ್ನು ಪ್ರಾರಂಭ ಮಾಡಿದ್ದಾರೆ ಎಂದು ನಮಗೆ ಬಹಳ ಹೆಮ್ಮೆಯಾಗುತ್ತದೆ. ಮತ್ತೊಬ್ಬರು ನಮ್ಮ ಕರ್ನಾಟಕದವರೇ 22 ವರ್ಷಕ್ಕೆ ಫೇಸ್‌ಬುಕ್‌ನ ಸಂಸ್ಥಾಪಕನಿಗಿಂತಲೂ ಹೆಚ್ಚಿನ ಸಾಧನೆಯನ್ನು ಮಾಡಿದ್ದಾರೆ. ಇಂತಹ ಪ್ರತಿಭೆಗಳಿಗೆ ಅವರ ತಂದೆ ತಾಯಿ ಬಹಳ ಬುದ್ಧಿವಂತರಾಗಿದ್ದರು ಎಂದಲ್ಲ. ಅತ್ಯಂತ ಮಧ್ಯಮ ವರ್ಗ, ಬಡತನದ ವರ್ಗದಿಂದ ಓದಿ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಉದ್ಯೋಗ ಮಾಡಿರುವಂಥವರು ನಮ್ಮ ಉತ್ತರ ಕರ್ನಾಟಕದವರು ಎಂದು ಹೇಳಿಕೊಳ್ಳುವುದಕ್ಕೆ ನನಗೆ ಬಹಳ ಹೆಮ್ಮೆಯಿದೆ. ಆದ್ದರಿಂದ ತಾವು ಈ ಕೆಲಸವನ್ನು ಮಾಡಬೇಕು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೆ, ಖಂಡಿತವಾಗಿಯೂ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಇಂಥ ಕಾರ್ಯಕ್ರಮ ಈಗಾಗಲೇ ನಮ್ಮ ಸರ್ಕಾರದಲ್ಲಿದೆ. ಮಾನ್ಯ ಸದಸ್ಯರು ನವೋದ್ಯಮಗಳಿಗೆ funding ಕೊಡಬೇಕೆಂದು ಏನು ಹೇಳುತ್ತಿದ್ದಾರೆ, ಇಡೀ ರಾಷ್ಟ್ರದಲ್ಲಿ Elevate ಎನ್ನುವ ಕಾರ್ಯಕ್ರಮವನ್ನು ನನ್ನ ಹಿಂದಿನ ಅವಧಿಯಲ್ಲಿ ನಮ್ಮ ಸರ್ಕಾರವೇ ಪ್ರಾರಂಭ ಮಾಡಿದೆ. 'Startup India' ಗಿಂತಲೂ ಮುಂಚೆ ನಮ್ಮ startup policy ಬಂದಿತ್ತು. 'Startup India' ಗಿಂತಲೂ ಮುಂಚೆ ನಮ್ಮ ಫಂಡ್ ಬಂತು.

ಮಾನ್ಯ ಸಭಾಪತಿಯವರೆ, ಇಡೀ ವಿಶ್ವದಲ್ಲಿಯೇ ಯಾವ ಸರ್ಕಾರ ಕೂಡ 1500 ನವೋದ್ಯಮಗಳಿಗೆ ಪ್ರೋತ್ಸಾಹ ಧನವನ್ನು ನೀಡಿರುವುದಿಲ್ಲ. ಅದನ್ನು ನೀಡಿರುವುದು ಕರ್ನಾಟಕ ಸರ್ಕಾರ. Up to Rs. 50 lakh grants will be given for 1500 startups. There is no loan, no equity. ಈಗ 18.11.2025ರಲ್ಲಿ "Deep Tech Decade" ಎಂದು ನಾವು ಈಗಾಗಲೇ declare ಮಾಡಿದ್ದೇವೆ. We are raising the bar for Deep Tech Technologies up to Rs. One crore. ಮಾನ್ಯ ಸದಸ್ಯರು ಹೇಳಿದಂತೆ ನಮ್ಮ ರಾಜ್ಯದಲ್ಲಿ ಪ್ರತಿಭೆ ಹೇಗಿದೆಯೆಂದರೆ ನಾವು 15 ದಿನಗಳ ಕಾಲ ಈ elevate challenge open ಮಾಡಿದ್ದೆವು. Almost 1,700 startups are registered. ಸಂತೋಷದ ವಿಷಯವೇನೆಂದರೆ ನಮ್ಮಲ್ಲಿ ಯಾವ ನವೋದ್ಯಮಗಳು ರಿಜಿಸ್ಟರ್ ಆಗಿವೆಯೋ, ಅವುಗಳಲ್ಲಿ 28 percent of them are women-led startups and more than 32 percent are from Tier-1 and Tier-2 cities. ಈ ವಿಷಯದಲ್ಲಿ ದೇಶಕ್ಕೆ ನಾವು ದಾರಿದೀಪ ಆಗಿದ್ದೇವೆ. In fact ಮೊನ್ನೆ ನಡೆದ 'India AI Impact Summit' ಗೆ ಹೋದಾಗ ಇರಬಹುದು, 'SEMICON India' ನಲ್ಲಿರಬಹುದು, ನಮ್ಮ ನೀತಿಗಳನ್ನೇ ಅಳವಡಿಸಿಕೊಳ್ಳಲಾಗುತ್ತಿದೆ. Elevate is a very successful

programme. ಬಹಳ ಪಾರದರ್ಶಕವಾಗಿದೆ. Elevate, Kalyan Karnataka ಅನ್ನು ನಾವು ಪ್ರತ್ಯೇಕವಾಗಿ ಮಾಡುತ್ತಿದ್ದೇವೆ. ಕೆಕೆಆರ್‌ಡಿಬಿಯಿಂದಲೂ ಅನುದಾನ ತೆಗೆದುಕೊಳ್ಳುತ್ತಿದ್ದೇವೆ ಮತ್ತು ನಮ್ಮ ಇಲಾಖೆಯಿಂದಲೂ ಕೊಡುತ್ತಿದ್ದೇವೆ. ಅದನ್ನು ಹೊರತು ಪಡಿಸಿ ಬೇರೆ ಬೇರೆ ಇಲಾಖೆಗಳಿಗೂ ಈ ನವೋದ್ಯಮದಲ್ಲಿ ಪ್ರೋತ್ಸಾಹ ಕೊಡಬೇಕು ಎಂದು ಅವರ ಅನುದಾನವನ್ನು ತೆಗೆದುಕೊಂಡು ಮಾಡುತ್ತಿದ್ದೇವೆ.

**(ಮುಂದು)**

(371) 13.03.2026, 11.10, ಕೆಜಿ : ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):-**

The only reason why we are leaders in startups is because of our startup policy and our human resourses. ಮಾನ್ಯ ಸದಸ್ಯರು ಹೇಳಿದಂತೆ, Anthropic ನಂತಹ ಸಂಸ್ಥೆಗಳು ಇವತ್ತು ನೇರವಾಗಿ ಬೇರೆ ಯಾವ ರಾಜ್ಯ ಸರ್ಕಾರದ ಜೊತೆಗೂ ಅವರು ಚರ್ಚೆ ಮಾಡದೇ ನೇರವಾಗಿ ಬಂದು ಕರ್ನಾಟಕ ರಾಜ್ಯ ಸರ್ಕಾರದ ಜೊತೆಗೆ ಚರ್ಚೆ ಮಾಡಿದ್ದಾರೆ. ನಾವು ಅವರ ಜೊತೆಗೆ ಯಾವ ರೀತಿ skill development ಇನ್ನಿತರ ಮುಂದಿನ ಯೋಜನೆಗಳಿಗೆ ಹೇಗೆ ಅವರ ಜೊತೆಗೆ ಕೈಜೋಡಿಸಬೇಕೆಂದು ಸಹ ಮಾತನಾಡಿದ್ದೇವೆ. Anthropic ಇರಬಹುದು ಅಥವಾ ಬೇರೆ ಬೇರೆ ಸಂಸ್ಥೆಗಳು ಇರಬಹುದು, ಎಲ್ಲವೂ ಕೂಡ. ನಮ್ಮ ಸಂಪನ್ಮೂಲ ಇರಬಹುದು, ನಮ್ಮ ನೀತಿಗಳು ಇರಬಹುದು, ಮತ್ತೆ ಇಲ್ಲಿ ನಮ್ಮ ಬಂಡವಾಳದ ವಾತಾವರಣ ಇದೆ, ಅದನ್ನು ನೋಡಿಕೊಂಡು ಬರುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿರುವಂತಹ ಸಲಹೆಗಳನ್ನು ಈಗಾಗಲೇ ಅಳವಡಿಸಿಕೊಂಡಿದ್ದೇವೆ. ಅದರ ಜೊತೆಗೆ ಮಾನ್ಯ ಸದಸ್ಯರು ಹೇಳಿದಂತೆ ಇನ್ನು ಹೆಚ್ಚಿನ ರೀತಿಯಲ್ಲಿ ಪೋತ್ಸಾಹ ನೀಡುತ್ತೇವೆ. Especially ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, Old Mysore Region ಮತ್ತು ಕರಾವಳಿ ಪ್ರದೇಶ ಈ Local Accelerator Progamme ನಲ್ಲಿ cluster based approach ಇಟ್ಟುಕೊಂಡಿದ್ದು, ನಾವು ಖಂಡಿವಾಗಿ ಅದನು ಮಾಡುತ್ತೇವೆ.

**ಸಭಾಪತಿಯವರು:-** ಶ್ರೀ ಎಸ್.ಕೇಶವಪ್ರಸಾದ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಹೇಳಬೇಡಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಚಿವರೇ, ದಯವಿಟ್ಟು "Tech Summit" ಅನ್ನು ಕಲಬುರಗಿಯಲ್ಲಿ ಮಾಡಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಉತ್ತರ ಹೇಳಬೇಡಿ. ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಹೇಳುವುದು ಬೇಡ. ಒಂದು "Tech Summit" ಅನ್ನು ಬೆಂಗಳೂರಿನಲ್ಲಿ ಮಾಡುವುದನ್ನು ಬಿಟ್ಟು ಅದನ್ನು ಕಲಬುರಗಿಯಲ್ಲಿ ಮಾಡಿ.

**ಸಭಾಪತಿಯವರು:-** ಶ್ರೀ ಕೆ.ಎಸ್.ನವೀನ್‌ರವರೇ, ತಾವು ಏನು ಹುಡುಗಾಟಿಕೆ ಮಾಡುತ್ತೀರಾ?

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಂಗಳೂರು, ಹುಬ್ಬಳ್ಳಿ, ಕಲಬುರಗಿ ಹಾಗೂ ಮೈಸೂರಿನಲ್ಲಿ ಮಾಡುತ್ತೇವೆ. ಅದಾದ ಮೇಲೆ ಬೆಂಗಳೂರು "Tech Summit" ಆಗುತ್ತದೆ.

ಪ್ರಶ್ನೆ ಸಂಖ್ಯೆ 1137
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಎಸ್.ಕೇಶವ ಪ್ರಸಾದ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಇರುವಂತಹ ಕೆಲವಾರು ಸಂಗತಿಗಳ ಬಗ್ಗೆ ನಾನು ತಮ್ಮ ಮೂಲಕ ಬೆಳಕನ್ನು ಚೆಲ್ಲುವುದಕ್ಕೆ ಇಷ್ಟ ಪಡುತ್ತೇನೆ. ನಮಗೆ 2 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಾರೆ. ನಾವು ಈ 2 ಕೋಟಿ ರೂಪಾಯಿಗಳಲ್ಲಿ ಯಾರಿಗಾದರೂ ಪತ್ರವನ್ನು ಕೊಡುತ್ತೇವೆ. ಆ ಪತ್ರ inward, outward ಎಂದು ಒಂದಷ್ಟು ಸಮಯವಾಗುತ್ತದೆ. ಆಮೇಲೆ ಅವರು ಏನಾದರೂ ತೆಗೆದುಕೊಂಡು ಹೋಗಿ ತೋರಿಸಿದರೆ, ಅದಕ್ಕೆ ಏನೂ ಬೆಲೆ ಸಿಗುವುದಿಲ್ಲ. ಅವರು ಯಾರು ಗುತ್ತಿಗೆದಾರರು ಇರುತ್ತಾರೆಯೋ, ಆ ಗುತ್ತಿಗೆದಾರರ ಮೂಲಕ ಅದು ಹೋದರೆ ಅದಕ್ಕೆ ತೂಕ ಬಂದುಬಿಡುತ್ತದೆ. ಅಷ್ಟೊತ್ತಿಗೆ ಸಮಯ ಮೀರುತ್ತಿರುತ್ತದೆ. ಹಾಗೆಯೇ, ಅಲ್ಲಿ ಸ್ಥಳೀಯವಾಗಿ ಆ login ಮತ್ತು ಅದರ ಸಮಸ್ಯೆಗಳು ಈ ತರಹದ್ದು ಇರುತ್ತದೆ. ಇದರ ಮಧ್ಯದಲ್ಲಿ ಕೂಡ ನಾವು ಕೊಟ್ಟಿರುವಂತಹದ್ದು ಉಪಯೋಗವಾಗುವುದರಲ್ಲಿ ಖಂಡಿತವಾಗಿ ವಿಳಂಬವಾಗುತ್ತಿದೆ. ನಾನು ವಾಸ್ತವಿಕತೆಯನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಮಾನ್ಯ ಸಚಿವರಿಂದ ಇದಕ್ಕೆ ಉತ್ತರ ಬಂದ ಮೇಲೆ ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸದಸ್ಯರು ಚರ್ಚೆ ಮಾಡಿರುವಂತಹ ವಿಷಯಕ್ಕೆ 2 ವರ್ಷಗಳ ಕಾಲ ಸಮಯ ಇರುತ್ತದೆ. ಒಂದು ಕಾಮಗಾರಿಯನ್ನು ಪಾರಂಭ ಮಾಡಿ ಅದನ್ನು ಮುಕ್ತಾಯ ಮಾಡುವುದಕ್ಕೆ 2 ವರ್ಷಗಳ ಕಾಲ ಸಮಯ ಇರುತ್ತದೆ. ಆ ಕಾಮಗಾರಿ 2 ವರ್ಷಗಳಾದರೂ ಸಹ ಪ್ರಾರಂಭವಾಗಲಿಲ್ಲವೆಂದರೆ, ಅದು lapse ಆಗುತ್ತದೆ. ಈಗಾಗಲೇ ಆ ಬಗ್ಗೆ ಮಾರ್ಗ ಸೂಚಿಗಳನ್ನು ಹೊರಡಿಸಿ ದ್ದೀವೆ. ಅದು time bound ಒಳಗೆ ಆ order issue ಮಾಡಿ ಅದು implement ಆಗಬೇಕೆಂದು ಮಾಡಿದ್ದೇವೆ. ಅದು ಡಿ.ಸಿ.ಯವರು ಇರಬಹುದು ಅಥವಾ ಸಂಬಂಧಪಟ್ಟ ಏಜೆನ್ಸಿಯವರು ಇರಬಹುದು, ಈಗಾಗಲೇ time bound fix ಮಾಡಿ ಅದನ್ನು ಕಾಲಮಿತಿಯ ಒಳಗೆ ಕೆಲಸ ಮಾಡುವುದಕ್ಕೆ ಪ್ರಾಮಾಣಿಕವಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಎಸ್.ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಏನಾಗುತ್ತದೆ ಎಂದರೆ, ನಾವು ಪತ್ರ ಕೊಡುತ್ತೇವೆ. ಪತ್ರ ಕೊಡುವಷ್ಟರಲ್ಲಿ ಒಂದು ತಿಂಗಳು ಕಾಲ ಕಳೆದು ಹೋಗುತ್ತದೆ. ಆಮೇಲೆ ಅವರು ಆ ಕಛೇರಿಗೆ ಹೋಗಿ ತಿರುಗಾಡುತ್ತಾರೆ. ಅಂದರೆ, ಅದಕ್ಕೆ ಎಲ್ಲಿ grant ಸಿಗಬೇಕೋ ಅಲ್ಲಿಗೆ ಓಡಾಡುತ್ತಾರೆ. ಆದರೆ, ಅಲ್ಲಿ ಅವರಿಗೆ ಸರಿಯಾದಂತಹ ಉತ್ತರ ಸಿಗುವುದಿಲ್ಲ. ಆಗ ಅದಕ್ಕೆ ಅಷ್ಟು ದಿವಸ ಸಮಯ ಆಗುತ್ತದೆ? ಅಷ್ಟೋತ್ತಿಗೆ ಸುಮಾರು 3-4 ತಿಂಗಳ ಕಾಲ ಅವರಧಿ ಕಳೆದು ಹೋಗಿರುತ್ತದೆ. ಮಾನ್ಯ ಸಚಿವರು ಇದರ practical ಸಮಸ್ಯೆಯನ್ನು ಸ್ವಲ್ಪ

ಅರ್ಥಮಾಡಿಕೊಳ್ಳಬೇಕು. ಒಂದು ವೇಳೆ ಆಕಸ್ಮಾತ್ ಆ ಎರಡು ವರ್ಷಗಳ ಅವಧಿಯಲ್ಲಿ ಯಾವುದೋ ಒಂದು ಕಾರಣದಿಂದ ಅದು ಆಗಲಿಲ್ಲವೆಂದರೆ, ಅದನ್ನು ಮೂರು ವರ್ಷದಲ್ಲಿ ಕೊಡುತ್ತೀರಾ? ಮೂರು ವರ್ಷದಲ್ಲಿ ಕೊಡುವಂತಹ ಯೋಜನೆ ಇದೆಯೇ? ಇದರಲ್ಲಿ ಇರುವಂತಹ ಉತ್ತರದ ಮೇಲೆ ಒಂದು clarification ಬೇಕಾಗಿದೆ.

ಮಾನ್ಯ ಸಭಾಪತಿಯವರೇ, ನಮಗೆ 2 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಾರೆ. ನಾವು ಇಡೀ ರಾಜ್ಯದಲ್ಲಿರುವಂತಹ ಸಂಸ್ಥೆಗಳಿಗೆ ಕೊಡುವಂತಹ ಸಾರ್ಮರ್ಥ್ಯ ಇರುವಂತಹದ್ದು ಕೆಲವರಿಗೆ ಮಾತ್ರ. ಈ ಕೆಲವರಿಗೆ ಕೊಡುವಂತಹದ್ದರಲ್ಲಿಯೂ ಸಹ ಇವರು ಆ technical issues ಅನ್ನು raise ಮಾಡುತ್ತಾರೆ. ಅಂದರೆ, ನೀವು ಯಾರೋ ಸರಿಯಾದಂತಹ ಏಜೆನ್ಸಿ ಮೂಲಕ ಬಂದಿಲ್ಲ, ಇದು ಇಲ್ಲಿ ಕೆಲಸ ನಡೆಯುವುದಿಲ್ಲವೆಂದು ಹೇಳುತ್ತಾರೆ. ಅಷ್ಟೊತ್ತಿಗೆ ಅಕಸ್ಮಾತ್ time lapse ಆದರೆ, ಅದು ಸಾರಾಸಗಟಾಗಿ reject ಆಗುತ್ತದೆ. ಮಾನ್ಯ ಸಚಿವರ ಉತ್ತರದಲ್ಲಿ "ಈ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು ಹಾಗೂ ಆ ಅನುದಾನವನ್ನು ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ಜಮೆ ಮಾಡತಕ್ಕದ್ದು" ಎಂದು ನೀಡಿದ್ದಾರೆ. ನನಗೆ ಸಿಕ್ಕಿರುವಂತಹ ಅನುದಾನ ಬ್ಯಾಂಕಿಗೆ ಜಮೆಯಾದ ಮೇಲೆ ಅದು ಅಲ್ಲಿಯೇ ಇರಬೇಕಲ್ಲವೇ: ಅಕಸ್ಮಾತ್ ಯಾವುದೋ ಒಂದು ಕಾರಣದಿಂದ ಅದು lapse ಆಗಿ ಹೋಯಿತು. ಆದರೆ, ಈಗ ನನಗೆ ಗೊತ್ತಿರುವಂತಹ ಹಾಗೆ ನನಗೆ ಸಿಕ್ಕಿರುವಂತಹ ಅನುದಾನದಲ್ಲಿ 55 ಲಕ್ಷ ರೂಪಾಯಿಗಳು ಅನುಪಯೋಗಿ ಆಗಿದೆ. ಅಂದರೆ, ನನಗೆ ಸಿಗುವಂತಹ ಒಂದು ವರ್ಷದ ಎರಡು ಕೋಟಿ ರೂಪಾಯಿಗಳ ಅನುದಾನದಲ್ಲಿ ಈಗ ಮೂರು ವರ್ಷದಲ್ಲಿ 55 ಲಕ್ಷ ರೂಪಾಯಿಗಳು lock ಆಗಿದೆ, ನಾನು ಏನು ಮಾಡಬೇಕು? ಇದಕ್ಕೆ ಏನಾದರೂ ಉಪಯೋಗ ಇದೆಯೇ? ಇದೇರೀತಿ ಬೇರೆಯವರದ್ದು ಆಗಿರಬಹುದು.

ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಬಹಳ ಗಂಭೀರವಾಗಿದೆ. ನನ್ನದು ಇಷ್ಟು ಆಗಿದೆ. ಹಾಗಾಗಿ, ಅದನ್ನು ತೆಗೆದುಕೊಂಡು ತಮ್ಮ ಮೂಲಕ ನಮಗೆ ಕೊಡುವಂತಹ ಅನುದಾನವನ್ನು 5 ಕೋಟಿ ರೂಪಾಯಿಗಳು ಮಾಡಿ ಎಂದು ಸರ್ಕಾರಕ್ಕೆ ಮಾನ್ಯ ಸದಸ್ಯರೆಲ್ಲರೂ 3-4 ಬಾರಿ ಮನವಿಯನ್ನು ಮಾಡಿದ್ದೇವೆ. ಇದಕ್ಕೆ ಸರ್ಕಾರದಿಂದ ಯಾವುದೇ ರೀತಿಯ ಉತ್ತರ ಇಲ್ಲ. ಹಾಗಾಗಿ, ಅನುದಾನವನ್ನು ಏನಾದರೂ ಸ್ವಲ್ಪ ಹೆಚ್ಚಿಗೆ ಮಾಡಬೇಕೆಂದು ಕೇಳಿದ್ದೇನೆ. ಇರುವಂತಹ 2 ಕೋಟಿ ರೂಪಾಯಿಗಳಲ್ಲಿ ಈ ರೀತಿ ಸಮಸ್ಯೆ ಆದಂತಹ ಸಂದರ್ಭದಲ್ಲಿ ಏನು ಪರಿಹಾರ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, ಬಹುತೇಕ ಮಾನ್ಯ ಶಾಸಕರು ಇರಬಹುದು ಅಥವಾ ಮಾನ್ಯ ಸದಸ್ಯರು ಇರಬಹುದು, ನನ್ನ ಪ್ರಕಾರ, ಇಂತಹ ಸಮಸ್ಯೆಗಳು ಉದ್ಭವಾಗುವುದು ಬಹಳ ವಿರಳ.

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರದ್ದು ಹೋಗಿದೆ.

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಬಂದ ಮೇಲೆ ಆ ರೀತಿ ಆಗಿಲ್ಲ. ಮಾನ್ಯ ಸದಸ್ಯರಾದ ಎಸ್.ಕೇಶವಪ್ರಸಾದ್‌ರವರು ಈಗ ಎರಡು ವರ್ಷಗಳು ಆದಮೇಲೆ ಅದನ್ನು ಮತ್ತೆ ವಾಪಸ್ಸು ಕೊಡುವಂತಹ ಪದ್ಧತಿ ಇದೆಯೇ ಕೇಳಿದ್ದಾರೆ. ಆ ರೀತಿ ಇದ್ದರೆ, ತಾವುಗಳು ಪತ್ರವನ್ನು ಕೊಡಿ. ಅದು ಎಲ್ಲಿ lapse ಎಂಬುದನ್ನು ಪರಿಶೀಲನೆ ಮಾಡಿ ಅದನ್ನು ವಾಪಸ್ಸು ಕೊಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಎಸ್.ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು clarification ಅನ್ನು ಕೇಳುತ್ತೇನೆ. ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಚಿವರು ಆ ರೀತಿ ಕೊಡುತ್ತೇನೆ ಎಂದು ಹೇಳಿದ ಉತ್ತರಕ್ಕೆ ನಾನು ಸಂತೋಷಪಟ್ಟಿದ್ದೇನೆ. ಆದರೆ, Finance Department ನವರು ತಕರಾರು ತೆಗೆಯುತ್ತಾರೆ. ಅದಕ್ಕೆ ಮಾನ್ಯ ಸಚಿವರು ಪತ್ರ ಬರೆದಾಗಲೂ ಸಹ, ಅದು lapse ಆಗಿ ಹೋಗಿದೆ, ಅದು ಬ್ಯಾಂಕಿಗೆ ವಾಪಸ್ಸು ಹೊರಟು ಹೋಗಿದೆ. ಹಾಗಾಗಿ, Finance Department ನವರಿಗೆ ಅದರ permission ಇಲ್ಲ, ನಮಗೂ ಸಹ ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂಬ ಉತ್ತರ ಸಹಜವಾಗಿ ಬರುತ್ತದೆ. ಹಾಗಾಗಿ, ಮಾನ್ಯ ಸಚಿವರ ಉತ್ತರದ ಆಧಾರದ ಮೇಲೆ Finance Department ನವರು ಏನು ಹೇಳುತ್ತಾರೆ ಎಂಬುದರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು clarification ಕೊಡಬೇಕು. ನನ್ನದೇ 50 ಲಕ್ಷ ರೂಪಾಯಿಗಳು lapse ಆಗಿವೆ. ಅದಕ್ಕೆ ಕಾರಣಗಳು ಏನೇನೂ ಇರಬಹುದು. ಆದರೆ, ಇದನ್ನು ಸರಿಯಾದಂತಹ ಜನರಿಗೆ ಕೊಟ್ಟಿದ್ದು ಇರುತ್ತದೆ. ಇದಕ್ಕೆ ಕಾರಣಗಳು ಬೇರೆ ಇದೆ. ಈ ಸಂದರ್ಭದಲ್ಲಿ ಮತ್ತೆ ನಾವು ಪತ್ರ ಕೊಟ್ಟರೆ, ಮಾಡಿಕೊಡುತ್ತೇನೆಂದು on the floor of the House ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅಂದರೆ, ಮಾನ್ಯ ಸಚಿವರು ಪತ್ರ ಕೊಟ್ಟ ಮೇಲೆಯೂ Finance Department ನವರು ಇದನ್ನು ಮಾನ್ಯ ಮಾಡುವುದಿಲ್ಲವೆಂದರೆ, ಅದಕ್ಕೆ ಏನು ಮಾಡಬೇಕು?

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಇದಕ್ಕೆ ಉತ್ತರವನ್ನು ನೀಡಿದ್ದೇನೆ. ಆದಷ್ಟು ಅದನ್ನು ಎರಡು ವರ್ಷಗಳಲ್ಲಿ ಉಪಯೋಗಿಸುವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದು lapse ಆಗಬಾರದು. ಮಾನ್ಯ ಸದಸ್ಯರುಗಳು ಬೇರೆ ಬೇರೆ ಕಾರ್ಯಕ್ರಮಗಳಿಗೆ ಕೊಟ್ಟಿರುತ್ತಾರೆ. ಅದಕ್ಕೆ ಕೆಲವು defect ತೆಗೆದಿರುತ್ತಾರೆ. ಹಾಗಾಗಿ, ಅದು lapse ಆಗಬಾರದು. ಸರ್ಕಾರ ಮತ್ತೆ ಅದನ್ನು ವಾಪಸ್ ಕೊಡಬೇಕು. ಇಷ್ಟು ಮಾಡಿ.

**ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ಪತ್ರ ಕೊಟ್ಟರೆ, ಅದನ್ನು ಪರಿಶೀಲನೆ ಮಾಡಿ ವಾಪಸ್ಸು ಕೊಡುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಎರಡು ವರ್ಷಗಳಿಗೆ ಇರುವುದನ್ನು ಮೂರು ವರ್ಷಗಳಿಗೆ ಮಾಡಿದರೆ ಯಾರಿಗೂ ಸಮಸ್ಯೆ ಇರುವುದಿಲ್ಲ.

**ಸಭಾಪತಿಯವರು:-** ಈಗ ಯಾರು ಮಾತನಾಡಬೇಡಿ. ನಾನು ನಿಮ್ಮೆಲ್ಲರ ಪರವಾಗಿ ಹೇಳಿದ್ದೇನೆ. ಎಲ್ಲರೂ ಕುಳಿತುಕೊಳ್ಳಿ. ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರುವಂತಹ ವಿಷಯವಾಗಿದೆ. ಹಾಗಾಗಿ, ಇದಕ್ಕೆ ಮಾನ್ಯ ಸಚಿವರಿಂದ ಸಮಂಜಸವಾದ ಉತ್ತರ ಬರಲಿ ಎಂದು ಕೇಳುತ್ತಿದ್ದೇವೆ. ಆದರೆ, ತಾವು ನಮ್ಮ ಸಹಕಾರಕ್ಕೆ ಬರಲಿಲ್ಲವೆಂದರೆ, ಮತ್ತೆ ಯಾರು ನಮ್ಮ ಸಹಕಾರಕ್ಕೆ ಬರುತ್ತಾರೆ? ತಾವು ನಮಗೆ ರಕ್ಷಣೆ ಕೊಡಬೇಕು ಅಲ್ಲವೇ?

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ತಮ್ಮ ಪರವಾಗಿ ನಾನು ಹೇಳಿದ್ದೇನೆ. ಇದು ಪ್ರಶ್ನೋತ್ತರ ವೇಳೆ. ಅದಕ್ಕೆ ಈಗ ಯಾರು ಮಾತನಾಡುವುದು ಬೇಡ. ತಾವು half an hour discussion ಗೆ letter ಕೊಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ಮಾನ್ಯ ಸಚಿವರಿಂದ ಉತ್ತರವನ್ನು ತೆಗೆದುಕೊಳ್ಳಿ. ಇದು ಎಲ್ಲಾ ಸದಸ್ಯರ ಅಭಿಪ್ರಾಯವಾಗಿದೆ. ಮಾನ್ಯ ಸಚಿವರು Finance Department ನ ಜವಾಬ್ದಾರಿ ನನ್ನದೇ ಎಂದು ಹೇಳಲಿ. ನಾವು ಕುಳಿತುಕೊಳ್ಳುತ್ತೇವೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ತಾವು ಅಡ್ಡ ಅಡ್ಡ ಮಾತನಾಡಬೇಡಿ. ಮಾನ್ಯ ಸಚಿವರು ಅದನ್ನು ಹೇಗೆ ಹೇಳುತ್ತಾರೆ? ಅದಕ್ಕೆ ತಾವು ಅದನ್ನು half an hour discussion ಚರ್ಚೆಗೆ ತೆಗೆದುಕೊಳ್ಳಿ. ಡಾ॥ ತಳವಾರ್ ಸಾಬಣ್ಣನವರೇ, ತಾವು ಇವತ್ತು ಟೋಪಿಯನ್ನು ಏಕೆ ತೆಗೆದು ಬಂದಿದ್ದೀರಿ?

**ಡಾ॥ ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇವತ್ತು ಇಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇದನ್ನು ಅರ್ಧ ಗಂಟೆ ಕಾಲ ಚರ್ಚೆ ಕೊಡಿ.

**ಸಭಾಪತಿಯವರು:-** ಆಯಿತು. Agreed, agreed. ಎಲ್ಲರೂ ಸುಮ್ಮನೆ ಕುಳಿತುಕೊಳ್ಳಿ. ತಾವು ಕೊಡಿ. ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶ ಕೊಡುತ್ತೇನೆ. ಡಾ॥ ತಳವಾರ್ ಸಾಬಣ್ಣನವರೇ, ತಾವು ಇವತ್ತು ಕಾಂಗ್ರೆಸ್‌ನ ಬಟ್ಟೆಯನ್ನು ಹಾಕಿಕೊಂಡು ಬಂದಿದ್ದೀರಿ.

**ಪ್ರಶ್ನೆ ಸಂಖ್ಯೆ 1286**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ತಳವಾರ್ ಸಾಬಣ್ಣ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನ್ನ ಮೈಮೇಲಿನ ಬಟ್ಟೆ ಬದಲಾಗುತ್ತಿವೆ. ನಿನ್ನೆ ದಿವಸ ಕಾಂಗ್ರೆಸ್ ಟೋಪಿಯನ್ನು ಹಾಕಿಕೊಂಡು ಇದ್ದೆ. ಇವತ್ತು ಇದನ್ನು ಹಾಕಿಕೊಂಡಿದ್ದೇನೆ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ತಾವು ಅವರು ಏಕೆ ಹಾಕಿಕೊಂಡಿದ್ದಾರೆಂದು ಕೇಳಬೇಕಲ್ಲವೇ?

**ಡಾ॥ ತಳವಾರ್ ಸಾಬಣ್ಣ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿನ್ನೇ ದಿವಸ ಹಾಕಿಕೊಂಡಿದ್ದೇನೆಂದು ಹೇಳಿದರು. ಅದಕ್ಕೆ ನಾನು ಅದನ್ನು ಘಂಟಾಘೋಷವಾಗಿ ಹೇಳಿದ್ದೇನೆ. ನನ್ನ ಪ್ರಶ್ನೆ ಪರಿಶಿಷ್ಟ ಜಾತಿಯಲ್ಲಿ ಬರುವಂತಹ 49 ಅಲೆಮಾರಿ ಜನಾಂಗಗಳಿಗೆ ಸಂಬಂಧಪಟ್ಟಿದ್ದು ಇದೆ. ಅದರಲ್ಲೂ ವಿಶೇಷವಾಗಿ ಕಲಬುರಗಿ ನಗರದಲ್ಲಿರುವಂತಹ ಬುಡಗ ಜಂಗಮ, ಸುಡುಗಾಡು ಸಿದ್ದರು, ದಕ್ಕಲಿಗರು, ಚನ್ನದಾಸರು ಹಾಗೂ ಇನ್ನಿತರ ಅಲೆಮಾರಿ ಜನಾಂಗಗಳ ಬಗ್ಗೆ ಸಂಬಂಧ ಇದೆ. ಇವರು ಸರಿಸುಮಾರು ನಮ್ಮ ರಾಜ್ಯದಲ್ಲಿ 4 ಲಕ್ಷದಷ್ಟು ಜನಸಂಖ್ಯೆ ಇದೆ. ಈ ಅಲೆಮಾರಿಗಳು ಇವತ್ತು ಬಯಲು ಪ್ರದೇಶಗಳಲ್ಲಿ, ಯಾರದ್ದೋ ಖಾಸಗಿ ಜಮೀನಿನಲ್ಲಿ ಅಥವಾ ಸರ್ಕಾರಿ ಜಮೀನನಲ್ಲಿ ಗುಡಿಸಲು ಹಾಕಿಕೊಂಡು ಅವರು ಜೀವನ ಮಾಡುತ್ತಾರೆ. ಅದರಲ್ಲಿ ವಿಶೇಷವಾಗಿ ಕಲಬುರಗಿ ನಗರದಿಂದ ಶಹಾಬಾದ್‌ಗೆ ಹೋಗಬೇಕಾದ ಪ್ರದೇಶದಲ್ಲಿ ಬುಡುಗ ಜಂಗಮರು ಇದ್ದಾರೆ.

(ಮುಂದು)

(372) 13.03.2026/11.20/ಎಂವಿ-ಎಕೆ **(ಸಭಾಪತಿಯವರ ಉಪಸ್ಥಿತಿ)**

**ಡಾ: ತಳವಾರ ಸಾಬಣ್ಣ (ಮುಂದು):-**

ಆಮೇಲೆ ಅಲ್ಲಿ ಆಳಂದ ನಾಕಾ ಎಂದು ಇದೆ. ಅಲ್ಲಿಯೂ ಸಹ ಈ ಬುಡಗ ಜಂಗಮದವರು ಇದ್ದಾರೆ. ನಾನೇ ಅಲ್ಲಿಗೆ ವೈಯಕ್ತಿವಾಗಿ ಭೇಟಿ ನೀಡಿದ್ದೆ. ಈ ಜನಾಂಗದವರು ಗುಡಿಸಲಿನಲ್ಲಿ ಬದುಕಬೇಕಾದರೆ, ಅವರಿಗೆ ಕನಿಷ್ಠ ಸೌಲಭ್ಯಗಳು ಸಹ ಇಲ್ಲ. ಅವರಿಗೆ ಈ ಕನಿಷ್ಠ ಸೌಲಭ್ಯ ಇಲ್ಲದ ಕಾರಣಕ್ಕಾಗಿ ಅವರು ಅತ್ಯಂತ ಹೀನ ಸ್ಥಿತಿಯಲ್ಲಿ ಅವರು ಬದುಕುತ್ತಿದ್ದಾರೆ. ಅವರು ಮೊದಲೆಲ್ಲಾ ರಾಮಾಯಣವೆಂದು ಮಾಡುತ್ತಿದ್ದರು. ಈಗ ಅದಕ್ಕೆಲ್ಲಾ ಬೆಲೆ ಇಲ್ಲ. ಅವರು ಬಣ್ಣ ಹಾಕಿಕೊಂಡು ಹಳ್ಳಿಗಳಿಗೆ ಹೋಗುತ್ತಿದ್ದರು. ಈಗ ಅವರು ಅದನ್ನು ಬಿಟ್ಟು, ಪ್ಲಾಸ್ಟಿಕ್ ಮತ್ತು ರಿಬ್ಬನ್ ಮತ್ತೀತರೆ ವಸ್ತುಗಳನ್ನು ಮಾರುತ್ತಿದ್ದಾರೆ. ಮತ್ತೆ ಚಿಂದಿ ಆಯುವುದು. ಅವರು ಈ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ. ಹಾಗಾಗಿ, ಅವರು ಬದುಕು ಬಹಳ ಹೀನ ಪರಿಸ್ಥಿತಿಯಲ್ಲಿದೆ. ಇದಕ್ಕೆ ಸರ್ಕಾರ ಯಾವ ರೀತಿಯಾದಂತಹ ಉತ್ತರ ಕೊಡುತ್ತದೆ. ಈಗಾಗಲೇ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ನನಗೆ ಅದು ಅಷ್ಟು ತೃಪ್ತಿಕರವಾಗಿಲ್ಲ. ಇದಕ್ಕೆ

ಮಾನ್ಯ ಸಚಿವರು ಉತ್ತರ ನೀಡಿದರೆ, ಮುಂದೆ ಎರಡು ವಿಷಯಗಳ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಡಾ: ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರ ಕಾಳಜಿ ಅರ್ಥವಾಗುತ್ತದೆ. ಮಾನ್ಯ ಸದಸ್ಯರು ಕಲಬುರಗಿ ಜಿಲ್ಲೆ ನಗರದ ರಿಂಗ್ ರಸ್ತೆಯಿಂದ ಆಳಂದಕ್ಕೆ ಹೋಗುವ ಜಾಗದಲ್ಲಿ ಸುಮಾರು ೮೦ ಕುಟುಂಬಗಳು ಅಲ್ಲಿ ವಾಸ ಮಾಡುತ್ತಿದ್ದಾರೆ. ಅದರಲ್ಲಿ ಸುಮಾರು ೫೦ ಕುಟುಂಬಗಳಿಗೆ ನಿವೇಶನವಿದೆ. ಇನ್ನು ೧೫ ಕುಟುಂಬದ ಫಲಾನುಭವಿಗಳಿಗೆ ನಿವೇಶನ ಇರುವುದಿಲ್ಲ. ಮತ್ತೆ ಒಂದು ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಶಾಸಕರ ನಿಧಿಯಿಂದ infrastructure ಅನ್ನು develop ಮಾಡಿದ್ದೇವೆ. ಶೇಕಡಾ ೧೦ರಷ್ಟು ಮಕ್ಕಳಿಗೆ KREIS ಶಾಲೆಗಳಲ್ಲಿ ಅಡ್ಮಿಷನ್ ಕೊಟ್ಟು, even Entrance Exam ಇಲ್ಲದೇ ಅವರಿಗೆ ಪ್ರವೇಶ ಕೊಡುವಂಥದ್ದಕ್ಕೆ ಅವಕಾಶಗಳನ್ನು ಮಾಡಿಕೊಟ್ಟಿದ್ದೇವೆ. ಆದರೆ, ಇಷ್ಟೆಲ್ಲಾ ಆದರೂ ಅವರ ಪರಿಸ್ಥಿತಿ ಸುಧಾರಣೆ ಆಗಬೇಕು ಎಂಬುದು ಸರ್ಕಾರದ ಉದ್ದೇಶ. ಅದು ಖಾಸಗಿಯವರ ಜಾಗ. ಆದರೆ, ಈ ಸಾಲಿನ ಬಜೆಟ್‌ನಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಅಲೆಮಾರಿ ನಿಗಮಕ್ಕೆ ನೀಡಲಾಗಿದೆ. ನಾಲ್ಕು ವಿಭಾಗಗಳಲ್ಲಿ residential ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಬಜೆಟ್‌ನಲ್ಲಿ ಘೋಷಣೆ ಮಾಡುವುದರ ಜೊತೆಗೆ ೧೦,೦೦೦ ಮನೆಗಳನ್ನು ಕಟ್ಟಬೇಕೆಂದು ಅದರಲ್ಲಿ ಸುಮಾರು ೫,೦೦೦ ಮನೆಗಳು ಪೂರ್ಣಗೊಂಡಿವೆ. ಈಗ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯಲ್ಲಿ ೨,೦೦,೦೦೦/- ರೂಪಾಯಿಗಳನ್ನು ಕೊಟ್ಟು, ಫಲಾನುಭವಿಗಳು ಹಾಕಿ ಕಟ್ಟಬೇಕೆಂದು ಇದೆ. ಆ ಮನೆಗಳನ್ನು ಕಟ್ಟುವುದಕ್ಕೆ ಖಂಡಿತವಾಗಿ ಅವರಿಗೆ ವಸತಿ ಕೊಡಲೇಬೇಕು. ಅವರಿಗೆ ಮೂಲಭೂತ ಸೌಲಭ್ಯವನ್ನು ಒದಗಿಸಬೇಕು. ಅದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರ ಜೀವನಮಟ್ಟ ಸುಧಾರಣೆಯಾಗುವುದಕ್ಕೆ ಶಿಕ್ಷಣ ಕ್ಷೇತ್ರ, ಔದ್ಯೋಗಿಕ ಕ್ಷೇತ್ರ ಮತ್ತು ಅವರಿಗೆ ವಸತಿ ಒದಗಿಸುವುದಕ್ಕೆ ಆದ್ಯತೆಯ ಮೇಲೆ ಖಂಡಿತವಾಗಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಬಯಸುತ್ತೇನೆ.

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರ ಗುಡಿಸಲುಗಳು ಯಾವ ರೀತಿಯಲ್ಲಿವೆ ಎಂದರೆ, ಮಳೆ ಬಂದಾಗ ಅದು ಸಂಪೂರ್ಣವಾಗಿ ರಾಡಿಯಾಗಿರುತ್ತದೆ. ಅದರ ಮಧ್ಯದಲ್ಲಿಯೇ ಹಂದಿಗಳು ಮನೆಯಲ್ಲಿ ಅರಾಮವಾಗಿ ಹೋಗಿ ಬರುತ್ತಿರುತ್ತವೆ. ಅವರು ಹಂದಿ ಮತ್ತು ನಾಯಿಗಳನ್ನು ಸಾಕುತ್ತಾರೆ. ಅವರು ಹಿರಿಯರು ಮತ್ತು ಮಕ್ಕಳ ಜೊತೆಯಲ್ಲಿ ರಾತ್ರಿ ಸಮಯದಲ್ಲಿ ಬದುಕಬೇಕಾಗುತ್ತದೆ. ಅವರಿಗೆ ವಿದ್ಯುತ್ ಇಲ್ಲ. ಅವರಿಗೆ ಹಾವು ಮತ್ತು ಚೇಳುಗಳ ಕಾಟ. ಮತ್ತೆ ಪೋಲೀಸ್‌ನವರು ರಾತ್ರಿ ಸಮಯದಲ್ಲಿ ಬಂದು ಅವರಿಗೆ disturb ಮಾಡುತ್ತಿರುತ್ತಾರೆ.

**ಸಭಾಪತಿಯವರು:-** ಈಗ ಅವರಿಗೆ ಏನು ಮಾಡಬೇಕೆಂದು ಹೇಳಿ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅವರು ನರಕವಾದಂತಹ ಜೀವನ ನಡೆಸುತ್ತಿದ್ದಾರೆ. ಈ ಅಲೆಮಾರಿ ಜನಾಂಗಕ್ಕೆ ಶಿಕ್ಷಣದಲ್ಲಿ ಮೀಸಲಾತಿಯನ್ನು ಕೊಟ್ಟಿದ್ದಾರೆ. ಆದರೆ, ಅವರಿಗೆ ಅದರ ಅರಿವು ಇಲ್ಲ.

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಅವರಿಗೆ ಶೇಕಡಾ 5ರಷ್ಟು ಮೀಸಲಾತಿ ನೀಡಲಾಗಿದೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಅವರಿಗೆ ಉದ್ಯೋಗ ಸಹ ಇಲ್ಲ. ಅವರು ಎಲ್ಲೋ ಮಾರಾಟ ಮಾಡುವುದಕ್ಕೆ ಹೋಗುತ್ತಾರೆ. ಅವರಿಗೆ ಎಷ್ಟೋ ಹಣ ಬರುತ್ತದೆ. ಅವರಿಗೆ ದುಶ್ಚಟಗಳು ಇವೆ. ಅವರಿಗೆ ಹಲವು ಆರೋಗ್ಯದ ಸಮಸ್ಯೆ ಇದೆ. ನಾವು ಇದೆಲ್ಲವನ್ನು ಸಹ ನೋಡುತ್ತಿದ್ದರೆ. ಅವರ ಬದುಕು ಯಾವ ರೀತಿ ಇದೆ. ಏಕೆಂದರೆ, ಈಗಾಗಲೇ ಮೀಸಲಾತಿಯಲ್ಲಿ ಅವರಿಗೆ ಅನ್ಯಾಯವಾಗಿದೆ. ನಾವೆಲ್ಲರೂ ಸರ್ವ ಜನಾಂಗದ ಶಾಂತಿಯ ತೋಟವೆಂದು ಹೇಳುತ್ತೇವೆ. ಈ ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಇವರು ಬರುವುದಿಲ್ಲವೆ ಎನ್ನುವಂತಹ ಪ್ರಶ್ನೆ ಬರುತ್ತಿದೆ. ಹೀಗಾಗಿ, ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುವುದೇನೆಂದರೆ, ಅವರ ಬಗ್ಗೆ ಸ್ವಲ್ಪ ಆಸಕ್ತಿ ವಹಿಸಬೇಕೆಂದು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಅಲೆಮಾರಿ ಸಮುದಾಯಕ್ಕೆ ಅನ್ಯಾಯವಾಗುವುದಕ್ಕೆ ನಮ್ಮ ಸರ್ಕಾರ ಬಿಡುವುದಿಲ್ಲ. ಅವರಿಗೆ ವಸತಿ, ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಆದ್ಯತೆಯನ್ನು ಕೊಟ್ಟು ಅವರ ಕಡೆಗೆ ಗಮನಹರಿಸಿ ಅವರ ಜೀವನಮಟ್ಟವನ್ನು ಸುಧಾರಣೆ ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳಿದ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಿ.

**ಡಾ: ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, thank you.

ಪ್ರಶ್ನೆ ಸಂಖ್ಯೆ: 1201

(ಉತ್ತರವನ್ನು ಲಗತ್ತಿಸಿದೆ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಉತ್ತರವನ್ನು ಸರಿಯಾಗಿ ಕೊಟ್ಟಿದ್ದಾರೆಂದರೆ, ತಾವು ಮತ್ತೆ ಏಕೆ ಪ್ರಶ್ನೆ ಕೇಳುತ್ತೀರಿ ಎಂದು ನನ್ನನ್ನು ಕೇಳುತ್ತೀರಿ. ಅದಕ್ಕೆ ನಾನು ಉತ್ತರ ಬಂದಿದೆ ಎಂದು ಇಷ್ಟನ್ನು ಮಾತ್ರ ಹೇಳುತ್ತೇನೆ. ಈಗ ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆಂದು ಹೇಳಿ, ಅವರಿಗೆ ಅಭಿನಂದನೆಯನ್ನು ಹೇಳಿದ ಕೂಡಲೇ ಮತ್ತೆ ಏಕೆ ಕೇಳುತ್ತೀರಿ ಎಂದು ಹೇಳುತ್ತೀರಿ. ಅದಕ್ಕೆ ಬೇಡ. ಈಗ ನನಗೆ ಉತ್ತರ ಮಾತ್ರ ಬಂದಿದೆ. ಕಳೆದ 3 ವರ್ಷಗಳಲ್ಲಿ ನೂರಾರು ಮಕ್ಕಳು ವಸತಿ ನಿಲಯದ ಶಾಲೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಾನು ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಮಾನ್ಯ ಸಚಿವರು ಉತ್ತಮವಾದ ಉತ್ತರವನ್ನು ನೀಡಿದ್ದಾರೆ. ನಮ್ಮ ಕಡೆಗಳಲ್ಲಿ ಹುಡುಗರು ಆತ್ಮಹತ್ಯೆ ಮಾಡಿಕೊಂಡಿಲ್ಲ. ಚಿತ್ರದುರ್ಗದಲ್ಲಿ ಪ್ರೇಮ ವೈಫಲ್ಯದಿಂದ ವಿದ್ಯಾರ್ಥಿ ನಿಲಯದಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ. ದಾವಣಗೆರೆಯಲ್ಲಿ ವೈಯಕ್ತಿಕ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರರವರು ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಈಗ ಸದನದಲ್ಲಿ ಎಂಟು ಜನ ಅಧಿಕಾರಿಗಳು ಇರಬೇಕಾಗಿತ್ತು. ಆದರೆ, ಈಗ ಸದನದಲ್ಲಿ ಎಷ್ಟು ಜನ ಅಧಿಕಾರಿಗಳು ಇದ್ದಾರೆಂದು ತಾವು ಹೇಳಿ. ಮತ್ತೆ ಎಂಟು ಜನ ಮಂತ್ರಿಗಳು ಇರಬೇಕಾಗಿತ್ತು. ಆದರೆ, ಸದನದಲ್ಲಿ ಒಬ್ಬ ಮಂತ್ರಿಗಳು ಮಾತ್ರ ಕಾಣುತ್ತಿದ್ದಾರೆ. ಅವರು ಕಡ್ಡಾಯವಾಗಿ ಇರಬೇಕು. ನಾವು ಇದನ್ನು ಏಕೆ ಸುಮ್ಮನೆ ಕೇಳುತ್ತಿದ್ದೇವೆಯೇ? ಮಾನ್ಯ ಸದಸ್ಯರು ಯಾರಿಗೆ ಹೇಳಬೇಕು.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಯಾವ ಮಂತ್ರಿಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ. ಆ ಮಂತ್ರಿಗಳು ಸದನದಲ್ಲಿ ಇದ್ದಾರೆ. ಇವರಿಗೆ ಏಕೆ ಆ ರೀತಿಯ ಆಕ್ಷೇಪ? ಸಂಬಂಧಪಟ್ಟಂತಹ ಸಚಿವರು ಸದನದಲ್ಲಿ ಇದ್ದಾರೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರ ಕೊಡುವುದಕ್ಕೆ ರೆಡಿ ಇದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಇಲ್ಲಿ ಇದ್ದಾರೆ. ಇಲ್ಲಿ ಕಡ್ಡಾಯವಾಗಿ ಇರಬೇಕು. ಹಾಗಾದರೆ, ಕಡ್ಡಾಯವೆಂದು ಏಕೆ ಬರೆಯುತ್ತಾರೆ? ಅದಕ್ಕೆ ಏನು ನಿಯಮ ಇಲ್ಲವೇ? ಈಗ 8 ಜನ ಅಧಿಕಾರಿಗಳು ಸದನದಲ್ಲಿ ಇರಬೇಕು. ಸದನ ನಡೆಯಬೇಕಾದರೆ ಅಧಿಕಾರಿಗಳು ಇಲ್ಲವೆಂದರೆ ಏನು ಅರ್ಥ?

(ಗೊಂದಲ)

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎಲ್ಲರೂ ಇಲ್ಲಿಯೇ ಇದ್ದಾರೆ.

(ಗೊಂದಲ)

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಅವರು ಇದ್ದಾರೆ. ಅವರು ಯಾರಿಗೆ ಪ್ರಶ್ನೆ ಕೇಳಿದ್ದಾರೆ, ಆ ಮಂತ್ರಿಗಳು ಸದನದಲ್ಲಿ ಇದ್ದಾರೆ. ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರೆ, ತಾವು ಅವರಿಗೆ yield ಆಗಿಲ್ಲವೆಂದು ಹೇಳಿ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ನಾನು ಇವತ್ತಿನವರೆಗೆ ಯಾರಿಗೂ yield ಆಗಿಲ್ಲ. ಹಾಗಾದರೆ, ಇವರಿಗೆ ಹೇಗೆ ಆಗುತ್ತೇನೆ?

(ಗೊಂದಲ)

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಮಂತ್ರಿಗಳ ಹೆಸರುಗಳನ್ನು ಓದಿ ಹೇಳಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸಭಾನಾಯಕರಾದ ಬೋಸರಾಜು ರವರು ಇದ್ದಾರೆ. ಸದನದಲ್ಲಿ ಮಾನ್ಯ ಸಚಿವರುಗಳಾದ ಶ್ರೀ ಹೆಚ್.ಕೆ.ಪಾಟೀಲ್ ಮತ್ತು ಶ್ರೀ ದಿನೇಶ್ ಗುಂಡೂರಾವ್ ರವರು ಇರಬೇಕು.

(ಗೊಂದಲ)

**ಸಭಾಪತಿಯವರು:-** ಮಾನ್ಯ ತಿಪ್ಪಣ್ಣಪ್ಪ ಕಮಕನೂರ ರವರೆ, ಒಂದು ನಿಮಿಷ. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರುಗಳೆಂದರೆ, ಶ್ರೀ ಎನ್.ಎಸ್.ಬೋಸರಾಜು, ಶ್ರೀ ಹೆಚ್.ಕೆ.ಪಾಟೀಲ್, ಶ್ರೀ ಈಶ್ವರ ಖಂಡ್ರೆ, ಶ್ರೀ ದಿನೇಶ್ ಗುಂಡೂರಾವ್, ಶ್ರೀ ಕೃಷ್ಣ ಬೈರೇಗೌಡ, ಶ್ರೀ ಕೆ.ಹೆಚ್.ಮುನಿಯಪ್ಪ, ಶ್ರೀ ಶರಣ ಪ್ರಕಾಶ್ ಪಾಟೀಲ್ ಮತ್ತು ಶ್ರೀ ಕೆ. ವೆಂಕಟೇಶ್. ಆದರೆ,

ಶ್ರೀ ಕೆ.ವೆಂಕಟೇಶ್‌ರವರು ಆಸ್ಪತ್ರೆಗೆ ಹೋಗಬೇಕೆಂದು ನನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಾಗಿದೆ. ಈಗ ಸದನದಲ್ಲಿ ಹಾಜರಿರಬೇಕಾದ ಅಧಿಕಾರಿಗಳು ಯಾರು ಎಂದರೆ, ಶ್ರೀ ಮೊಹಮ್ಮದ್ ಹ್ಯಾರಿಸ್, ಶ್ರೀ ಸಂದೀಪ್, ಶ್ರೀ ದಯಾನಂದ್, ಶ್ರೀ ವಿಪಿನ್ ಸಿಂಗ್, ಶ್ರೀ ಕೆ.ಹೆಚ್.ರವಿಕುಮಾರ್, ಶ್ರೀ ಸಮೀರ್ ಶುಕ್ಲಾ, ಶ್ರೀ ರಾಹುಲ್ ಶರಣಪ್ಪ ಸಂಕನೂರ, ಶ್ರೀ ಅನಿಲ್ ಕುಮಾರ್ ರತನ್ ಮತ್ತು ಶ್ರೀ ಶೇಖ್ ಲತೀಫ್ ಇಷ್ಟು ಜನರು ಸದನದಲ್ಲಿ ಹಾಜರಿರಬೇಕು ಮತ್ತು ಅಧಿವೇಶನ ಮುಗಿಯುವವರೆಗೆ ಶ್ರೀ ಸತೀಶ್ ರವರು ಇರಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಕೇವಲ ಮೂರು ಜನ ಮಂತ್ರಿಗಳು ಮಾತ್ರ ಇದ್ದಾರೆ. ನಮಗೆ ಮಾನ್ಯ ಸಭಾನಾಯಕರನ್ನು ನೋಡಿದರೆ ಪಾಪ ಅನಿಸುತ್ತದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಇದು ನನಗೂ ಸಹ ಒಂದು ರೀತಿ ಇದು ಅಸಹ್ಯ ಅನಿಸುತ್ತದೆ. ಈಗ ಮಂತ್ರಿಗಳು ಬರಲಿಲ್ಲವೆಂದರೆ, ಅವರನ್ನು ಏಕೆ ಹಾಕುತ್ತೀರಿ? ಹಾಗಾದರೆ, ಅವರನ್ನು ಕಡ್ಡಾಯವೆಂದು ಹಾಕಬೇಡಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗ Question Hour ನಡೆಯುತ್ತಿದೆ.

**ಸಭಾಪತಿಯವರು:-** ತಾವು ಅವರಿಗೆ ಹೇಳಿ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ್ದನ್ನು ಒಪ್ಪುತ್ತೇವೆ.

**ಸಭಾಪತಿಯವರು:-** ಈಗ Question Hour ಇದ್ದಾಗ ಬಿಟ್ಟು, ಬೇರೆ ಸಮಯದಲ್ಲಿ ಎರಡೂ ಕಡೆ ಸರಿದೂಗಿಸಿಕೊಂಡು ಹೋಗುವಂತೆ ಮಾಡಿ, ಅವರು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದರೆ ಅದು ಯಾರಿಗೆ ಗೊತ್ತು?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ನಾನು ಸರಿ ಮಾಡುತ್ತೇನೆ.

**ಸಭಾಪತಿಯವರು:-** ನೀವು ಅವರು ವಿಧಾನಸಭೆಯಲ್ಲಿ ಇದ್ದಾರೆಂದು ಹೇಳುತ್ತಾರೆ. ಆದರೆ, ಅವರು ಬೇರೆ ಕಡೆಯಲ್ಲಿ ಇರುತ್ತಾರೆ. ಅದು ಯಾರಿಗೆ ಗೊತ್ತಾಗುತ್ತದೆ? ನಾನು ಎಷ್ಟು ಬಾರಿ ಹೇಳುವುದು? ಅವರು ಹೇಳುವುದು ಸರಿಯಿದೆ. ನಾನು ಅವರಿಗೆ ಉತ್ತರ ಹೇಳಬೇಕು ಅಲ್ಲವೇ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅನೇಕ ಬಾರಿ ಮಾನ್ಯ ಸಭಾನಾಯಕರು ಒಬ್ಬರೇ ಇರುತ್ತಾರೆ. ನನಗೆ ಅವರನ್ನು ನೋಡಿದರೆ ಅಯ್ಯೋ ಪಾಪ ಅನಿಸುತ್ತದೆ.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ನಾನು ನಿಮ್ಮನ್ನು ನೋಡಿದಾಗಲೂ ಸಹ ನನಗೆ ಅಯ್ಯೋ ಅನಿಸುತ್ತದೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಈಗ frontline ನಲ್ಲಿ ಶ್ರೀ ಎಸ್.ಎಲ್.ಭೋಜೇಗೌಡರನ್ನು ಬಿಟ್ಟರೆ ಬೇರೆ ಯಾರೂ ಕೇಳುವವರೇ ಇಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, at least ಅವರ ರಕ್ಷಣೆಗೆ ಯಾರಾದರೂ ಬರಬೇಕಲ್ಲವೇ? ನಿಜಕ್ಕೂ ಅಯ್ಯೋ ಅನಿಸುತ್ತದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ, ಒಂದು ನಿಮಿಷ. ಮಾನ್ಯ ಭೋಜೇಗೌಡರೆ, ತಾವು ಹಿಂದೆ ಕುಳಿತುಕೊಳ್ಳಿ. ನನಗೆ ಮಾನ್ಯ ಭೋಜೇಗೌಡರನ್ನು ನೋಡಿದರೆ ಅಯ್ಯೋ ಅನಿಸುತ್ತದೆ.

**(ಗೊಂದಲ)**

**ಶ್ರೀ ಎಸ್.ಎನ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿ ಅಕ್ಕನವರು 24 ಗಂಟೆ ಯಾವಾಗಲೂ ಇಲ್ಲಿಯೇ ಇರುತ್ತಾರೆ. ಅವರನ್ನು Leader of the Opposition ಮಾಡಲಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್ ರವರೆ, ತಾವು ವಿರೋಧ ಪಕ್ಷದ ಮುಖ್ಯ ಸಚೇತಕರು. ನೀವು ಅವರಿಗೆ ಎಲ್ಲಾ ಸೌಲಭ್ಯಗಳನ್ನು ನೀಡಿ, ಅವರನ್ನು ಕರೆದುಕೊಂಡು ಕೂರಿಸುವುದು ತಮ್ಮ ಕೆಲಸ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ತಾವು ನಮ್ಮ attendance ಮತ್ತು ಅವರ attendance ಅನ್ನು ನೋಡಿ. ತಾವು count ಮಾಡಿ. ಈಗ ನಮ್ಮ ಪಕ್ಷದ ಕೋರ್ ಸಮಿತಿ ಮೀಟಿಂಗ್‌ಗೆ ಹೋಗಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್ ರವರೆ, ನಿಮ್ಮ ಕಡೆ ನೋಡಿ. ಅವರ ಕಡೆ ಬೇಡ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ತಾವು ಅಲ್ಲಿನ Treasury Bench ಅನ್ನು ನೋಡಿ. ಅವರು ಎಷ್ಟು ಜನರು ಇದ್ದಾರೆಂದು count ಮಾಡಿ. ಅದು Treasury Bench. ನನಗೆ ಅವರನ್ನು ನೋಡಿದರೆ ಅಯ್ಯೋ ಅನಿಸುತ್ತದೆ. ಆ Treasury Bench ಗೆ ಏಕೆ ಆ ಪರಿಸ್ಥಿತಿ ಬಂತು ಎಂದು ಅಯ್ಯೋ ಅನಿಸುತ್ತಿದೆ.

(ಗೊಂದಲ)

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್ ರವರು ಹೇಳಲಿ ಬಿಡಿ. ಅವರು ಸದನಕ್ಕೆ ಆಮೇಲೆ ಬಂದಿದ್ದಾರೆ. ಬೆಳಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ರವರ ಪರಿಸ್ಥಿತಿ ಏನಾಗಿತ್ತು ಎಂದರೆ, ಇದು ಏನು ಸರ್ ಆಭಾಸ? ಅವರು ಸದಸ್ಯರಿಗಿಂತ ಮಾನ್ಯ ಮಂತ್ರಿಗಳು ಜಾಸ್ತಿ ಇದ್ದಾರೆಂದು ಹೇಳಿದರು. ಬೇಕಾದರೆ ತಾವು ರೆಕಾರ್ಡ್ ತೆಗೆದುನೋಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದು ಯಾವಾಗಲೋ ಒಂದು ಬಾರಿ.

**ಸಭಾಪತಿಯವರು:** ಶ್ರೀ ಎನ್.ರವಿಕುಮಾರ್ ರವರೆ, ಮಾನ್ಯ ಸಚಿವರು ಹೇಳುವುದನ್ನು ಕೇಳಿಸಿಕೊಳ್ಳಿ. ಅವರು ಮಾತನಾಡುವುದನ್ನು ಸ್ವಲ್ಪ ಕೇಳಿಸಿಕೊಳ್ಳಿ.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಜೊತೆ ಒಂದು ಚರ್ಚೆ ನಡೆಯಿತು. ಈಗ ಮಾನ್ಯ ಸದಸ್ಯರನ್ನು ಸದನಕ್ಕೆ ಬರುವಂತೆ ಮಾಡುವುದಕ್ಕೆ ಏನಾದರೂ ಒಂದು ಆಕರ್ಷಣೆ ಮಾಡಬೇಕಲ್ಲವೇ? ಈಗ ಸದಸ್ಯರೇ ಇಲ್ಲದಂತೆ ಆಗಿದೆ ಎಂದು ಅದರ ಬಗ್ಗೆಯೂ ಚರ್ಚೆಯಾಯಿತು. ಅದಕ್ಕೆ ನಾನು ಮಾನ್ಯ ಸಭಾಪತಿಯವರಿಗೆ ಏನು ಮನವಿ ಮಾಡಿದೆ ಎಂದರೆ, ಈ stage ಅನ್ನು ಸ್ವಲ್ಪ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರಿಗೆ ಬಿಟ್ಟುಕೊಡೋಣವೆಂದು ಆಯಿತು.

(ಮುಂದು)

(373) 13.03.2026 11.30 LL-AK (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಸದನಕ್ಕೆ ಮಾನ್ಯ ಸದಸ್ಯರುಗಳು ಹಾಜರಾಗುವಂತೆ ಆಕರ್ಷಣೆ ಮಾಡುವ ಕೆಲಸವನ್ನು ನಾನು ಶ್ರೀ ಎಸ್.ಎಲ್. ಭೋಜೇಗೌಡರವರಿಗೆ ಒಪ್ಪಿಸಿರುತ್ತೇನೆ. ಆ ಕೆಲಸವನ್ನು ಅವರು ಮಾಡುವುದು ಇದ್ದರೆ ಮಾಡಲಿ.

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಕೂಡ ಅದನ್ನೇ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ನಾನು ಕೂಡ ತಮಗೆ ವಿನಂತಿ ಮಾಡಿರುತ್ತೇನೆ. ಅದೇನೆಂದರೆ, ಶ್ರೀ ಎಸ್.ಎಲ್. ಭೋಜೇಗೌಡರವರಿಗೆ ವೇದಿಕೆಯನ್ನು ಬಿಟ್ಟುಕೊಡೋಣ. ಇದರಿಂದಾಗಿ, ಆಟೋಮ್ಯಾಟಿಕ್ ಆಗಿ ಮಾನ್ಯ ಸದಸ್ಯರುಗಳಿಗೆ ಅದು ಆಕರ್ಷಣೀಯವಾಗುತ್ತದೆ. ಆದರೆ ತಾವು ಏನು ಹೇಳಿದರೆಂದರೆ, "ಅಯ್ಯಯ್ಯಯ್ಯೋ! ಆತನ ಆಕರ್ಷಣೆ ಒಂದು ರೀತಿಯದ್ದಲ್ಲ. ನಾನಾ ರೀತಿಯ ಆಕರ್ಷಣೆ ಇದೆ. ಆನಂತರ, ಏನೇನೋ ಸಮಸ್ಯೆಗಳು ಆಗುತ್ತದೆ" ಎಂದು ಹೇಳಿರುತ್ತೀರಿ. ಇದೆಲ್ಲವೂ ಈ ದಿನ ಬೆಳಗ್ಗೆ ಈ ಸದನದಲ್ಲಿ

ನಡೆದಿರುತ್ತದೆ. ಆ ಸಮಯದಲ್ಲಿ ಮಾನ್ಯ ಎನ್. ರವಿಕುಮಾರ್‌ರವರು ಸದನದಲ್ಲಿ ಹಾಜರಿರಲಿಲ್ಲ. ಅವರು ಈಗ ಸದನಕ್ಕೆ ಬಂದಿದ್ದಾರೆ. ಹಾಗಾಗಿ, ಅವರಿಗೆ ಈ ಬಗ್ಗೆ ಮಾಹಿತಿ ಇರುವುದಿಲ್ಲ.

**ಶ್ರೀ ಎನ್. ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ಎಸ್.ಎಲ್. ಭೋಜೇಗೌಡರವರದ್ದು ಬಹುರಂಗಿ ವ್ಯಕ್ತಿತ್ವ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನನಗೆ "ಕಳೆದ 2-3 ದಿನಗಳಿಂದ ಸದನಕ್ಕೆ ಏತಕ್ಕೆ ಬರಲಿಲ್ಲ ನೀನು" ಎಂದು ಕೇಳಿರುತ್ತೀರಿ. ಆದರೆ, ತಾವು ಮೊನ್ನೆಯ ದಿವಸ ರಾತ್ರಿ ನನ್ನ ಕನಸ್ಸಿನಲ್ಲಿ ಬಂದಿರುತ್ತೀರಿ.

**ಶ್ರೀ ಶಿವರಾಜ ಎಸ್. ತಂಗಡಗಿ (ಹಿಂದುಳಿದ ವರ್ಗ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಅದು ಆಯಿತು. ಈಗ ಮಾನ್ಯ ಸದಸ್ಯರು ಅದರ ಮುಂದಿನ ಭಾಗ ಹೇಳಲಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅದನ್ನು ಕೂಡ ನಾನು ಈಗ ಹೇಳಿಬಿಡುತ್ತೇನೆ. ನನ್ನ ಕನಸ್ಸಿನಲ್ಲಿ ಏನೇನೋ ಕಾಣಿಸಕೊಂಡಿರುತ್ತದೆ. ಹಾಗಾಗಿ, ನಮ್ಮ ಸಭಾಪತಿಗಳಿಗೆ ಈ ರೀತಿ ಆಯಿತಲ್ಲಾ ಎಂದು ನಾನು ಮಾರನೆಯ ದಿನ ತಕ್ಷಣವೇ ಬೆಳಗ್ಗೆ ಎದ್ದು ವಿದೇಶದಿಂದ ಹೊರಟು, ಈ ಸದನಕ್ಕೆ ಬಂದಿರುತ್ತೇನೆ.

**ಶ್ರೀ ಶಿವರಾಜ ಎಸ್. ತಂಗಡಗಿ:-** ಮಾನ್ಯ ಸಭಾಪತಿಯವರೇ, ಆ ದಿನ ಕನಸ್ಸಿನಲ್ಲಿ ಏನಾಯಿತು, ಏನು ನಡೆಯಿತು ಎಂಬುದನ್ನು ಮಾನ್ಯ ಸದಸ್ಯರು ತಿಳಿಸಲಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆ ಸ್ವಾರಸ್ಯವನ್ನು ಹೇಳಬೇಕಾದರೆ, ತಾವೆಲ್ಲರೂ ಅದನ್ನು ಸಮಾಧಾನವಾಗಿ ಕೇಳಬೇಕು.

**ಸಭಾಪತಿಯವರು:-** ಆ ದಿನ ರಾತ್ರಿ ಕನಸ್ಸಿನಲ್ಲಿ ಏನಾಯಿತು ಎಂಬುದನ್ನು ಮಾನ್ಯ ಭೋಜೇಗೌಡರವರು ನನ್ನ ಬಳಿ ಹೇಳಿರುತ್ತಾರೆ. ಅದೇನೆಂದರೆ, "ನಾನು ಖುರ್ಚಿ ಖಾಲಿ ಮಾಡಿರುವ ರೀತಿ, ಅವರಿಗೆ ಕನಸ್ಸು ಬಿದ್ದಿರುತ್ತದೆ" ಎಂದು. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು, "ಈ ಗದ್ದಲವನ್ನು ನನ್ನ ಕೈಯಿಂದ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಕೂಡ ಎಷ್ಟು ಎಂದು ಸಹಿಸಬೇಕು ಎಂದು ತಾವು ಬಹಳ ಗಲಾಟೆ ಮಾಡಿಕೊಂಡು, ಸಿಟ್ಟಿನಿಂದ ಸಭಾಪತಿ ಸ್ಥಾನದಿಂದ ಕೆಳಗೆ ಇಳಿದು ಹೋಗಿಬಿಡುತ್ತೀರಿ. ತದನಂತರ, ಅನೇಕ ಮಂತ್ರಿಗಳು ಹಾಗೂ ಮಾನ್ಯ ಶಾಸಕರು ಮಾನ್ಯ ಸಭಾಪತಿಯವರ ಬಳಿ ಹೋಗಿ ಪೀಠದಲ್ಲಿ ಬಂದು ಕುಳಿತುಕೊಳ್ಳಿ ಎಂದು ಹೇಳಿದರೂ ಸಹ ತಾವು ಬರುವುದಿಲ್ಲ. ಆಗ ನನಗೆ, ಮಾನ್ಯ ಸಭಾಪತಿಯವರಿಗೆ ಈ ರೀತಿಯ ಪರಿಸ್ಥಿತಿ ಆಯಿತಲ್ಲಾ. ಈ ರೀತಿ ನಡೆಯುವ ಹಾಗಿಲ್ಲ ಎಂದು ಭಾವಿಸಿರುತ್ತೇನೆ. ಅಷ್ಟೆ ಅಲ್ಲದೇ, ತಾವು, ಇಲ್ಲ ಆಗುವುದಿಲ್ಲ ನಾನು ರಾಜೀನಾಮೆ ಕೊಡುತ್ತೇನೆಂದು ಕುಳಿತುಬಿಟ್ಟಿರುತ್ತೀರಿ. ಹಾಗಾಗಿ, ನಾನು ಅದೇ ಕನಸ್ಸಿನಲ್ಲಿ ವಾಪಸ್ಸು ತಮಗೆ

ಏನು ಹೇಳುತ್ತೇನೆ ಎಂದರೆ, "ತಾವು ರಾಜೀನಾಮೆ ಕೊಡುವಂತಹ ನಿರ್ಧಾರ ತೆಗೆದುಕೊಳ್ಳಬೇಡಿ. ನಾನು ಆದಷ್ಟು ಬೇಗ ವಾಪಸ್ಸು ಬರುತ್ತೇನೆ. ನಾನು ಬಂದ ತಕ್ಷಣ ಎಲ್ಲವನ್ನೂ ಸರಿ ಮಾಡೋಣ"" ಎಂದು ಹೇಳುತ್ತೇನೆ. ತದನಂತರ, ನಾನು ಈ ಸದನಕ್ಕೆ ಹಾಜರಾಗಿ ನೋಡಿದರೆ, ಮಾನ್ಯ ಸಭಾಪತಿಯವರು ತಮ್ಮ ಸ್ಥಾನದಲ್ಲಿಯೇ ಕುಳಿತಿರುತ್ತಾರೆ. ಹಾಗಾಗಿ, ನನ್ನ ಕನಸ್ಸು ಸುಳ್ಳಾಗಿರುತ್ತದೆ.

ಪ್ರಶ್ನೆ ಸಂಖ್ಯೆ: 1201

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಾಗ, ಅದು ಕೇವಲ ಒಂದು ಜೀವದ ಅಂತ್ಯವಲ್ಲ. ಬದಲಿಗೆ, ಆ ಇಡೀ ಕುಟುಂಬದ ಕನಸ್ಸುಗಳು ಅಂತ್ಯವಾಗುತ್ತದೆ. 7 ಮತ್ತು 8 ನೇ ತರಗತಿ ಓದುತ್ತಿದ್ದಂತಹ ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸುಮಾರು 100 ಮಕ್ಕಳಿಗಿಂತಲೂ ಹೆಚ್ಚು ಮಕ್ಕಳು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಆದರೆ, ನನ್ನ ಪ್ರಶ್ನೆಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು, ಶಾಲಾ ಮತ್ತು ವಸತಿ ನಿಲಯದ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ತೋರುತ್ತಿರುವ ಕಾಳಜಿ ಅಭಿನಂದನೀಯ. ವಿಶೇಷವಾಗಿ, ಬದಲಾಗುತ್ತಿರುವ ಕಾಲಘಟ್ಟಕ್ಕೆ ಕರ್ನಾಟಕ "ಆತ್ಮಹತ್ಯೆ ತಡೆ ನೀತಿ-2025" ಅನ್ನು ರೂಪಿಸುವಲ್ಲಿ ಅವರು ತೋರುತ್ತಿರುವ ದೂರದೃಷ್ಟಿ ಶ್ಲಾಘನೀಯ. ಈ ಕರಡು ನೀತಿ ಅಂತಿಮ ಹಂತದಲ್ಲಿದೆ ಎಂದು ತಿಳಿಸಿರುತ್ತಾರೆ. ಇದು ಯಾವಾಗ ಅಧಿಕೃತವಾಗಿ ಜಾರಿಗೆ ಬರಲಿದೆ ಮತ್ತು ಅದಕ್ಕೆ ನಿಗದಪಡಿಸಿರುವ ಅನುದಾನವೆಷ್ಟು ಎಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಆತ್ಮಹತ್ಯೆ ತಡೆ ನೀತಿ-2025 ಅನ್ನು ಜಾರಿಗೆ ತರುವುದಕ್ಕೆ, ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಿದ್ದೇವೆ. ಸದರಿ ಸಮಿತಿಯು ಈಗಾಗಲೇ ಒಂದು ಸಭೆ ನಡೆಸಿರುತ್ತದೆ. ಅದನ್ನು ಮಾಡಿದ ನಂತರ, ಸಮಗ್ರವಾಗಿ ಒಂದು ಪಾಲಿಸಿಯನ್ನು ತಂದು, ಸೈಕಾಲಜಿಸ್ಟ್ ಹಾಗೂ ಇನ್ನು ಬೇರೆ ರೀತಿಯ ಕ್ರಮಗಳನ್ನು ಜಾರಿಗೆ ತಂದು, ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಿ, ವಿದ್ಯಾರ್ಥಿಗಳ ಆತ್ಮಹತ್ಯೆಯನ್ನು ತಡೆಯುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಅದರಂತೆ, ಆದಷ್ಟು ಬೇಗ ಜಾರಿಗೆ ತಂದು ಮುಂದಿನ ದಿನಗಳಲ್ಲಿ ನಮ್ಮ ವಿದ್ಯಾರ್ಥಿಗಳಲ್ಲಿ ಖಿನ್ನತೆ ಇರಬಹುದು, ವೈಯಕ್ತಿಕವಾದ ಸಮಸ್ಯೆ ಇರಬಹುದು, ಅವುಗಳನ್ನು ನಿವಾರಣೆ ಮಾಡುವುದಕ್ಕಾಗಿ, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್, ಸರ್ಕಲ್ ಇನ್ಸ್‌ಪೆಕ್ಟರ್, ಅಗ್ನಿಶಾಮಕ ದಳದವರು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಅಂತಹ ವಿದ್ಯಾರ್ಥಿಗಳ ಬಳಿ ಹೋಗಿ, ಅವರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸುವಂತಹ ಕೆಲಸವನ್ನು ನಾವು ಮಾಡುತ್ತಲೇ ಇದ್ದೇವೆ. Despite all these things, ಇವೊತ್ತಿನ ದಿವಸ, ವಿದ್ಯಾರ್ಥಿಗಳ ಸಾವು ಏನು ಆಗಿವೆ, ಪೋಲೀಸ್ ಇಲಾಖೆಯವರು ಕೊಟ್ಟಿರುವಂಥ ಎಫ್.ಐ.ಆರ್. ಕಾರಣದ ಆಧಾರದ ಮೇರೆಗೆ ಯಾವ ಕಾರಣಕ್ಕಾಗಿ ವಿದ್ಯಾರ್ಥಿಗಳ ಸಾವಾಗಿದೆ ಎಂಬ ಮಾಹಿತಿಯನ್ನು ನೀಡಿರುತ್ತೇವೆ. ಆದರೆ, ಇಂತಹ ಆತ್ಮಹತ್ಯೆಗಳನ್ನು ವ್ಯಕ್ತಿಗತವಾಗಿ ಮಾನಿಟರ್ ಮಾಡುವುದಕ್ಕೆ ಅನೇಕ ಕ್ರಮಗಳನ್ನು ನಮ್ಮ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರನ್ನು ಸೇರಿಸಿಕೊಂಡು ಆತ್ಮಹತ್ಯೆ ತಡೆ ನೀತಿ-2025 ಅನ್ನು ಜಾರಿ ಮಾಡುವಂತಹ

ಸಮಿತಿ ರಚನೆ ಮಾಡಲಾಗಿರುತ್ತದೆ. ಸದರಿ ಸಮಿತಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿರುತ್ತದೆ. ಸದರಿ ಸಮಿತಿಯು ಈಗಾಗಲೇ ಒಂದು ಸಭೆ ನಡೆಸಿದ್ದು, ಅದರ ನಡೆವಳಿ ಕೂಡ ದಾಖಲಾಗಿರುತ್ತದೆ. ಹಾಗಾಗಿ, ಆದಷ್ಟು ಬೇಗ ಆತ್ಮಹತ್ಯೆ ತಡೆ ನೀತಿ-2025 ಅನ್ನು ಜಾರಿ ಮಾಡುತ್ತೇವೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳ ಆತ್ಮಹತ್ಯೆಗೆ ಪ್ರೇಮ ವೈಫಲ್ಯ ಹಾಗೂ ಆನ್‌ಲೈನ್ ಜೂಜಾಟ ಮತ್ತು ಮಾನಸಿಕ ಖಿನ್ನತೆ ಕಾರಣ ಎಂದು ಸಮೀಕ್ಷೆ ಹೇಳಿರುತ್ತದೆ. ಇಂತಹ ಸಾಮಾಜಿಕ ಪಿಡುಗುಗಳಿಂದ ವಿದ್ಯಾರ್ಥಿಗಳನ್ನು ರಕ್ಷಿಸಲು ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ವಿಶೇಷ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳುವಂತಹ ಆಲೋಚನೆಗಳೇನಾದರೂ ಸರ್ಕಾರದಲ್ಲಿ ಇವೆಯೇ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಈಗಾಗಲೇ ಅದರ ಬಗ್ಗೆ ಉತ್ತರ ನೀಡಿರುತ್ತಾರೆ. ತಾವು ಕೇಳಿಕೊಂಡಿರುವುದಿಲ್ಲ ಅಷ್ಟೇ. ಅದೇನೆಂದರೆ, ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಜಾಗೃತಿ ಶಿಬಿರಗಳನ್ನು ಏರ್ಪಾಟು ಮಾಡುವ ಮೂಲಕ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳನ್ನು ಕಡಿಮೆ ಮಾಡುತ್ತೇವೆಂದು ಅವರು ಉತ್ತರ ನೀಡಿರುತ್ತಾರೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಕಸ್ತೂರ ಬಾ ಗಾಂಧಿ ಬಾಲಿಕ ವಿದ್ಯಾಲಯ (K.K.G.B.V.) ವಸತಿ ಶಾಲೆಗಳಲ್ಲಿ ಸದ್ಯಕ್ಕೆ ಸಮಾಲೋಚಕರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲಿ ಕೇವಲ ಆರೋಗ್ಯ ತಪಾಸಣೆ ಸಾಕೇ? ಅಥವಾ ಖಾಯಂ ಸಮಾಲೋಚಕರನ್ನು ನೇಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ನಿರಂತರವಾಗಿ ಮಾಡುವುದಕ್ಕೆ, ತಾಲ್ಲೂಕು ಮಟ್ಟದಲ್ಲಿ ಪ್ರತಿ ತಿಂಗಳು ನಾವು ಪ್ರತಿ ವಿದ್ಯಾರ್ಥಿಯ ಸ್ಕ್ರೀನಿಂಗ್ ಅನ್ನು ಮಾಡುತ್ತಲೇ ಇರುತ್ತೇವೆ.

ಪ್ರಶ್ನೆ ಸಂಖ್ಯೆ: 1252

(ಉತ್ತರವನ್ನು ಲಗತ್ತಿಸಲಾಗಿದೆ)

**ಡಾ॥ ಕೆ. ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಬಹಳ ಸುಧೀರ್ಘವಾದ ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ, ನನ್ನ ಪ್ರಶ್ನೆ ಏನೆಂದರೆ, ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975 ಜಾರಿಗೆ ಬಂದಿರುತ್ತದೆ. ಸದರಿ ಆಕ್ಟ್ ಜಾರಿಗೆ ಬಂದು ಸುಮಾರು 50 ವರ್ಷಗಳು ಕಳೆದರೂ ಸಹ, ಈ ಭಿಕ್ಷಾಟನೆಯನ್ನು ಸುಧಾರಿತ ಮಟ್ಟದಲ್ಲಿ ನಿಷೇಧ ಮಾಡಿರುವುದಿಲ್ಲ. ಇದು ಮಾನ್ಯ ಸಚಿವರ ಅನುಭವಕ್ಕೂ ಸಹ ಬಂದಿರಬಹುದು. ಬೆಂಗಳೂರಿನಲ್ಲಿ ಶಿವಾಜಿನಗರ ಇರಬಹುದು, ಮೆಜೆಸ್ಟಿಕ್ ಇರಬಹುದು, ಎಂ.ಜಿ. ರೋಡ್ ಇರಬಹುದು ಹಾಗೂ ಕೆ.ಆರ್. ಮಾರ್ಕೆಟ್ ಇರಬಹುದು ಅಥವಾ ಇನ್ನು ಬೇರೆ ಬೇರೆಯಾದಂತಹ ಪ್ರಮುಖವಾದ ಜಾಗಗಳಲ್ಲಿ ಭಿಕ್ಷಾಟನೆ ಯಥೇಚ್ಛವಾಗಿ ನಡೆಯುತ್ತಿರುತ್ತದೆ. ಇದನ್ನು ಯಾರೂ ಕೂಡ ಕಡಿವಾಣ ಹಾಕುವುದಿಲ್ಲ. ಅಲ್ಲದೇ, ಅದನ್ನು ಯಾರೂ ಕೂಡ ನೋಡುವುದಿಲ್ಲ. ಎಷ್ಟೋ ಬಾರಿ ಸ್ವತಃ ನಾನೇ ಪೋಲೀಸ್‌ನವರಿಗೂ ಫೋನ್ ಮಾಡಿ ವಿಷಯ ತಿಳಿಸಿರುತ್ತೇನೆ. ಆ ಸಮಯದಲ್ಲಿ ಟ್ರಾಫಿಕ್ ಪೋಲೀಸರು, ಒಂದೆರಡು ನಿಮಿಷ ಅವರನ್ನು ಅಲ್ಲಿಂದ ಕಳುಹಿಸುತ್ತಾರೆ. ತದನಂತರ, ಅದೇ ರೀತಿ ಅಲ್ಲಿ ಭಿಕ್ಷಾಟನೆ ಮುಂದುವರೆಯುತ್ತದೆ. ಈ ಭಿಕ್ಷಾಟನೆ ಹಿಂದೆ ಒಂದು ದೊಡ್ಡ ಮಾಫಿಯಾ ಇದೆ ಎಂದು ನನಗೆ ತಿಳಿದು ಬಂದಿರುತ್ತದೆ. ಅಂದರೆ, ಈ ವಿಚಾರದಲ್ಲಿ ಒಬ್ಬ ಏಜೆಂಟ್ ಇರುತ್ತಾನೆ. ಆತ, ಪ್ರತಿ ದಿನ ಬೆಳಗ್ಗೆ ಭಿಕ್ಷಾಟನೆ ಮಾಡುವಂತಹ ಜನರಿಗೆ ಬೆಳಗಿನ ಉಪಾಹಾರ ಕೊಡಿಸಿ, ಅವರನ್ನು ನಿರ್ದಿಷ್ಟವಾದ ಜಾಗಗಳಿಗೆ ತಂದುಬಿಡುತ್ತಾನೆ. ತದನಂತರ, ಮಧ್ಯಾಹ್ನದ ಊಟ ಕೊಟ್ಟು, ರಾತ್ರಿ ವೇಳೆಗೆ ಬಂದು ಅವರಲ್ಲಿ ಭಿಕ್ಷಾಟನೆಯಿಂದ ಸಂಗ್ರಹವಾಗಿರುವಂತಹ ಹಣವನ್ನು ಕಲೆಕ್ಟ್ ಮಾಡಿಕೊಂಡು ಹೋಗುತ್ತಾನೆಂದು ಒಂದು ದೂರು ಇರುತ್ತದೆ. ಇದನ್ನು ಪರಿಶೀಲಿಸಿ, ಸಮಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಭಿಕ್ಷಾಟನೆ ವಿಷಯದಲ್ಲಿ ಮಾಫಿಯಾಗಳು ಇವೆಯೆಂದು ಕಂಡುಬಂದಲ್ಲಿ, ಅವುಗಳಿಗೆ ನಿರ್ಬಂಧ ವಿಧಿಸುವುದಕ್ಕೆ ಈಗಾಗಲೇ ನಾವು ಪೋಲೀಸ್ ಇಲಾಖೆಯಿಂದ 16 ವರ್ಷ ಮೇಲ್ಪಟ್ಟ ಪುರುಷರು ಇರಬಹುದು ಅಥವಾ 18 ವರ್ಷ ಮೇಲ್ಪಟ್ಟ ಮಹಿಳೆಯರು ಇರಬಹುದು, ಅವರುಗಳು ಎಲ್ಲಿ ಭಿಕ್ಷಾಟನೆ ಮಾಡುತ್ತಾರೆ, ಅವರನ್ನು ಹಿಡಿದು ತಾಲ್ಲೂಕು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ, ತದನಂತರ, ಮ್ಯಾಜಿಸ್ಟ್ರೇಟ್‌ರವರ ಆದೇಶದ ಮೇರೆಗೆ ಅವರನ್ನು ನಾವು ಕಸ್ಟಡಿಗೆ ತೆಗೆದುಕೊಂಡು, ನಂತರ ಅವರನ್ನು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿಸುತ್ತೇವೆ. ಜೊತೆಗೆ, ಅಲ್ಲಿರತಕ್ಕಂತಹ ವಿವಿಧ ಕೈಗಾರಿಕೆಗಳಿಗೆ ಸಂಬಂಧಪಟ್ಟಿರುವುದು ಅಥವಾ ಸ್ವಂತ ಉದ್ಯೋಗಗಳನ್ನು ಸೃಷ್ಟಿ ಮಾಡುವುದು ಇರಬಹುದು ಅವುಗಳ ಬಗ್ಗೆ ತರಬೇತಿ ನೀಡಿ, ಪ್ರತಿಯೊಬ್ಬರು ಸ್ವಾಭಿಮಾನದ ಬದುಕು

ಕಟ್ಟಿಕೊಳ್ಳುವುದಕ್ಕೆ ಅನೇಕ ತರಬೇತಿಗಳನ್ನು ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಒದಗಿಸಲಾಗುತ್ತಿದೆ. ಆದರೂ ಸಹ, ಈ ವಿಚಾರದಲ್ಲಿ ಒಂದು ಮಾಫಿಯಾ ಇದನ್ನು ದುರ್ಬಳಕೆ ಮಾಡುತ್ತಿದೆ ಎಂದು ಮಾನ್ಯ ಸದಸ್ಯರು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅಂತಹದ್ದು ಇದ್ದರೆ ಪೋಲೀಸ್ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಜೊತೆ ಚರ್ಚೆ ಮಾಡಿ, ಆ ವ್ಯವಸ್ಥೆಗೆ ನಿರ್ಬಂಧ ಹಾಕುವುದಕ್ಕೆ ಕಠಿಣವಾದಂತಹ ಕ್ರಮಗಳನ್ನು ಖಂಡಿತವಾಗಿಯೂ ನಾವು ಕೈಗೊಳ್ಳುತ್ತೇವೆ.

**ಡಾ॥ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಇದೊಂದು ಗಂಭೀರವಾದಂತಹ ವಿಷಯ ಆಗಿರುವುದರಿಂದ, ಇದನ್ನು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚಿಸಲು ಅವಕಾಶ ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, let me have a discussion with the Police Commissioner. Commissioner ರವರ ಜೊತೆ ಚರ್ಚೆ ಮಾಡಿ, ಆ ರೀತಿಯ ಘಟನೆಗಳು ಇದ್ದರೆ ಅಥವಾ ಮಾನ್ಯ ಸದಸ್ಯರಿಗೆ ಯಾರಾದರೂ ಆ ರೀತಿಯ ಮಾಫಿಯಾ ಮಾಡುತ್ತಿರುವುದು ತಿಳಿದುಬಂದರೆ ನಮಗೆ ತಿಳಿಸಲೂಬಹುದು ಅಥವಾ ನಾವೇ ಸ್ವಯಂಪ್ರೇರಿತವಾಗಿ ಒಂದು ಚರ್ಚೆ ಮಾಡಿ, ಆ ರೀತಿಯ ಪ್ರಕರಣಗಳು ಇದ್ದರೆ, ಅದನ್ನು ನಿರ್ಬಂಧಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಡಾ॥ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರದ ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿ ಮರಳಿ ಮನೆಗೆ ಕಳುಹಿಸಿರುವ ಅಂಕಿ-ಅಂಶಗಳ ಪಟ್ಟಿಯಲ್ಲಿ, "ಮೈಸೂರು ಜಿಲ್ಲೆಯಲ್ಲಿ 397; ಚಿತ್ರದುರ್ಗ ಜಿಲ್ಲೆಯಲ್ಲಿ 156; ದಾವಣಗೆರೆ ಜಿಲ್ಲೆಯಲ್ಲಿ 150; ಬೆಂಗಳೂರು 157 ಜನ" ಎಂದು ತೋರಿಸಿರುತ್ತೀರಿ. ಆದರೆ, ಅನೇಕ ನಿರಾಶ್ರಿತ ಕೇಂದ್ರಗಳಿಂದ ಅನೇಕ ಭಿಕ್ಷುಕರು ವಾಪಸ್ಸು ಬಂದಿರುತ್ತಾರೆ. ಭಿಕ್ಷುಕರ ಅಭಿವೃದ್ಧಿಗಾಗಿ ಸುಮಾರು ರೂ.50 ರಿಂದ ರೂ.100 ಕೋಟಿಗಳಷ್ಟು ಹಣ ಖರ್ಚು ಮಾಡುತ್ತಾರೆ. ಆ ಹಣ ಎಲ್ಲಿಗೆ ಹೋಗುತ್ತದೆ?

**ಶ್ರೀ ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಭಿಕ್ಷುಕರನ್ನು ನಾವು ನಿರಾಶ್ರಿತ ಪರಿಹಾರ ಕೇಂದ್ರದಿಂದ ವಾಪಸ್ಸು ಕಳುಹಿಸುವುದಿಲ್ಲ. ಅವರಿಗೆ ಏನು ಸಮಸ್ಯೆ ಇದೆ ಎಂಬುದನ್ನು ತಿಳಿದುಕೊಂಡು, ಅವರಿಗೆ ಬೇಕಾದಂತಹ ಕೌಶಲ್ಯ ತರಬೇತಿಗಳನ್ನು ಕೊಡಿಸಿ, ಅವರು ವಾಪಸ್ಸು ಬರುವಾಗ, ಅವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ವೃದ್ಧಾಪ್ಯ ವೇತನ ಕೊಟ್ಟು ಅವರು ಸ್ವಾಭಿಮಾನವಾಗಿ ಜೀವನ ನಡೆಸುವಂತೆ ಅವರಲ್ಲಿ ಅರಿವು ಮೂಡಿಸಲಾಗುತ್ತದೆ. ಈ ರೀತಿ ಅನೇಕ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ನಮ್ಮ ಇಲಾಖೆ ವತಿಯಿಂದ ಹಮ್ಮಿಕೊಂಡಿರುತ್ತೇವೆ. ಒಂದು ವೇಳೆ ನಮ್ಮ ಕಣ್ಣು ತಪ್ಪಿಸಿ ಹೋದಂತಹ ಭಿಕ್ಷುಕರ ಮೇಲೆ ನಿಗಾವಹಿಸಿ, ಅವರ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ.

**ಡಾ॥ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಭಿಕ್ಷಾಟನೆಗೆ ಸಣ್ಣ ಸಣ್ಣ ಮಕ್ಕಳನ್ನು ಕರೆದುಕೊಂಡು ಬರುತ್ತಾರೆ.

**ಸಭಾಪತಿಯವರು:-** ಆಯಿತು, ಎಲ್ಲಾ ವಿಚಾರಗಳನ್ನು ಮಾನ್ಯ ಸಚಿವರು ಈಗಾಗಲೇ ಹೇಳಿರುತ್ತಾರೆ.

**ಪ್ರಶ್ನೆ ಸಂಖ್ಯೆ: 1194**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) (ಶ್ರೀ ಬಸನಗೌಡ ಬಾದರ್ಲಿ ಪರವಾಗಿ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ, ಆ ಉತ್ತರವನ್ನು ನೋಡಿದ ನಂತರ, ಸಾಕಷ್ಟು ಪ್ರಶ್ನೆಗಳು ಸಹ ಉದ್ಭವವಾಗುತ್ತಿವೆ. ಸಿಂಧನೂರು ತಾಲ್ಲೂಕಿನಲ್ಲಿ 03 ಡಾ॥ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಗಳು ಹಾಗೂ 02 ಡಾ॥ ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಸೇರಿದಂತೆ, ಒಟ್ಟು 05 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ ಎಂದು ಉತ್ತರ ನೀಡಿರುತ್ತಾರೆ. ಅದೇ ನಿಟ್ಟಿನಲ್ಲಿ ಒಟ್ಟು 05 ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳಲ್ಲಿ ಸುಮಾರು 600 sanctioned strength ಇದೆ.

(ಮುಂದು)

(374) 13.03.2026 ವೈಎಲ್-ಆರ್‌ಎನ್ 11.40 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) (ಮಾನ್ಯ ಬಸನಗೌಡ ಬಾದರ್ಲಿ ಪರವಾಗಿ):-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವಂತಹ ಉತ್ತರದಲ್ಲಿ ಒಟ್ಟು 5 ವಿದ್ಯಾರ್ಥಿ ನಿಲಯಗಳಿಗೆ ಅನುಮೋದನೆ ನೀಡಿದ್ದು, 4 ವಿದ್ಯಾರ್ಥಿ ನಿಲಯಗಳಲ್ಲಿ 100 ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಮಂಜೂರಾತಿ ನೀಡಲಾಗಿದ್ದು, 1 ವಿದ್ಯಾರ್ಥಿ ನಿಲಯದಲ್ಲಿ 200 ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಮಂಜೂರಾತಿ ನೀಡಲಾಗಿದೆ. ಹಾಗೆಯೇ ಒಟ್ಟು 1,600 ವಿದ್ಯಾರ್ಥಿಗಳ ದಾಖಲಾತಿ ಇದೆ ಎಂದು ತಿಳಿಸಿದ್ದಾರೆ. 5 ವಿದ್ಯಾರ್ಥಿ ನಿಲಯಗಳಿಗೆ ಪೂರ್ಣ ಪ್ರಮಾಣದ ಸಿಬ್ಬಂದಿಯ ನೇಮಕಾತಿ ಆಗಿದೆಯೇ ಅಥವಾ ಸಿಬ್ಬಂದಿ ಕೊರತೆ ಇದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಡಾ॥ ಹೆಚ್.ಸಿ.ಮಹಾದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, 2013ನೇ ಇಸವಿಯಲ್ಲಿ ನಮ್ಮ ಸರ್ಕಾರ ಅಸ್ತಿತ್ವದಲ್ಲಿದ್ದಾಗ 'Hostel for All' policy ಅಂದರೆ, `ಯಾರಿಗೂ ಹಾಸ್ಟೆಲ್ ವ್ಯವಸ್ಥೆ ಇರುವುದಿಲ್ಲ' ಎನ್ನುವಂಥ ನೀತಿಯನ್ನು ಹೊರಡಿಸಲಾಗಿತ್ತು. 5 ವಸತಿ ಶಾಲೆಗಳಲ್ಲಿ ಇರತಕ್ಕಂಥ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ ಒಟ್ಟು 600 ಆಗಿದ್ದು, 1600 ವಿದ್ಯಾರ್ಥಿಗಳ ದಾಖಲಾತಿ ಮಾಡಲಾಗಿದೆ. ಅಲ್ಲಿಗೆ ಹೆಚ್ಚುವರಿಯಾಗಿ 1000 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದ್ದೇವೆ. ಏಕೆಂದರೆ, ಹಾಸ್ಟೆಲ್ ಇಲ್ಲವೆಂಬ ಕಾರಣಕ್ಕೆ ಉಳಿದ ಮಕ್ಕಳಿಗೆ ಓದಲು ಅನಾನುಕೂಲವಾಗಬಾರದೆಂಬ ಉದ್ದೇಶದಿಂದಾಗಿ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದ್ದೇವೆ. ಈಗಾಗಲೇ 1000 ಹೆಚ್ಚುವರಿ ವಿದ್ಯಾರ್ಥಿಗಳಿಗೆ ಏನು ಅವಕಾಶ ಕಲ್ಪಿಸಲಾಗಿದೆ, ಈ ಸಂಬಂಧ 1 ಸ್ವಂತ ಕಟ್ಟಡ ಮತ್ತು 3 ಬಾಡಿಗೆ ಕಟ್ಟಡದಲ್ಲಿ ಅವಕಾಶ ಕಲ್ಪಿಸಿದ್ದೇವೆ. ಮುಂದಿನ ಹಣಕಾಸಿನ ಲಭ್ಯತೆಗನುಸಾರವಾಗಿ ಸ್ವಂತ ಕಟ್ಟಡದಲ್ಲಿ infrastructure build ಮಾಡಲಾಗುವುದು ಮತ್ತು ಊಟ ಇರಬಹುದು, ಉಳಿದುಕೊಳ್ಳಲು ವಸತಿ ಇರಬಹುದು,

ಅದ್ಯಾವುದರಿಂದಲೂ ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗದಂತೆ/ತೊಂದರೆಯಾಗದಂತೆ 3 ಬಾಡಿಗೆ ಕಟ್ಟಡ ಮತ್ತು 1 ಸ್ವಂತ ಕಟ್ಟಡ apart from this type of residential hostels, ಅದರನ್ವಯ ಕ್ರಮಕೈಗೊಂಡಿದ್ದೇವೆ.

**ಶ್ರೀ ಶ್ರೀನಿವಾಸ್ (ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 5 ವಿದ್ಯಾರ್ಥಿನಿಲಯಗಳಲ್ಲಿ ಪೂರ್ಣ ಪ್ರಮಾಣದ ಸಿಬ್ಬಂದಿಗಳಿದ್ದಾರೆ ಎಂದು ತಿಳಿಸಿದ್ದಾರೆ. 600 ಸಂಖ್ಯೆಯ ವಿದ್ಯಾರ್ಥಿಗಳನ್ನು ನಿರ್ವಹಣೆ ಮಾಡಲು ಸಿಬ್ಬಂದಿಗಳ ನೇಮಕವಾಗಿರುತ್ತದೆ. ಆದರೆ, 1,600 ವಿದ್ಯಾರ್ಥಿಗಳು ಇದ್ದ ಸಂದರ್ಭದಲ್ಲಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಅವರ ಕುಟುಂಬದ ಬದುಕನ್ನು ಕಟ್ಟಿಕೊಳ್ಳಲು ದೊಡ್ಡದಾದ ಆಸೆಯನ್ನಿಟ್ಟುಕೊಂಡು ಹಾಸ್ಟೆಲ್‌ಗೆ ಬಂದ ಸಂದರ್ಭದಲ್ಲಿ ಅದೇ ರೀತಿಯ ಬದುಕು ಹಾಸ್ಟೆಲ್‌ನಲ್ಲಿ ಮುಂದುವರೆದರೆ ಹೇಗೆ ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ, 3 ಹಾಸ್ಟೆಲ್‌ಗಳಲ್ಲಿ 200 ವಿದ್ಯಾರ್ಥಿಗಳು ವಾಸಿಸುವ ಕಡೆ 781 ವಿದ್ಯಾರ್ಥಿಗಳಿದ್ದಾರೆ. ಹಾಗೆಯೇ 2 ಹಾಸ್ಟೆಲ್‌ಗಳಲ್ಲಿ 219 ವಿದ್ಯಾರ್ಥಿನಿಯರಿದ್ದಾರೆ. ಅಂದರೆ, ಬಾಡಿಗೆ ಕಟ್ಟಡದಲ್ಲಿ 781 ವಿದ್ಯಾರ್ಥಿಗಳಿಗೆ accommodation ಮಾಡಲಿಕ್ಕೆ ಸಾಧ್ಯವಿಲ್ಲ. ಸಿಂಧನೂರು ತಾಲ್ಲೂಕು ಮಟ್ಟದಲ್ಲಿ ಯಾವುದಾದರೂ ಬಾಡಿಗೆ ಕಟ್ಟಡ ಸಿಕ್ಕಿದರೆ, ಅಷ್ಟು ವಿದ್ಯಾರ್ಥಿಗಳಿಗೆ ಸಂಪೂರ್ಣವಾಗಿ accommodate ಮಾಡಲು ಕಷ್ಟ ಸಾಧ್ಯ. ಆ ರೀತಿ ಇದ್ದಾಗ ಮತ್ತಷ್ಟು ವಿದ್ಯಾರ್ಥಿಗಳನ್ನು ಕೂರಿಸಿದರೆ ಹೇಗೆ? ಒಂದು ಕೊಠಡಿಯಲ್ಲಿ ಎಷ್ಟು ವಿದ್ಯಾರ್ಥಿಗಳನ್ನು ಕೂರಿಸಲು ಸಾಧ್ಯ? ಮಾನ್ಯ ಸಚಿವರು ಕೊಟ್ಟಿರುವಂಥ ಉತ್ತರದಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯ ಲೆಕ್ಕ ನೋಡಿದರೆ, ಎಷ್ಟು ಕೊಠಡಿಗಳಿವೆ ಎನ್ನುವಂಥ ಪ್ರಶ್ನೆ ಕೇಳಬೇಕಾಗುತ್ತದೆ.

**ಡಾ॥ ಹೆಚ್.ಸಿ.ಮಹಾದೇವಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವನಗೌಡ ಬಾದರ್ಲಿರವರು ಸದನದಲ್ಲಿ ಏನಾದರೂ ಇದ್ದಿದ್ದರೆ ಇಷ್ಟು ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ಆದರೆ, ಡಾ॥ ಡಿ.ಟಿ.ಶ್ರೀನಿವಾಸ್‌ರವರು ಎಲ್ಲಾ ಪ್ರಶ್ನೆಯನ್ನು ಕೇಳುತ್ತಿದ್ದಾರೆ. `Hostel for All' ಎನ್ನುವಂಥ ಪಾಲಿಸಿ ಕೆಳಗೆ ಎಲ್ಲಾ ಮಕ್ಕಳಿಗೂ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಈ ಸಾಲಿನ ಬಜೆಟ್‌ನಲ್ಲಿ ಖಾಲಿ ಹುದ್ದೆ ಇರುವಂಥ Wardens, ಅದು Men Wardens and Women Wardens ಇರಬಹುದು, ಅವರ ನೇಮಕಾತಿ ಮಾಡಲು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ನಮಗೂ ಸಹ 600 ವಿದ್ಯಾರ್ಥಿಗಳು ಇರುವ ಕಡೆ ಮತ್ತು 1,600 ವಿದ್ಯಾರ್ಥಿಗಳು ಇದ್ದಾಗ ಸಿಬ್ಬಂದಿಗಳ ಕೊರತೆ ಯಾವ ರೀತಿ ಉದ್ಭವಿಸುತ್ತದೆ ಎಂಬುದು ಗಮನದಲ್ಲಿದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಉಪಾಧ್ಯಾಯರ ಕೊರತೆ ಇರಲಿ ಮತ್ತು ವಾರ್ಡನ್ ಕೊರತೆ ಇರಲಿ, ಎಚ್ಚರಿಕೆವಹಿಸಿ ಕ್ರಮಕೈಗೊಳ್ಳುತ್ತೇವೆ.

**ಶ್ರೀ ಶ್ರೀನಿವಾಸ್ (ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೇ, ಈ ಸಾಲಿನ ಆಯವ್ಯಯದಲ್ಲಾದರೂ ಆ ಭಾಗಕ್ಕೆ ಕೊಡಬೇಕೆಂದು ಮನವಿ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ: 1220
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ಎರಡು-ಮೂರು ಆರ್ಥಿಕ ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಕೊಡುವಂಥ ವಿದ್ಯಾರ್ಥಿವೇತನ ಹಾಗೂ ಪ್ರೋತ್ಸಾಹಧನವನ್ನು ಪಾವತಿಸಲು ನಿಗದಿಪಡಿಸಲಾದ ವಾರ್ಷಿಕ ಗುರಿ ಎಷ್ಟು; ಎಂಬುದರ ಅಂಕಿಸಂಖ್ಯೆಯ ಬಗ್ಗೆ ಉತ್ತರವನ್ನು ಕೊಟ್ಟಿದ್ದು, ಜಿಲ್ಲಾವಾರು ಅದಕ್ಕೆ ಬಿಡುಗಡೆಯಾದ ಅನುದಾನ ಎಲ್ಲವೂ ಸರಿಯಾಗಿದೆ. ನಿಗದಿತ ಗುರಿ ಹೋಲಿಸಿದರೆ ಶೇಕಡವಾರು ಭೌತಿಕ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ಅನುಬಂಧದಲ್ಲಿ ಕೊಟ್ಟಿರುವಂಥ ಮೆಟ್ರಿಕ್ ನಂತರದ ಮತ್ತು ಮೆಟ್ರಿಕ್ ಪೂರ್ವದ ಭೌತಿಕ ಸಾಧನೆಯನ್ನು ನೋಡಿದರೆ, ಮಾಹಿತಿ ಸರಿಯಾಗಿದೆ. ಆದಾಗ್ಯೂ ಪ್ರೋತ್ಸಾಹ ಧನ ಕಾರ್ಯಕ್ರಮದಲ್ಲಿ ಶೇಕಡವಾರು ಪ್ರಗತಿ 100% ಎಂದು ತಿಳಿಸಲಾಗಿದ್ದು, ಪ್ರೋತ್ಸಾಹ ಧನ ವಿಷಯ ಬಂದಾಗ ನಿಜವಾಗಿಯೂ ತಾಳೆಯಾಗುತ್ತಿಲ್ಲ. ಪ್ರೋತ್ಸಾಹಧನ ಕೊಟ್ಟಿರುವುದು ಕಡಿಮೆಯಾಗಿದೆ.

ಇವತ್ತಿನದ ದಿವಸ ಈ ಯೋಜನೆಗಾಗಿ ಹೈದ್ರಾಬಾದ್ ಕರ್ನಾಟಕ ಭಾಗದ ಕೊಪ್ಪಳದಲ್ಲಿ ಸುಮಾರು ರೂ.214.22 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆದರೆ, ಒಟ್ಟು ಗುರಿಯಲ್ಲಿ ಶೇಕಡ 71.76 ರಷ್ಟು ಸಾಧನೆಯಾಗಿದ್ದು, ಉತ್ತರದಲ್ಲಿ ಶೇಕಡ 100 ರಷ್ಟು ಸಾಧನೆ ಎಂದು ತೋರಿಸಲಾಗಿದೆ. ಇಲ್ಲಿಯವರೆಗೂ ಸುಮಾರು 200.10 ಲಕ್ಷವನ್ನು ಮಾತ್ರ ಖರ್ಚು ಮಾಡಲಾಗಿದೆ. ಆದರೆ, ಸುಮಾರು 448 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮಂಜೂರಾಗಿಲ್ಲ. ಆದರೆ, ಮಾನ್ಯ ಸಚಿವರು ಶೇಕಡ 100 ರಷ್ಟು ಪ್ರೋತ್ಸಾಹ ಧನ ನೀಡಲಾಗಿದೆ ಎಂದು ಹೇಳುತ್ತಾರೆ. 2025-26ನೇ ಸಾಲಿನ ಆರ್ಥಿಕ ವರ್ಷವು ಇದೇ ತಿಂಗಳ ಅಂತ್ಯಕ್ಕೆ ಮುಕ್ತಾಯವಾಗಲಿದ್ದು, ಇನ್ನೂ ಅನೇಕ ಬಡ ವಂಗಡದ ವಿದ್ಯಾರ್ಥಿಗಳು ಪ್ರೋತ್ಸಾಹ ಧನದಿಂದ ವಂಚಿತರಾಗಿದ್ದಾರೆ.

**ಡಾ॥ ಹೆಚ್.ಸಿ.ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳಿಗೆ ಕೊಡುವಂಥ ಸ್ಕಾಲರ್‌ಶಿಪ್ ಆಗಲೀ, ಪ್ರೋತ್ಸಾಹ ಧನವಾಗಲೀ ನಿಲ್ಲಿಸಿಲ್ಲ. ಏನು ಮಾರ್ಗಸೂಚಿ ಇದೆ, ಅದರ ಪ್ರಕಾರ ಕೊಡುತ್ತಿದ್ದೇವೆ. ಏತಕ್ಕಾಗಿ ಕಡಿಮೆಯಾಗಿದೆ ಎಂದರೆ, examination system ನ್ನು ಸಿ.ಸಿ.ಟಿವಿ ಕ್ಯಾಮರಾ ಮೂಲಕ ನಡೆಸಿದ ಮೇಲೆ ಇಡೀ ರಾಜ್ಯದ ಬರುವಂಥ ಫಲಿತಾಂಶವೇ ಕಡಿಮೆಯಾಗಿದೆ. ಏಕೆಂದರೆ, transparent ಆಗಿ ಪರೀಕ್ಷೆ ನಡೆದಿದ್ದು, percentage of pass ಕಡಿಮೆಯಾದ ಪ್ರಯುಕ್ತ ಸಹಜವಾಗಿ number is reduced. ಇದು ಮುಖ್ಯವಾದ ಕಾರಣವಾಗಿದೆ. ಉಳಿದಂತೆ ಸ್ಕಾಲರ್‌ಶಿಪ್, ಪ್ರೋತ್ಸಾಹ ಧನವನ್ನು ಶೇಕಡ 100 ಕ್ಕೆ 100 ರಷ್ಟು ಕೊಡುತ್ತಿದ್ದು, ನಿಲ್ಲಿಸುವಂಥದ್ದಾಗಲೀ ಅಥವಾ ವಿಳಂಬ ಮಾಡುವಂಥ ಪ್ರಶ್ನೆ ಇರುವುದಿಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಪ್ರೊ. ಎಂ.ಗೋವಿಂದರಾವ್‌ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯು ರಾಜ್ಯದ ತಾಲ್ಲೂಕುಗಳಲ್ಲಿ ಸಾಮಾಜಿಕ, ಆರ್ಥಿಕ ಸೂಚ್ಯಂಕಗಳನ್ನು ಪರಿಶೀಲಿಸಿದಾಗ ನಿಜವಾಗಿಯೂ ಶಿಕ್ಷಣವು ಈ ಭಾಗದಲ್ಲಿ ಬಹಳಷ್ಟು ಹಿಂದೆ ಉಳಿದಿದೆ. ಅದಲ್ಲದೇ ವಿದ್ಯಾರ್ಥಿಗಳ ವೇತನ ಬಿಡುಗಡೆಯಲ್ಲಿ ವಿಲಂಬವಾಗಿದೆ. ಈ ಸಂಬಂಧ ಪ್ರಶ್ನೆಯನ್ನು ಕೇಳಿದಾಗ, ಆಧಾರ್ ಕಾರ್ಡ್‌ಗಳು in-active ಆಗಿವೆ ಎಂದು ತಿಳಿಸಿದ್ದಾರೆ. ನಿಜವಾಗಿ ಹೇಳುವುದಾದರೆ, ಅದರಲ್ಲಿ ಯಾವುದೇ ರೀತಿಯ ತೊಂದರೆ ಇರುವುದಿಲ್ಲ. 2024-2025ನೇ ಸಾಲಿನಲ್ಲಿ ಸಲ್ಲಿಸಿರುವಂಥ ಅರ್ಜಿಗಳು ಇಲ್ಲವೆಂದು ಏನು ಹೇಳಿದ್ದಾರೆ, ಹೊಸದಾಗಿ ಬರತಕ್ಕಂಥ ಅರ್ಜಿಗಳು ಸಹ ಬಾಕಿಯಲ್ಲಿವೆ. ಮೊದಲನೆಯದಾಗಿ, ವಿದ್ಯಾರ್ಥಿಗಳಿಗೆ ಯಾವ ಕಾರಣಕ್ಕಾಗಿ ಸ್ಕಾಲರ್‌ಶಿಪ್ ತಲುಪಿಲ್ಲ. ಎರಡನೆಯದಾಗಿ, ಮಧ್ಯಮ ವರ್ಗದ ವಿದ್ಯಾರ್ಥಿಗಳು ಕಾಲೇಜು ಬಿಟ್ಟು ಹೋಗುವ ಸಾಧ್ಯತೆ ಇದೆ. ಮಾನ್ಯ ಸಚಿವರು ಹೇಳಿದ ಹಾಗೆ result ಒಂದು ಗಂಭೀರವಾದ ಪರಿಣಾಮ ಬೀರಿದೆ. ಆದಾದ ನಂತರ ಹಿಂದೆ ಇದ್ದ ವಿದ್ಯಾರ್ಥಿಗಳಿಗೆ ಬಹಳಷ್ಟು ಹಿನ್ನಡೆಯಾಗಿದ್ದು, ಆ ವಿದ್ಯಾರ್ಥಿಗಳು ಶಾಲೆಯನ್ನು

ಬಿಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ, ಪೋಷಕರು ಆ ಮಕ್ಕಳನ್ನು ಶಾಲೆಯಿಂದ ಬಿಡಿಸಿ, ಕೂಲಿಗೆ ಕಳುಹಿಸುತ್ತಿದ್ದಾರೆ. ಹಾಗಾಗಿ, ಆ ಮಕ್ಕಳನ್ನು ಪ್ರೋತ್ಸಾಹಿಸುವ ಸಲುವಾಗಿ ಇಲಾಖೆಯಿಂದ ಪರಿಶೀಲನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ post-metric scholarship and incentives ನಿಗದಿತ ಸಮಯದೊಳಗೆ ಬಿಡುಗಡೆ ಮಾಡುವಂಥ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುತ್ತೇನೆ.

**ಡಾ॥ ಹೆಚ್.ಸಿ.ಮಹಾದೇವಪ್ಪ:-** ಮಾನ್ಯ ಸಭಾಪತಿಯವರೇ, 1ನೇ ತರಗತಿಯಿಂದ 8ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡುವಂಥ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಸ್ಕಾಲರ್ಶಿಪ್‌ನ್ನು ಕೊಡುತ್ತಿದ್ದು, ಅದರಲ್ಲಿ ಯಾವುದೇ ತಕರಾರು ಇರುವುದಿಲ್ಲ, ಆಗಿಂದಾಗ್ಗೆ ಹೋಗುತ್ತಿರುತ್ತದೆ. 9ನೇ ಮತ್ತು 10ನೇ ತರಗತಿ ಹಾಗೂ post-metric ಇರುವವರಿಗೆ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಳಗೊಂಡಂತೆ 60:40 ಅನುಪಾತದಲ್ಲಿ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಪ್ರೋತ್ಸಾಹಧನವನ್ನು ಭರಿಸಲಾಗುವುದು, ಅದರಲ್ಲಿ ಲ್ಯಾಪ್ಸ್ ಏನೂ ಆಗುವುದಿಲ್ಲ. ಬ್ಯಾಂಕ್ ಅಕೌಂಟ್‌ಅನ್ನು establish ಮಾಡಲಿಲ್ಲವೆಂದರೆ, ಪ್ರೋತ್ಸಾಹ ಧನವನ್ನು ಕೊಡುವುದು ವಿಳಂಬವಾಗಬಹುದೇ ವಿನಃ ಕೊಟ್ಟೇ ಕೊಡುತ್ತೇವೆ. ಅದಕ್ಕಾಗಿ ತಾಲ್ಲೂಕು ಮಟ್ಟದ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲು, ಸಂಪರ್ಕ ಸಾಧಿಸಲು, ಕೌನ್ಸಿಲಿಂಗ್ ಆಫೀಸರ್‌ರವರನ್ನೇ ನೇಮಕ ಮಾಡಲಾಗಿದೆ. ಒಂದು ವೇಳೆ ಆಗಲಿಲ್ಲವೆಂದರೆ, ಕಾಲೇಜುಗಳನ್ನು ಬಿಡದೇ ಇರುವ ರೀತಿ ಎಚ್ಚರಿಕೆ ವಹಿಸುವುದರ ಜೊತೆಗೆ ಆಧಾರ್ ಕಾರ್ಡ್ ಲಿಂಕ್ ಮಾಡಿಕೊಳ್ಳಿ ಎಂದು ಜಾಗೃತಿ ಮೂಡಿಸುವಂಥ ಕೆಲಸವನ್ನೂ ಮಾಡಲಾಗುವುದು. ಸ್ಕಾಲರ್ಶಿಪ್ ಕೊಡದೇ ಇರುವುದಾಗಲೀ, ವಿಳಂಬ ಮಾಡುವುದಾಗಲೀ ಪ್ರಶ್ನೆ ಉದ್ಭವಿಸುವುದಿಲ್ಲ. ನಾನು ಭಾರತ ಸರ್ಕಾರದ ಮೊರೆ ಹೋಗಿ ಹಿಂದೆ ಇದ್ದ ಪದ್ಧತಿಯನ್ನೇ ಮರುಸ್ಥಾಪನೆ ಮಾಡಿ, ಆಯಾಯ ಕಾಲೇಜಿನವರಿಗೆ ಕೊಟ್ಟು ಬಿಡೋಣ ಎಂದು ಹೇಳಿದ್ದೇವೆ. ಕೆಲವು ಬಾರಿ ವಿದ್ಯಾರ್ಥಿಗಳ ಖಾತೆಗೆ ಹಣ ಹೋದಾಗ ಸ್ವಲ್ಪ ಹಣವನ್ನು ವಿದ್ಯಾರ್ಥಿಗಳು ಡ್ರಾ ಮಾಡಿ, ಖರ್ಚು ಮಾಡಿಕೊಂಡು ನಂತರ ಕಟ್ಟದೇ ಇರುವಂಥ ಪರಿಸ್ಥಿತಿಗಳಿವೆ. ಈ ಸಂಬಂಧ ಎರಡು-ಮೂರು ಬಾರಿ Union Social Justice Minister ರವರನ್ನು ಭೇಟಿ ಮಾಡಿ, ಇದನ್ನು simplify ಮಾಡುವುದರ ಮೂಲಕ ಇ-ಖಾತೆ, e-rupee ಮಾಡಿ ಎಂದು ಕೇಳಿದ್ದೇವೆ. ಭಾರತ ಸರ್ಕಾರಕ್ಕೆ ಸಲಹೆಯನ್ನು ಸಹ ನೀಡಿದ್ದೇವೆ. ಆದರೆ, ಏನೇ ಇರಲಿ 60:40 ಅನುಪಾತ ಏನಿದೆ, ಅದನ್ನು ಯಾವುದೇ ರೀತಿ ತೊಂದರೆಯಾಗದಂತೆ ಕಡ್ಡಾಯವಾಗಿ ವಿತರಣೆ ಮಾಡಲಾಗುವುದು. ಮತ್ತು ವಿದ್ಯಾರ್ಥಿಗಳು ಈ ಕಾರಣಕ್ಕಾಗಿಯೇ ತೊಂದರೆಗೊಳಗಾಗದೇ ಇರುವ ರೀತಿ ಕ್ರಮವಹಿಸಲಾಗುವುದು.

(ಮುಂದು)

(375) 13.03.2026/11.50/ ಎಸ್‌ಕೆ.ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

ಪ್ರಶ್ನೆ ಸಂಖ್ಯೆ 1290
(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಸಮಗ್ರವಾದ ಉತ್ತರವನ್ನು ಒದಗಿಸಿದ್ದಾರೆ. 2025-26ನೇ ಸಾಲಿನಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿದ ಪಟ್ಟಿಯನ್ನು ರದ್ದುಗೊಳಿಸಿರುವ ಬಗ್ಗೆ 'ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೆ' ಎಂಬ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು 'ಗಮನಕ್ಕೆ ಬಂದಿದೆ' ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಯಾವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ; ಅರ್ಹ ಫಲಾನುಭವಿಗಳು ಇಲ್ಲದೇ ಇರುವುದರಿಂದ, ಅದನ್ನು ಮರು ಪರಿಶೀಲಿಸಿ ಪಟ್ಟಿ ಮಾಡುವುದಕ್ಕೆ ರದ್ದುಪಡಿಸಿದ್ದೇವೆ ಎಂದು ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಈ ಪಟ್ಟಿ ಮಾಡುವವರು ಯಾರು? ಇದಕ್ಕೆ ಸಂಬಂಧಪಟ್ಟ ಇಲಾಖೆಯವರು. ಈ ಇಲಾಖೆಯು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದವರ ಮೇಲೆ Enforcement Directorate ರವರ case ನಡೆಯುತ್ತಿದೆ. ಈ ನಿಗಮದ ಅಧಿಕಾರಿಗಳಿಗೆ ಫಲಾನುಭವಿಗಳು ಹೋಗಿ ಹಣ ನೀಡಿದಂತಹವರಿಗೆ, ಸಾಲವನ್ನು ಮಂಜೂರು ಮಾಡಿರುವ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಈ ಇಲಾಖೆಯಲ್ಲಿ ದಕ್ಷ ಸಚಿವರು ಇದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಇದು ಬಡವರಿಗೆ ಕೊಡುವಂತಹದ್ದು. ಇದು ಬಡವರ ಪರ ಸರ್ಕಾರ. ಕಾಂಗ್ರೆಸ್ ಸರ್ಕಾರ ಮಾತ್ರ ಬಡವರ ಪರ ಸರ್ಕಾರ. ಇನ್ಯಾವುದೂ ಕೂಡ ಬಡವರ ಪರ ಸರ್ಕಾರವಲ್ಲ. ಬಡವರ ಪರ ಸರ್ಕಾರ ಎಂದು ಮಾತನಾಡುವುದು. ಆದರೆ ಲೂಟಿ ಹೊಡೆದು ನುಂಗಿ ನೀರು ಕುಡಿಯುತ್ತಿದ್ದಾರೆ. ಆದರೆ ಬೇರೆಯವರ ಅಕೌಂಟ್‌ನಲ್ಲಿ ಅಕೌಂಟ್ ಮಾಡುತ್ತಿದ್ದಾರೆ. ....ಇದರ ಬಗ್ಗೆ ಇಲಾಖೆಯಲ್ಲಿನ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಉತ್ತರ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಡಾ॥ ಹೆಚ್.ಸಿ. ಮಹದೇವಪ್ಪ (ಸಮಾಜ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೂಡ ಬಡವರ ಪರವಾಗಿದ್ದೀರಿ. ಇಲ್ಲಿ ಸಮರ್ಪಕವಾದ ತರಹ State sector, District sector, ನಿಗಮಗಳಲ್ಲಿ ಆಗಿರುವಂತಹ ಅಭಿವೃದ್ಧಿಯ ಬಗ್ಗೆ ಮಾನ್ಯ ಸದಸ್ಯರಿಗೆ ಸವಿಸ್ತಾರವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಫಲಾನುಭವಿಗಳನ್ನು ಹಿಂಪಡೆದಿರುವ ಕಾರಣವೇನೆಂದರೆ, ಒಬ್ಬ ವ್ಯಕ್ತಿಯ ಹೆಸರು, ಪಟ್ಟಿಯಲ್ಲಿ ಅದೇ ಹೆಸರು ನಾಲ್ಕೈದು ಬಾರಿ ಇರುವುದು ಕಂಡು ಬರುತ್ತಿತ್ತು. ಪಟ್ಟಿಯಲ್ಲಿ ಒಂದೇ ಕಡೆ ಹೆಚ್ಚು ಅದೇ ಹೆಸರು ಇತ್ತು. ಅದನ್ನು ಹಿಂಪಡೆದು ಅರ್ಹ ಫಲಾನುಭವಿಗಳ ಬಗ್ಗೆ ಪರಿಶೀಲನೆ ಮಾಡಿ ಕೊಡುವ ಉದ್ದೇಶವನ್ನು ಬಿಟ್ಟರೆ ಬೇರೆನಿಲ್ಲ. ಈ ಆನ್‌ಲೈನ್‌ನಲ್ಲಿ ಅರ್ಜಿಗೆ ಕರೆಯುವ ಮುಂಚಿತವಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ ಆ ರೀತಿಯಾಗಿ ನಡೆಯುತ್ತಿತ್ತು. ಆನ್‌ಲೈನ್‌ನ್ನು ಪರಿಚಯಿಸಿದ ನಂತರ ಈ ರೀತಿಯ

ಅನಾನುಕೂಲಗಳು ಮತ್ತು ಅವ್ಯವಹಾರಗಳನ್ನು ತಡೆಯುವುದಕ್ಕೆ ಸಾಧ್ಯವಾಗಿದೆ. ಬೇರೆ ಬೇರೆ ಇಲಾಖೆಯಲ್ಲಿ, ನಿಗಮಗಳಲ್ಲಿ ಸಿ.ಒ.ಡಿ., ತನಿಖೆ ನಡೆಯುವುದು ತಪ್ಪುವುದಿಲ್ಲ. ತನಿಖಾ ವರದಿ ಬಂದ ನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಎರಡು ಮಾತಿಲ್ಲ. ಈ ಹಿಂಪಡೆದಿರುವ ಪಟ್ಟಿಯಲ್ಲಿ ಒಬ್ಬರ ಹೆಸರು ನಾಲ್ಕೈದು ಬಾರಿ ಬರುತ್ತಿತ್ತು. ಒಂದು ಕಡೆಯಲ್ಲಿ ಹೆಚ್ಚು ಕೊಟ್ಟಿರುವುದು ಕಂಡು ಬಂದಿತ್ತು. ಅರ್ಹ ಫಲಾನುಭವಿಗಳನ್ನು ಗುರುತಿಸಿ, ಅವರಿಗೆ ಯಾವುದೇ ತೊಂದರೆಯಾಗದಂತೆ ನಮ್ಮ target ನಲ್ಲಿ redistribute ಅನ್ನು ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ಮಾಡುತ್ತೇವೆ ಎಂಬ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಟಿ.ಎನ್. ಜವರಾಯಿ ಗೌಡ:-** ಮಾನ್ಯ ಸಭಾಪತಿಯವರೇ, ಈಗ ಪಟ್ಟಿ ಮಾಡಿ ಇದ್ದಕ್ಕಿದ್ದಂತೆ ರದ್ದುಪಡಿಸಿದ್ದಾರೆ. ಅವರ ಕಥೆ ಏನಾಗಬೇಕು? ಸಾಲ ಕೊಡುತ್ತೀರ ಎಂದರೆ ಆಸೆ. ಹೊಡೆಯುತ್ತೇನೆ ಎಂದರೆ ಭಯ. ಫಲಾನುಭವಿಗಳಿಗೆ ಈಗಾಗಲೇ ನಮಗೆ loan sanction ಆಗಿದೆ. ಇನ್ನೇನು ಹಣ ಬರುತ್ತದೆ ಎಂಬ ಆಸೆಯನ್ನು ಇಟ್ಟುಕೊಂಡಿರುತ್ತಾರೆ. ಅವರ ಬಗ್ಗೆ ಯಾವ ರೀತಿ ಕ್ರಮ ವಹಿಸುತ್ತೀರಾ?

**ಡಾ|| ಹೆಚ್.ಸಿ. ಮಹದೇವಪ್ಪ:-** ಮಾನ್ಯ ಸಭಾಪತಿಯವರೇ, ಆ ಪಟ್ಟಿಯಲ್ಲಿ ಯಾರು ಅರ್ಹ ಫಲಾನುಭವಿಗಳಿದ್ದಾರೋ, ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಒಂದೇ ಹೆಸರು ನಾಲ್ಕೈದು ಬಾರಿ ಬಂದರೆ, ಆ ಹೆಸರನ್ನು ತೆಗೆದುಹಾಕಿ, ಪಟ್ಟಿಯಲ್ಲಿ ಅರ್ಹ ಫಲಾನುಭವಿಗಳ ಪಟ್ಟಿ ಏನಿದೆ ನಮ್ಮ ಟಾರ್ಗೆಟ್‌ನಲ್ಲಿ we will examine and transparently give them benefits.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್. ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 13.03.2026, ಸಮೂಹ–5 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 151 ಪ್ರಶ್ನೆಗಳ ಪೈಕಿ 64 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

(ಉತ್ತರಗಳನ್ನು ಲಗತ್ತಿಸಲಾಗಿದೆ)

## 2. ನಿಯಮ 58ಎ ಮೇರೆಗೆ ಶೂನ್ಯವೇಳೆ ಪ್ರಸ್ತಾವಗಳು

**ಅ) ಬೊಮ್ಮಸಂದ್ರ ಒಂದು ಪ್ರಮುಖ ಕೈಗಾರಿಕಾ ಪ್ರದೇಶವಾಗಿದ್ದು, ಅದರ ಅನುಗುಣವಾಗಿ ಪುರಸಭೆಗೆ ಸಮರ್ಪಕ ಆದಾಯ ದೊರೆಯುತ್ತಿಲ್ಲವಾದ್ದರಿಂದ ಅನುದಾನವನ್ನು ಬಿಡುಗಡೆ ಮಾಡಿ, ಹಣಕಾಸಿನ ಸ್ಥಿತಿಯನ್ನು ಬಲಪಡಿಸುವ ಕುರಿತು.**

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಅನೇಕಲ್, ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಗೆ 23 ವಾರ್ಡ್‌ಗಳು ಸುಮಾರು 50 ಸಾವಿರ ಜನಸಂಖ್ಯೆ ಹೊಂದಿದೆ. ಇದರಲ್ಲಿ ಕೈಗಾರಿಕಾ ಪ್ರದೇಶಗಳೇ ಹೆಚ್ಚು. ಪುರಸಭೆಗೆ ಬರುವ ಕೈಗಾರಿಕಾ ಪ್ರದೇಶಗಳ ಕಾರ್ಖಾನೆಗಳ ತೆರಿಗೆ ವಸೂಲಾತಿಯನ್ನು ಕೆ.ಐ.ಎ.ಡಿ.ಬಿ., ಪಡೆದುಕೊಳ್ಳುವುದರಿಂದ ಬೊಮ್ಮಸಂದ್ರ ಪುರಸಭೆಗೆ ಆರ್ಥಿಕ ಸಂಕಷ್ಟ ಎದುರಾಗಿದೆ ಎಂದು ಮುಖ್ಯಾಧಿಕಾರಿ ಕಳವಳ ವ್ಯಕ್ತಪಡಿಸಿದ್ದಾರೆ. ಈ ಮೊದಲು ಬೊಮ್ಮಸಂದ್ರ ಪುರಸಭೆಗೆ 13 ಕೋಟಿ ರೂ. ತೆರಿಗೆ ಸಂಗ್ರಹವಾಗುತ್ತಿತ್ತು. ಆದರೆ ಕಳೆದ ವರ್ಷದಿಂದ ಕೆ.ಐ.ಎ.ಡಿ.ಬಿ., ತಮ್ಮ ಪ್ರದೇಶದ ಕೈಗಾರಿಕಾ ಪ್ರದೇಶದ ತೆರಿಗೆ ಸಂಗ್ರಹಿಸುತ್ತಿದೆ. ಇದರಿಂದ ನಮ್ಮ ತೆರಿಗೆ ಸಂಗ್ರಹ ತುಂಬಾ ಕಡಿಮೆಯಾಗಿದೆ. ಕೆ.ಐ.ಎ.ಡಿ.ಬಿ., ಸ್ಥಳೀಯ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯಗಳಿಗೆ ಶೇಕಡಾ 30 ರಷ್ಟು ಅನುದಾನವನ್ನು ನೀಡಬೇಕೆಂಬ ಸರ್ಕಾರದ ಆದೇಶವಿದೆ. ಈ ಬಗ್ಗೆ ಪತ್ರವನ್ನು ಬರೆಯಲಾಗಿದೆ. ಆದಾಗ್ಯೂ ಇಲ್ಲಿಯವರೆಗೂ ಕೆ.ಐ.ಎ.ಡಿ.ಬಿ. ಯಿಂದ ಹಣ ಸಂದಾಯವಾಗಿಲ್ಲ. ಇನ್ನೂ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗಿದ್ದು, ಕೊಳವೆ ಬಾವಿ ಕೂರಿಸಲು ಹಣ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ.

ಬೊಮ್ಮಸಂದ್ರ ಪುರಸಭೆ ಇಂದು ಗಂಭೀರವಾದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಬಹಳ ಚಿಂತಾಜನಕ ಸಂಗತಿಯಾಗಿದೆ. ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಈ ಪ್ರದೇಶಗಳಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದರೂ, ಪುರಸಭೆಗೆ ಬೇಕಾದಷ್ಟು ಆದಾಯ ಮತ್ತು ಅನುದಾನ ಲಭ್ಯವಾಗುತ್ತಿಲ್ಲ. ಈ ಕಾರಣದಿಂದ ಪುರಸಭೆಯಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಕುಡಿಯುವ ನೀರು, ರಸ್ತೆ, ಒಳಚರಂಡಿ ಸೇರಿದಂತೆ ಹಲವಾರು ಮೂಲಭೂತ ಸೌಲಭ್ಯಗಳ ನಿರ್ವಹಣೆಗೆ ಹಣದ ಕೊರತೆ. ಪುರಸಭೆಯ ಸಿಬ್ಬಂದಿಗಳಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡಲು ಕಷ್ಟವಾಗುತ್ತಿರುವುದು ಮತ್ತು ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರುವುದು ಪರಿಸ್ಥಿತಿ ನಿರ್ಮಾಣವಾಗಿದೆ.

ಇದೇ ಸಮಯದಲ್ಲಿ ಬೊಮ್ಮಸಂದ್ರ ಒಂದು ಪ್ರಮುಖ ಕೈಗಾರಿಕಾ ಪ್ರದೇಶವಾಗಿದ್ದರೂ, ಅದರ ಅನುಗುಣವಾಗಿ ಪುರಸಭೆಗೆ ಸಮರ್ಪಕ ಆದಾಯ ದೊರೆಯುತ್ತಿಲ್ಲ ಎಂಬುದು ಕೂಡ ಗಮನಾರ್ಹ ವಿಷಯವಾಗಿದೆ. ಆದ್ದರಿಂದ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಗಣಿಸಿ, ಬೊಮ್ಮಸಂದ್ರ ಪುರಸಭೆಗೆ ತುರ್ತು ವಿಶೇಷ ಅನುದಾನವನ್ನು ಬಿಡುಗಡೆ ಮಾಡಿ, ಪುರಸಭೆಯ ಹಣಕಾಸು ಸ್ಥಿತಿಯನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

ಆ) ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಜಮಖಂಡಿ-ಅಥಣಿ ಮಾರ್ಗ ಮಧ್ಯದಲ್ಲಿ ಬರುವ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು 2018ರಲ್ಲಿಯೇ ಪ್ರಾರಂಭ ಮಾಡಿದ್ದು, ಸದರಿ ಕಾಮಗಾರಿಯನ್ನು ಈವರೆಗೂ ಪೂರ್ಣಗೊಳಿಸಿರುವುದಿಲ್ಲ ಎಂಬ ವಿಷಯದ ಕುರಿತು.

**ಶ್ರೀ ಹಣಮಂತ ರುದ್ರಪ್ಪ ನಿರಾಣಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ, ಜಮಖಂಡಿ-ಅಥಣಿ ಮಾರ್ಗ ಮಧ್ಯದಲ್ಲಿ ಬರುವ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು ಸನ್ 2018ರಲ್ಲಿ ಪ್ರಾರಂಭಿಸಿದರೂ ಸಹ ಇಲ್ಲಿಯವರೆಗೆ ಪೂರ್ಣ ಮಾಡದೇ ಇರುವುದು ಅತ್ಯಂತ ನಿರ್ಲಕ್ಷತನದ ಪರಮಾವಧಿ ಕಾರ್ಯ ಮಾಡುತ್ತಿರುವ ಸರ್ಕಾರದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಸದರಿ ವಿಷಯದ ಕುರಿತು ನಾನು ದಿನಾಂಕ 22.02.2024ರಂದು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಈ ಕುರಿತು ಪ್ರಶ್ನೆಯನ್ನು ಕೇಳಲಾಗಿತ್ತು. ಆ ಸಂದರ್ಭದಲ್ಲಿ ಮಾನ್ಯರು ಜೂನ್ 2025ರ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ಹೇಳಿದ್ದರೂ ಸಹ ಇಲ್ಲಿಯವರೆಗೆ ಯಾವುದೇ ತರಹದ ಕಾಮಗಾರಿಯ ಪೂರ್ಣಗೊಳ್ಳದೇ ಸಂಪೂರ್ಣವಾಗಿ ನೆನೆಗುದ್ದಿಗೆ ಬಿದ್ದಿರುವುದು ನಮ್ಮ ಭಾಗದ ರೈತರು ಮತ್ತು ಜನಸಾಮಾನ್ಯರಿಗೆ ನೋವುನ್ನುಂಟು ಮಾಡಿದೆ.

ಸದರಿ ಕಾಮಗಾರಿಯನ್ನು ತೆಗೆದುಕೊಂಡು 7-8 ವರ್ಷಗಳ ಗತಿಸಿದರೂ ಪೂರ್ಣಗೊಳಿಸದೇ ಗುತ್ತಿಗೆದಾರರು ನಿರ್ಲಕ್ಷ್ಯ ವಹಿಸುತ್ತಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕು ಹಾಗೂ ರಾಜ್ಯ ಸರ್ಕಾರವು ನಮ್ಮ ಭಾಗದ ರೈತರ ಹಿತದೃಷ್ಟಿಯಿಂದ ಆದಷ್ಟು ಶೀಘ್ರವಾಗಿ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಇದರಿಂದ ಜಮಖಂಡಿ-ಅಥಣಿ ಭಾಗದ ಎಲ್ಲ ರೈತರಿಗೆ/ಜನಸಾಮಾನ್ಯರಿಗೆ ಬಹಳಷ್ಟು ಅನುಕೂಲತೆಯನ್ನು ಒದಗಿಸಿಕೊಟ್ಟಂತಾಗುತ್ತದೆ. ಉತ್ತರ ಕರ್ನಾಟಕದಲ್ಲಿ ನೆನೆಗುದಿಗೆ ಬಿದ್ದಿರುವ ಇಂತಹ ಅನೇಕ ಯೋಜನೆಗಳನ್ನು ನೋಡಿ ಜನರು ಅಪಹಾಸ್ಯ ಮಾಡುವಂತಾಗಿದೆ. ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿ ನನ್ನ ಪ್ರಶ್ನೆಗೆ ಉತ್ತರ ನೀಡಿ ಒಂದು ವರ್ಷದಲ್ಲಿ ಪೂರ್ಣ ಮಾಡುವ ಆಶ್ವಾಸನೆ ನೀಡಿದ್ದರೂ ಸಹ ಯಾವುದೇ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. ಇದು ಅತ್ಯಂತ ನೋವಿನ ಸಂಗತಿಯಾಗಿದೆ. ಆದ್ದರಿಂದ ಶೀಘ್ರವಾಗಿ ಹಿಪ್ಪರಗಿ ಬ್ರಿಡ್ಜ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಶೂನ್ಯ ವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉಪ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಇ) ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕಿನ "ರೈತ ಸಂಪರ್ಕ ಕೇಂದ್ರದ ನೇಮಕಾತಿಯಲ್ಲಿ ದೊಡ್ಡ ಮಟ್ಟದ ಲಾಬಿಯಾಗುರತ್ತಿರುವ ಕುರಿತು ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವ ಕುರಿತು.**

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಜ್ಯದ ಪ್ರತಿಷ್ಠಿತ ದಿನಪತ್ರಿಕೆಯಾದ "ವಿಜಯವಾಣಿ" ಪತ್ರಿಕೆಯಲ್ಲಿ "ರೈತ ಸಂಪರ್ಕ ಕೇಂದ್ರದಲ್ಲೂ ಲೂಟಿ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕಿನ ರೈತ ಸಂಪರ್ಕ ಕೇಂದ್ರಗಳಲ್ಲಿ ಅಕೌಂಟೆಂಟ್ ಹುದ್ದೆ ಭರ್ತಿಗೆ ಇಲಾಖೆ ಅಧಿಕಾರಿಗಳೇ ಖಾಸಗಿ ಏಜೆನ್ಸಿಯವರೊಂದಿಗೆ ಕೈ ಜೋಡಿಸುತ್ತಿರುವುದರಿಂದ ಹುದ್ದೆಗೆ ಎಲ್ಲಿಲ್ಲದ ಪೈಪೋಟಿ ನಡೆಯುತ್ತಿದೆ. ನೇಮಕಾತಿಯಲ್ಲಿ ದೊಡ್ಡ ಮಟ್ಟದ ಲಾಬಿ ನಡೆಯುತ್ತಿದೆ. ಕ್ಷೇತ್ರದ ಜನಪ್ರತಿನಿಧಿಗಳ ಶಿಫಾರಸ್ಸು ಪತ್ರಕ್ಕೂ ಮಾನ್ಯತೆ ನೀಡದ ಅಧಿಕಾರಿಗಳು ತಮ್ಮವರನ್ನೇ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. ಅಕೌಂಟೆಂಟ್ ಹುದ್ದೆಗೆ ನೇಮಕವಾಗಿ ಬಂದವರು ಒಂದು ಎರಡು ವರ್ಷದಲ್ಲೇ ಲಕ್ಷಾಂತರ ರೂಪಾಯಿ ಹಣ ದುರ್ಬಳಕೆ ಮಾಡಿಕೊಂಡು ರೈತ ಸಂಪರ್ಕ ಕೇಂದ್ರ ಬಿಡುತ್ತಿದ್ದಾರೆ. ಕೆಲವಡೆ ಗುತ್ತಿಗೆ ಆಧಾರದ ಅಕೌಂಟೆಂಟ್‌ಗಳೇ ಕೃಷಿ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಹೊಳೆಹೊನ್ನೂರು ಭಾಗದಲ್ಲಿ ಹಾಲಿ ಅಕೌಂಟೆಂಟ್ ರಾಜಿನಾಮೆಗೂ ಮುನ್ನ ಹೊಸಬರನ್ನು ನೇಮಕಾತಿ ಮಾಡಿ ಇಕ್ಕಟ್ಟಿಗೆ ಸಿಲುಕಿದ ಪ್ರಕರಣ ಸ್ಥಳೀಯ ಮುಖಂಡರ ರಾಜಿ ಪಂಚಾಯಿತಿಯಲ್ಲಿ ಸುಖಾಂತ್ಯವಾಗಿತ್ತು.

ಅಕೌಂಟೆಂಟ್‌ಗಳು ಕೃಷಿ ಇಲಾಖೆಯಲ್ಲಿ ರೈತ ಫಲಾನುಭವಿಗಳಿಗೆ ಪೂರೈಕೆ ಮಾಡಿದ ವಸ್ತುಗಳ ಹಣವನ್ನು ಪೂರೈಕೆದಾರರ ಕಂಪನಿಗಳಿಗೆ ಪಾವತಿ ಮಾಡುವುದಿಲ್ಲ. ಇಲಾಖೆ ಅಧಿಕಾರಿಗಳು ಒತ್ತಡ ಹಾಕಿದರೆ ಅಲ್ಪ ಮೊತ್ತ ಸಂದಾಯ ಮಾಡುವುದು. ಒತ್ತಡ ಹೆಚ್ಚಾದರೆ ಮೇಲಾಧಿಕಾರಿಗಳ ಸಹಾಯ ಪಡೆದು ತಮ್ಮ ಜಾಗಕ್ಕೆ ಬೇರೊಬ್ಬರನ್ನು ಕೂರಿಸಿ ಕೆಲಸ ಬಿಡುತ್ತಾರೆ. ಮತ್ತೊಂದಡೆ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ನೀಡಬೇಕಾದ ವಸ್ತುಗಳನ್ನು ನಕಲಿ ದಾಖಲೆ ಸೃಷ್ಟಿಸಿ ಸಾಮಾನ್ಯ ವರ್ಗದವರಿಗೆ ದುಪ್ಪಟ್ಟು ಬೆಲೆಗೆ ಮಾರಾಟ ಮಾಡಿ ಲಕ್ಷಾಂತರ ರೂಪಾಯಿ ಹಣ ಮಾಡಿಕೊಳ್ಳುತ್ತಾರೆ. ಹೊಸ ಅಕೌಂಟೆಂಟ್ ಗಳು ಬೇಕೆಂದರೆ ಮತ್ತೆ ಅದೇ ಏಜೆನ್ಸಿಗೆ ಅರ್ಜಿ ನೀಡಬೇಕು. ಹಣ ಬಲದ ಮೇಲೆ ಬರುವವರು ಮತ್ತದೇ ದುರ್ಬಳಕೆ ಮುಂದುವರೆಸುತ್ತಾರೆ. ಈ ಬಗ್ಗೆ ಕೃಷಿ ಇಲಾಖೆಯ ಅಧಿಕಾರಿಗಳು ಜಾಣ ಕುರುಡರಾಗಿದ್ದಾರೆ. ಈ ಬಗ್ಗೆ ಕೂಡಲೇ ಮಾನ್ಯ ಕೃಷಿ ಸಚಿವರು ಸೂಕ್ತ ಕ್ರಮ ವಹಿಸಬೇಕೆಂದು ಶೂನ್ಯ ವೇಳೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಮುಂದು)

**(376) 13.03.2026 12.00 ಟಿಸಿಹೆಚ್-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ಚೆಲುವರಾಯಸ್ವಾಮಿ:-** ಮಾನ್ಯ ಸಭಾಪತಿಯವರೇ, ಉತ್ತರ ಒದಗಿಸುತ್ತೇವೆ. ಆದರೆ ಈಗ ತಾವು ಅನುಮತಿ ಕೊಟ್ಟರೆ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಸಭಾಪತಿಯವರು:-** ಹೇಳಿ.

**ಶ್ರೀ ಎನ್.ಚೆಲುವರಾಯಸ್ವಾಮಿ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವುದಕ್ಕೆ ನಾನು ಈಗಾಗಲೇ ಸಂಬಂಧಪಟ್ಟಂತಹ ಅಧಿಕಾರಿಗಳಿಂದ one hour ಹಿಂದೆ ಮಾಹಿತಿಯನ್ನು ಪಡೆದಿದ್ದೇನೆ. ಬಹುಶಃ ಅಲ್ಲಿ ನಾವು appointment ಮಾಡುವುದಕ್ಕೆ ಅವಕಾಶವಿಲ್ಲ. Accountant ಅನ್ನು outsource ನಿಂದ ತೆಗೆದುಕೊಳ್ಳಲಾಗಿದೆ, outsource ನಿಂದ ತೆಗೆದುಕೊಂಡಿರತಕ್ಕಂಥವರು ಏನಾದರೂ ತಪ್ಪಾಗಿದೆಯೆಂದು ಮಾಹಿತಿ ಮಾನ್ಯ ಸದಸ್ಯರಿಂದ ನಿರ್ದಿಷ್ಟವಾಗಿ ಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು, recovery ಮಾಡುವುದು ಮತ್ತು ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಈಗ ಅವರು long time outsource ನಲ್ಲಿ ಇರುವವರಿಂದ ಈ ರೀತಿಯದ್ದೆಲ್ಲಾ ಆಗುತ್ತದೆ ಎಂದು ಹೇಳಿದ್ದಾರೆ. ಇನ್ನು ಮುಂದೆ ನಾನು ಅಧಿಕಾರಿಗಳಿಗೆ 2 ವರ್ಷಗಳ ಮೇಲೆ outsource ನಲ್ಲಿ ಇರುವವರನ್ನು ಮುಂದುವರೆಸುವುದನ್ನು ರದ್ದುಡಿಸಿ ಎರಡು ವರ್ಷಕ್ಕೆ ಮಾತ್ರ limit ಮಾಡುವುದಕ್ಕೆ ಹೊಸ ಆದೇಶವನ್ನು ಕೊಡುವುದಕ್ಕೆ ನಾನು ಕ್ರಮವಹಿಸುತ್ತೇನೆ. ಆದರೆ ಅಲ್ಲಿ ಅಕೌಂಟೆಂಟ್ ಹುದ್ದೆ ಯಾವುದೂ ಸೃಷ್ಟಿಯಾಗಿಲ್ಲ. ಅಲ್ಲಿ ಒಬ್ಬರು ವ್ಯವಹಾರ ಮಾಡುವುದಕ್ಕೆ ಬೇಕಾಗಿರುವುದರಿಂದ ನಾವು outsource ನಲ್ಲಿ ಎಲ್ಲಾ ಕೃಷಿ ಸಂಪರ್ಕ ಕೇಂದ್ರಗಳಲ್ಲಿ outsource ನಿಂದಲೇ ಮಾಡಿದ್ದೇವೆ. ತಮಗೆ ಗೊತ್ತಿರುವಂತೆ ಈಗಾಗಲೇ ಶೇ.97ರಷ್ಟು A.O and A.A.O ಹುದ್ದೆಗಳು ಖಾಲಿ ಇವೆ. 2,099 A.A.O. ಹುದ್ದೆಗಳಲ್ಲಿ, ಕೇವಲ ಸುಮಾರು 67 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ಇನ್ನೂ 2,032 A.A.O ಹುದ್ದೆಗಳು ಖಾಲಿ ಇವೆ. ಈಗ 1,000 ಜನ ನೇಮಕಾತಿ ಮಾಡಲು ಈಗಾಗಲೇ ಆದೇಶವನ್ನು ಕೊಟ್ಟು, ನಮ್ಮ internal reservation ಗೋಸ್ಕರ ಸ್ವಲ್ಪ ತಡವಾಗಿದೆ. ಎರಡು-ಮೂರು ತಿಂಗಳನಲ್ಲಿ ನೇಮಕಾತಿ ಆಗುವುದರಿಂದ ನಮಗೆ ಈ ಸಮಸ್ಯೆ ಬಗೆಹರಿಯುತ್ತದೆ. ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ Madam ನವರು ಹೇಳಿರತಕ್ಕಂಥದ್ದು ಏನಾದರೂ ನನಗೆ ನಿರ್ದಿಷ್ಟವಾದಂತಹ ಪ್ರಕರಣ ಕೊಟ್ಟರೆ, ಕ್ರಮ ತೆಗೆದುಕೊಳ್ಳುತ್ತೇವೆ. So, ಮತ್ತೆ ಇನ್ನುಮುಂದೆ ಅವರನ್ನು ನಿಯಂತ್ರಣ ಮಾಡುವುದಕ್ಕೆ ಈ ರೀತಿಯ ಯಾವುದೂ ಅವ್ಯವಹಾರ ಮಾಡುವುದಕ್ಕೆ ಆಗದೇ ಇರುವ ರೀತಿಯಲ್ಲಿ ನಾನು ಕೂಡಲೇ ಕ್ರಮ ವಹಿಸುತ್ತೇನೆ.

**ಈ) "ನೇತ್ರಾವತಿ ಒಡಲು ಕಲುಷಿತ, ಬಂಟ್ವಾಳ, ಮಂಗಳೂರಿಗೆ ನೀರುಣಿಸುವ ನದಿ, ಜನರ ಆರೋಗ್ಯಕ್ಕೆ ಹಾನಿಕರ ಮತ್ತು ಮೌನಕ್ಕೆ ಜಾರಿದ ಆಡಳಿತ" ಎಂದು ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವ ಬಗ್ಗೆ.**

-----

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ನೇತ್ರಾವತಿ ಒಡಲು ಕಲುಷಿತ! ಬಂಟ್ವಾಳ, ಮಂಗಳೂರಿಗೆ ನೀರುಣಿಸುವ ನದಿ, ಜನರ ಆರೋಗ್ಯಕ್ಕೆ ಹಾನಿಕರ, ಮೌನಕ್ಕೆ ಜಾರಿದ ಆಡಳಿತ" ಎಂಬ ಶೀರ್ಷಿಕೆಯಡಿ ದಿನಾಂಕ 11.03.2026ರ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ. ಮಂಗಳೂರು ಹಾಗೂ ಬಂಟ್ವಾಳದ ಜನತೆಗೆ ಕುಡಿಯುವ ನೀರು ಪೂರೈಸುತ್ತಿರುವ ನೇತ್ರಾವತಿ ನದಿಗೆ ಬಂಟ್ವಾಳ ಸುತ್ತಮುತ್ತ ಕೊಳಚೆ ನೀರು ಸೇರುತ್ತಿರುವುದು 2018ರ ವಿಧಾನಸಭಾ ಚುನಾವಣೆ ಸಂದರ್ಭದ ಪ್ರಚಾರದ ವಸ್ತುವಾಗಿತ್ತು. ಈ ಕುರಿತು ಸಾಕಷ್ಟು ಟೀಕೆ, ಪ್ರತಿಟೀಕೆಗಳು ಚರ್ಚೆಗಳು ನಡೆದವು. ಈಗ ನಾವು 2026ರಲ್ಲಿ ಇದ್ದೇವೆ. ಆದರೆ ಸಮಸ್ಯೆ ಇನ್ನೂ ಬಗೆಹರಿದಿಲ್ಲ.

2017ರ ಫೆಬ್ರವರಿಯಲ್ಲಿ 'ವಿಜಯ ಕರ್ನಾಟಕ' ಸಚಿತ್ರ ವರದಿ ಪ್ರಕಟಿಸುವ ಮೂಲಕ ನದಿ ನೀರು ಮಲೀನಗೊಳ್ಳುತ್ತಿರುವ ಕುರಿತು ಗಮನ ಸೆಳೆದಿತ್ತು. ಒಮ್ಮೆ ಎಚ್ಚೆತ್ತಂತೆ ಮಾಡಿದ ಆಡಳಿತ ಮತ್ತೆ ಮೌನ ವಹಿಸಿತು. 2025ರ ಮಾರ್ಚ್‌ನಲ್ಲಿ ಮತ್ತೆ ಈ ಕುರಿತು ವಿಸ್ತಾರವಾದ ವರದಿ ಪ್ರಕಟಿಸಿತ್ತು. ಈ ವರದಿ ಗಮನಿಸಿದ ಮಂಗಳೂರಿನ ಜಾಗೃತ ಹಿರಿಯ ನಾಗರಿಕರು, ಸ್ಥಳ ಸಮೀಕ್ಷೆ ಮಾಡಿ ಮಂಗಳೂರಿನಲ್ಲಿ ಸಂಬಂಧಪಟ್ಟ ಉನ್ನತಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಈ ವಿಷಯದಲ್ಲಿ ಜಿಲ್ಲಾಡಳಿತ ಮೌನಕ್ಕೆ ಶರಣಾಗುವುದು ಜನರ ಆರೋಗ್ಯ ದೃಷ್ಟಿಯಿಂದ ಹಿತಕರವಲ್ಲ ಎಂದು ಸಲಹೆ ನೀಡಿದ್ದ ಮನವಿ ಅಲ್ಲೇ ಬಾಕಿ ಉಳಿದು ಪರಿಸ್ಥಿತಿ ಇಂದಿಗೂ ಹಾಗೇಯೇ ಇದೆ. ಬಂಟ್ವಾಳ ಪುರಸಭೆ ವ್ಯಾಪ್ತಿಯಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದೇ ಇರುವುದು, ಈ ಸಮಸ್ಯೆಗೆ ಮುಖ್ಯ ಕಾರಣವಾಗಿದೆ. ದಿನನಿತ್ಯ ಸುಮಾರು 10 ಸಾವಿರಕ್ಕೂ ಅಧಿಕ ಮನೆಗಳ ಕೊಳಚೆ ನೀರು ನದಿಯ ಒಡಲು ಸೇರುತ್ತಿದೆ.

ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್.ಟಿ.ಪಿ)ಗಳ ನಿರ್ಮಾಣಕ್ಕೆ ಬೇಕಾದಂತಹ ಜಾಗದ ವಿವಾದ ಅಂತಿಮಗೊಳ್ಳದೇ ಇರುವುದರಿಂದ, ಒಳಚರಂಡಿ ವ್ಯವಸ್ಥೆ ಅನುಷ್ಠಾನ ಸಾಧ್ಯವಾಗಿಲ್ಲ. ಹಲವು ವರ್ಷಗಳ ಹಿಂದೆ ಪೈಪ್ ಲೈನ್ ಅಳವಡಿಸಿ, ಅಲ್ಲಲ್ಲಿ ಮ್ಯಾನ್‌ಹೋಲ್‌ಗಳನ್ನು ಮಾಡಿದ್ದರು ವ್ಯರ್ಥವಾಗಿದೆ.

ಬಡ್ಡಕಟ್ಟೆ, ಕೆಳಗಿನ ಪೇಟೆ, ಕಂಚಿಗಾರ ಪೇಟೆ, ಗೂಡಿನಬಳಿ, ಕೈಕುಂಜೆ, ಪಾಣೆಮಂಗಳೂರು, ಪರ್ಲಿಯಾ ಮತ್ತು ತಲಪಾಡಿವರೆಗೆ ಹಲವು ಕಡೆಗಳಲ್ಲಿ ಮೋರಿ, ರಾಜಕಾಲುವೆಗಳ ಮೂಲಕ ಹರಿದು ಹೋಗುವ ಕೊಳಚೆ ನೀರು ನೇರವಾಗಿ ನದಿ ಸೇರುತ್ತಿದೆ. ಮನೆಗಳು, ವಸತಿ ಸಮುಚ್ಚಯಗಳ ಶೌಚಾಲಯಗಳ ನೀರು, ಹೋಟೆಲ್ ತ್ಯಾಜ್ಯಗಳು, ಕೋಳಿ ಸಹಿತ ಮಾಂಸದ ಅಂಗಡಿಗಳ ನೀರು ಸೇರಿದಂತೆ ಎಲ್ಲಾ ರೀತಿಯ ಕೊಳಚೆ ನೀರು ಕೂಡ ನೇರವಾಗಿ ನದಿ ಸೇರುತ್ತಿದೆ. ವಸತಿ ಸಮುಚ್ಚಯಗಳು ತಮ್ಮಲ್ಲೇ ಎಸ್.ಟಿ.ಪಿಗಳನ್ನು ಮಾಡಿ ಕೊಳಚೆಯನ್ನು ಶುದ್ಧೀಕರಿಸಿಯೇ ಹೊರಗೆ ಬಿಡಬೇಕು ಎಂಬ ನಿಯಮವಿದ್ದರೂ, ಬಂಟ್ವಾಳ ನಗರ ವ್ಯಾಪ್ತಿಯ ಬಹುತೇಕ ವಸತಿ ಸಮುಚ್ಚಯಗಳು ಎಷ್ಟು ಪಾಲಿಸುತ್ತಿದ್ದಾರೆ ಎಂಬ

ಕುರಿತು ಪುರಸಭೆ ಸರ್ವೆ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ. ಬಂಟ್ವಾಳ ಪುರಸಭೆ ವ್ಯಾಪ್ತಿಗೆ ಕುಡಿಯುವ ನೀರು ಪೂರೈಸಲು ನೀರೆತ್ತುವ ಜಾಗದಲ್ಲೇ ಕೊಳಚೆ ನೀರು ನದಿಗೆ ಸೇರುತ್ತಿದ್ದರೆ, ವಲಸೆ ಕಾರ್ಮಿಕರ ತಂಡ ಅಲ್ಲಿಯೇ ಸ್ನಾನ, ಶೌಚಾದಿಗಳನ್ನು ಮಾಡುತ್ತಿವೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕೊಳಚೆ ನೀರು ಸಂಸ್ಕರಣಾ ಘಟಕದ ಜಾಗದ ವಿವಾದವನ್ನು ಬಗೆಹರಿಸಿ, ಯೋಜನೆಯನ್ನು ಶೀಘ್ರ ಅನುಷ್ಠಾನಗೊಳಿಸುವ ಜೊತೆಗೆ, ಕೊಳಚೆ ನೀರನ್ನು ನದಿಗೆ ಬಿಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಾಗಿದೆ. ಈ ಮೂಲಕ ಮಾನ್ಯ ಪೌರಾಡಳಿತ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಹೋಬಳಿಯಲ್ಲಿ ಕಸ್ತೂರಿಬಾ ಗಾಂಧಿ ವಿದ್ಯಾರ್ಥಿನಿಯರ ಸರ್ಕಾರಿ ವಸತಿ ನಿಲಯ ಪಾಳು ಬಿದ್ದಿರುವ ಕುರಿತು.**

----

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಮೂಢ ನಂಬಿಕೆಯಿಂದಾಗಿ ಸರ್ಕಾರಿ ಕಟ್ಟಡ ಪಾಳು ಬಿದ್ದಿದೆ. ಕೊರಟಗೆರೆಯ ಗ್ರಾಮವೊಂದರಲ್ಲಿ ಊರ ದೇವತೆ ದೇಗುಲ ಬಳಿ ಇರುವ ವಿದ್ಯಾರ್ಥಿನಿಯರ ಹಾಸ್ಟೆಲ್ ಮುಟ್ಟಾಗುವ ಯುವತಿ/ಮಹಿಳೆಯರು ಈ ದೇಗುಲ ಬಳಿ ಬರಬಾರದೆಂಬ ನಂಬಿಕೆಯಿಂದಾಗಿ ಸಮಸ್ಯೆ. ಸರ್ಕಾರಗಳು ಗ್ರಾಮೀಣ ಭಾಗದ ಬಾಲಕಿಯರ ಶಿಕ್ಷಣಕ್ಕೆ ಅನುಕೂಲವಾಗಲೆಂದು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ವಸತಿ ನಿಲಯವೊಂದು ಮೂಢ ನಂಬಿಕೆಯ ಕಾರಣಕ್ಕೆ ಕಳೆದ 8 ವರ್ಷದಿಂದ ಪಾಳು ಬಿದ್ದಿದೆ. ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಹೋಬಳಿಯ ಅಕ್ಕಿರಾಂಪುರ ಗ್ರಾಮದಲ್ಲಿ ಕಳೆದ 8 ವರ್ಷಗಳ ಹಿಂದೆ ಜಿಲ್ಲಾ ಪಂಚಾಯಿತಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ರೂ.69 ಲಕ್ಷ ವೆಚ್ಚದಲ್ಲಿ ಕಸ್ತೂರಿಬಾ ಗಾಂಧಿ ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಿಸಲಾಗಿತ್ತು. ಇದರಲ್ಲಿ ವಸತಿ ಕೊಠಡಿಗಳು, ಅಡುಗೆ ಕೋಣೆ, ಶೌಚಾಲಯ ಹಾಗೂ ಸೋಲಾರ್ ವ್ಯವಸ್ಥೆಯಂತಹ ಎಲ್ಲಾ ಮೂಲ ಸೌಕರ್ಯಗಳನ್ನು ಕಲಿಸಲಾಗಿತ್ತು. ಅಡ್ಡಿಯಾದ ಮೂಢ ನಂಬಿಕೆ, ವಿದ್ಯಾರ್ಥಿ ನಿಲಯದ ಸಮೀಪದಲ್ಲೇ ಗ್ರಾಮ ದೇವತೆ ಏಳುಮಂದೆಮ್ಮನ ದೇವಸ್ಥಾನವಿದೆ. ದೇವಿಯ ಪಾರಂಪರಿಕ ಕಟ್ಟುಪಾಡುಗಳ ಪ್ರಕಾರ, ಋತು ಸ್ರಾವವಾದ ಮಹಿಳೆಯರು ಅಥವಾ ಬಾಣಂತಿಯರು ಈ ಭಾಗದಲ್ಲಿ ಸಂಚರಿಸಬಾರದು ಎಂಬ ಬಲವಾದ ನಂಬಿಕೆ ಗ್ರಾಮಸ್ಥರಲ್ಲಿದೆ. ನಿಯಮ ಮೀರಿದರೆ ದೇವಿಯ ಮುನಿಸಿಗೆ ಗುರಿಯಾಗಿ ಅನಾಹುತಗಳು ಸಂಭವಿಸಬಹುದು ಎಂಬ ಭಯವಿದೆ. ಈ ಕಾರಣದಿಂದಾಗಿ ಹೆಣ್ಣುಮಕ್ಕಳನ್ನು ಈ ವಸತಿ ನಿಲಯಕ್ಕೆ ಕಳುಹಿಸಲು ಪೋಷಕರು ಹಿಂದೇಟು ಹಾಕುತ್ತಿದ್ದಾರೆ. ಹಿಂದಿನ ಬಿ.ಇ.ಓ ಹಾಗೂ ಪ್ರಸಿದ್ಧ ವಿಚಾರವಾದಿ ಶ್ರೀ ಹುಲಿಕಲ್ ನಟರಾಜು ರವರು ಗ್ರಾಮಕ್ಕೆ ಭೇಟಿ ನೀಡಿ, ಜನರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಿದ್ದರೂ ಕೂಡ ಜನರಲ್ಲಿ ಭಯ ದೂರವಾಗಿಲ್ಲ. ನಿಲಯ ಬಳಕೆಯಾಗದ ಕಾರಣ ಕಟ್ಟಡದ ಕಿಟಕಿ-ಬಾಗಿಲುಗಳು ಸಂಪೂರ್ಣ ಹಾಳಾಗಿದ್ದು, ಸೋಲಾರ್ ವ್ಯವಸ್ಥೆ ಕೂಡ ಹಾಳಾಗುತ್ತಿದೆ. ಗ್ರಾಮದ ಮಧ್ಯಭಾಗದಲ್ಲಿರುವ ವಿದ್ಯಾರ್ಥಿ ನಿಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿ, ಬಾಲಕಿಯರ ವಸತಿ ನಿಲಯವನ್ನು ಗ್ರಾಮದ ಒಳಗಿನ ಸುರಕ್ಷಿತ ಜಾಗಕ್ಕೆ ಬದಲಾಯಿಸಿದರೆ, ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದು ಸ್ಥಳೀಯರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಊ) ಮಂಗಳೂರು ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡಂತೆ ವಾಣಿಜ್ಯ ಬಳಕೆ ಎಲ್.ಪಿ.ಜಿ ಸಿಲಿಂಡರ್ ಪೂರೈಕೆ ಅಭಾವದಿಂದ ಉಂಟಾಗಿರುವ ಸಮಸ್ಯೆಗಳ ಕುರಿತು.**

----

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ಯಾಸ್ ಟ್ರಬಲ್‌ನಿಂದ ಕಟ್ಟಿಗೆ ವ್ಯಾಪಾರಕ್ಕೆ ಶುಕ್ರದೆಸೆ, ಮಂಗಳೂರು ನಗರದಲ್ಲಿ 10ಕ್ಕೂ ಅಧಿಕ ಮಂದಿ ಸೌದೆ ವ್ಯಾಪಾರಿಗಳು ಮುನ್ನಲೆಗೆ, ಪಿ.ಜಿಗಳಿಗೆ ಊಟ ಇಲ್ಲದ ಪರಿಸ್ಥಿತಿ; ರಜೆ ಘೋಷಿಸಲು ಬೇಡಿಕೆ ಎಂಬ ವರದಿಯು 'ಉದಯವಾಣಿ', 'ವಿಜಯ ಕರ್ನಾಟಕ', 'ಕನ್ನಡ ಪ್ರಭ' ಮತ್ತು 'ವಾರ್ತಾಭಾರತಿ' ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ವಾಣಿಜ್ಯ ಬಳಕೆಯ ಎಲ್.ಪಿ.ಜಿ ಸಿಲಿಂಡರ್‌ಗಳ ಪೂರೈಕೆ ಕಳೆದ ಭಾನುವಾರದಿಂದಲೇ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಈ ಕಾರಣಕ್ಕಾಗಿ ಊಟ, ತಿಂಡಿ-ತಿನಿಸು ನೀಡುವ ಹೋಟೆಲ್‌ಗಳನ್ನು ಮುಚ್ಚಿದ್ದಾರೆ. ದೇವಸ್ಥಾನಗಳಲ್ಲೂ ಪ್ರಸಾದದ ಭೋಜನ ಅನ್ನ ಸ್ಥಗಿತಗೊಂಡಿದೆ. ಮಂಗಳೂರು ನಗರದಲ್ಲಿ ಸೌದೆ ವ್ಯಾಪಾರಿಗಳು ಮನಸ್ಸಿಗೆ ಬಂದಂತೆ ಕಟ್ಟಿಗೆ ದರ ಏರಿಸಿ, ಕಟ್ಟಿಗೆ ಮಾರಾಟ ಮಾಡುತ್ತಿದ್ದಾರೆ. ಇದು ಮುಂದುವರಿದಲ್ಲಿ ಪರಿಸರ ಮಾಲಿನ್ಯ ಉಂಟಾಗಿ ಆರೋಗ್ಯದ ಮೇಲೆ ಪರಿಣಾಮ ಉಂಟಾಗಲಿದೆ. ಆಟೋ ರಿಕ್ಷಾಗಳಿಗೆ ಮಂಗಳೂರು ನಗರದಲ್ಲಿ ಸುಮಾರು ಏಳು ಸಾವಿರ ಆಟೋ ರಿಕ್ಷಾಗಳಲ್ಲಿ, ಐದು ಸಾವಿರಕ್ಕೂ ಹೆಚ್ಚು ಆಟೋ ರಿಕ್ಷಾಗಳು ಎಲ್.ಪಿ.ಜಿ ಗ್ಯಾಸ್ ಮೂಲಕ ಸಂಚರಿಸುತ್ತಿದ್ದು, ಎಲ್.ಪಿ.ಜಿ ಗ್ಯಾಸ್ ದೊರೆಯದೇ ಆಟೋ ರಿಕ್ಷಾ ಚಾಲಕರು ನಿರುದ್ಯೋಗಿಗಳಾಗಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅಡುಗೆ ಅನಿಲ (ಗ್ಯಾಸ್)ನ ಮೂಲ ಬೆಲೆ ರೂ.495ಗಳು. ಕೇಂದ್ರ ಸರ್ಕಾರದ ಟ್ಯಾಕ್ಸ್ ರೂ.24ಗಳು, ಸಾಗಾಣಿಕೆ ದರ ರೂ.10ಗಳು; ಒಟ್ಟು ಮೊತ್ತ ರೂ.529.75ಗಳಾಗುತ್ತದೆ. ರಾಜ್ಯ ಸರ್ಕಾರದ ಟ್ಯಾಕ್ಸ್ ರೂ.24ಗಳು, ಸಾಗಣಿಕೆ ದರ ರೂ.10ಗಳು, ಒಟ್ಟು ಮೊತ್ತ ರೂ.495 ಗಳಾಗುತ್ತದೆ. ಹಾಗೆಯೇ ಮೊತ್ತ ರೂ.525ಗಳು. ರಾಜ್ಯ ಸರ್ಕಾರದ ಟ್ಯಾಕ್ಸ್ ರೂ.291.36 ಗಳು, ರಾಜ್ಯ ಸಾಗಾಣಿಕೆ ಚಾರ್ಜ್ ರೂ.15/ಗಳು, ಡಿಸ್ಟ್ರಿಬ್ಯುಷನ್ ಕಮಿಷನ್ ರೂ.5.50ಗಳು, ಸಬ್ಸಿಡಿ ರೂ. 19.57ಗಳು ಮತ್ತು ಗ್ರಾಹಕರು ಕೊಡುವ ಹಣ ಒಟ್ಟು ರೂ.861.18ಗಳು. ಇದರಲ್ಲಿ ಕೇಂದ್ರ ಸರ್ಕಾರದ ಟ್ಯಾಕ್ಸ್ ಕೇವಲ 5%, ರಾಜ್ಯ ಸರ್ಕಾರದ ಟ್ಯಾಕ್ಸ್ 55%. ಈಗ ಅರ್ಥ ಮಾಡಿಕೊಳ್ಳಿ ಯಾರು ಗ್ಯಾಸ್ ಬೆಲೆ ಜಾಸ್ತಿ ಮಾಡಿದ್ದು? ರಾಜ್ಯ ಸರ್ಕಾರವೇ ಅಥವಾ ಕೇಂದ್ರ ಸರ್ಕಾರವೇ? ಎಂಬ ಸುಳ್ಳು ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಗೊಂಡಿರುವ ಬಗ್ಗೆ ಮಾನ್ಯ ಸಚಿವರು ತನಿಖೆ ನಡೆಸಬೇಕಾಗಿ ನಾನು ಒತ್ತಾಯಿಸುತ್ತೇನೆ.

ಊಟ, ತಿಂಡಿ ಇಲ್ಲದೇ ಪಿ.ಜಿ, ಹಾಸ್ಟೆಲ್‌ಗಳು ಮತ್ತು ಮನೆ ಬಾಡಿಗೆಯಲ್ಲಿ ವಾಸಿಸುತ್ತಿರುವ ಸುಮಾರು 30,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯನಿರತರಿಗೆ ಊಟ-ತಿಂಡಿ ಇಲ್ಲದೇ ಪರದಾಡುತ್ತಿರುವ ಪರಿಸ್ಥಿತಿ ಉದ್ಭವಿಸುತ್ತಿದ್ದು, ಬದಲಿ ವ್ಯವಸ್ಥೆಯಿಂದ ಶಾಲಾ-ಕಾಲೇಜುಗಳು, ವಿಶ್ವವಿದ್ಯಾನಿಲಯಗಳಿಗೆ ರಜೆ ಘೋಷಿಸಬೇಕೆಂದು ಒತ್ತಾಯಗಳು ಪ್ರತಿಕೆಗಳಲ್ಲಿ ಪ್ರಕಟಗೊಂಡಿದೆ. ಗ್ಯಾಸ್ ಟ್ರಬಲ್ ಉಂಟಾದ ಸಮಸ್ಯೆಯನ್ನು ಕೂಡಲೇ ಪರಿಗಣಿಸಿ, ತಿಂಡಿ-ತಿನಿಸು ಊಟ

ಸಿಗುವವರೆಗೂ ರಜೆ ಘೋಷಿಸಿ ಅವರಿಗೆ ಬದಲಿ ವ್ಯವಸ್ಥೆ ಮಾಡಿಕೊಡಬೇಕೆಂದು ಸದನದ ಶೂನ್ಯವೇಳೆಯಲ್ಲಿ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನ ಸೆಳೆಯಲು ಬಯಸುತ್ತೇನೆ. ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ಪ್ರಕಟಿಸುತ್ತೇನೆ. ಮಾನ್ಯ ಸಭಾಪತಿಯವರೇ, ಇಂತಹದೊಂದು ಸುಳ್ಳು ವರದಿ ಬಂದಿದೆ. ಶೇ.55ರಷ್ಟು ಟ್ಯಾಕ್ಸ್ ರಾಜ್ಯ ಸರ್ಕಾರವೇ ಕೊಡುತ್ತದಂತೆ. ಈ ರೀತಿ ಸುಳ್ಳು ಸುದ್ದಿ ಪ್ರಚಾರ ಮಾಡುವುದನ್ನು ಪತ್ತೆ ಹಚ್ಚಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**(ಮುಂದು)**

(377)13.3.2026/12.10/ಎಂ.ಎಂ-ವಿ.ಕೆ **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಐವನ್ ಡಿಸೋಜಾರವರೇ, ಶೂನ್ಯವೇಳೆಯಲ್ಲಿ ಮಾತನಾಡಬಾರದು. ಸ್ವಲ್ಪ ಸಾಮಾನ್ಯ ಜ್ಞಾನ ಇರಬೇಕು

**ಋ) ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಾಣಿಜ್ಯ ಬಳಕೆ ಎಲ್.ಪಿ.ಜಿ. ಸಿಲಿಂಡರ್ ಪೂರೈಕೆ ಅಭಾವದಿಂದ ಉಂಟಾಗಿರುವ ಸಮಸ್ಯೆಗಳ ಕುರಿತು.**

- - - - -

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ವಾಣಿಜ್ಯ ಸಿಲಿಂಡರ್ ಕೊರತೆ, ಬಹುತೇಕ ರಾಜ್ಯಗಳಲ್ಲಿ ಗೋಳು. ದೇಶಾದ್ಯಂತ ಹೆಚ್ಚಿದ ಗ್ಯಾಸ್ ಟ್ರಬಲ್. ಹೋಟೆಲ್ ಜೊತೆ ಪಿ.ಜಿ., ಆಸ್ಪತ್ರೆ, ದೇಗುಲ, ಇಂದಿರಾ ಕ್ಯಾಂಟೀನ್‌ಗೂ ತಟ್ಟಿದ ಬಿಸಿ. ಶೇ.30 ರಷ್ಟು ಹೋಟೆಲ್‌ಗಳು ಬಂದ್. ಕೆಲವೆಡೆ ಮೆನು ಚೇಂಜ್, ಪಿ.ಜಿ.ಗಳಲ್ಲಿ ಊಟ ಕಟ್. ಆಟೊಗಳಿಗೂ ಗ್ಯಾಸ್ ಇಲ್ಲದೆ ಇಷ್ಟ. ಇಂದು ಗ್ಯಾಸ್ ಸಿಗದಿದ್ದರೆ ಪರಿಸ್ಥಿತಿ ಗಂಭೀರ ಎಂದು 'ಕನ್ನಡ ಪ್ರಭ' ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ.

ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮ ದೇಶ ವ್ಯಾಪಿ ಉದ್ಭವಿಸಿರುವ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯ ಬುಧವಾರ ಮತ್ತು ಗುರುವಾರ ಮತ್ತಷ್ಟು ತೀವ್ರಗೊಂಡಿದೆ. ಸಿಲಿಂಡರ್ ಪೂರೈಕೆ ಕೊರತೆ ಪರಿಣಾಮ ದೇಶದಾದ್ಯಂತ ಹೋಟೆಲ್, ಕ್ಯಾಂಟಿನ್, ಪಿ.ಜಿ. ಕಲ್ಯಾಣ ಮಂಟಪಗಳಿಗೆ ಭಾರೀ ಹೊಡೆತ ಬಿದ್ದಿದೆ. ದೇಶವ್ಯಾಪಿ ಶೇಕಡಾ 20–30 ರಷ್ಟು ಹೋಟೆಲ್‌ಗಳು ಬಂದ್ ಆಗಿದ್ದರೆ, ಬಹುತೇಕ ಕಡೆ ಊಟದ ಮೆನುವಿನಲ್ಲಿ ಬದಲಾವಣೆ ಕಂಡು ಬಂದಿದೆ. ಇನ್ನೂ ರಾಜ್ಯದ ಬಹುತೇಕ ಜಿಲ್ಲೆಗಳಲ್ಲೂ ವಾಣಿಜ್ಯ ಸಿಲಿಂಡರ್‌ಗಳ ಸಮಸ್ಯೆ ವ್ಯಾಪಕವಾಗಿದ್ದು, ಪೂರೈಕೆಯಲ್ಲಿ ಶೇಕಡಾ 50 ರಷ್ಟು ಕಡಿತವಾಗಿದೆ. ಕೆಲ ಪಿ.ಜಿ.ಗಳು ಹಾಗೂ 30 ಕ್ಕೂ ಹೆಚ್ಚು ಇಂದಿರಾ ಕ್ಯಾಂಟೀನ್‌ಗಳಲ್ಲಿ ಮಧ್ಯಾಹ್ನದ ಊಟಕ್ಕೆ ಕೊಕ್ ನೀಡಲಾಗಿದೆ.

ಸಿಲಿಂಡರ್ ಕೊರತೆಯ ಬಿಸಿಯಿಂದ ಆಸ್ಪತ್ರೆಗಳಿಗೆ ದಾಖಲಾಗಿರುವ ರೋಗಿಗಳ ಮೇಲೂ ಬಿದ್ದಿದ್ದು, ರೋಗಗಳಿಗೆ ಪೂರೈಕೆಯಾಗುವ ಊಟದ ಮೆನುವಿಗೂ ಕತ್ತರಿ ಬಿದ್ದಿದೆ. ಇನ್ನು ಸಾಮೂಹಿಕ ಭೋಜನ ಸಿದ್ಧತೆಯ ಸಮಸ್ಯೆ ಎದುರಾಗಿರುವ ಹಿನ್ನೆಲೆಯಲ್ಲಿ ಕೆಲವೆಡೆ ವಿವಾಹಗಳೇ ಮುಂದೂಡಿಕೆಯಾಗಿದ್ದರೆ, ಕೆಲ ದೇವಸ್ಥಾನಗಳಲ್ಲಿ ನೀಡುತ್ತಿದ್ದ ಉಚಿತ ಪ್ರಸಾದಕ್ಕೂ ಸಂಚಕಾರ ಎದುರಾಗಿದೆ ಎಂದು ರಾಜ್ಯದ ಎಲ್ಲಾ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ರಾಜ್ಯದ ಹಲವಾರು ನಾಗರಿಕರು ಹೋಟೆಲ್ ಮತ್ತು ಇಂದಿರಾ ಕ್ಯಾಂಟೀನ್‌ನಲ್ಲಿ ನೀಡುವ ಊಟದ ಮೇಲೆ ಅವಲಂಬಿತರಾಗಿರುವುದರಿಂದ ಈ ಕುರಿತು ರಾಜ್ಯ ಸರ್ಕಾರವು ಸೂಕ್ತ ಕ್ರಮ ಕೈಗೊಂಡು ರಾಜ್ಯದಲ್ಲಿ ವಾಣಿಜ್ಯ ಸಿಲಿಂಡರ್ ಕೊರತೆಯಾಗದಂತೆ ಮತ್ತು ಕಾಳಸಂತೆಯಲ್ಲಿ ಎಲ್.ಪಿ.ಜಿ., ಮಾರಾಟ ಮಾಡುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೆ.ಹೆಚ್. ಮುನಿಯಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ಐವನ್ ಡಿ'ಸೋಜಾ ಮತ್ತು ಎಂ. ನಾಗರಾಜುರವರ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಬೆಳಗ್ಗೆ 10 ಗಂಟೆಯಿಂದ ಇಲ್ಲಿಯವರೆಗೂ ಕೂಡ ತೈಲ ಕಂಪನಿಯವರನ್ನು ಕರೆಸಿ, ನಾನು ಮತ್ತು ನಮ್ಮ ಕಾರ್ಯದರ್ಶಿ ಮತ್ತು ಕಮೀಷನರ್‌ರವರು ಮೀಟಿಂಗ್ ಮಾಡಿದ್ದೇವೆ. ಆಸ್ಪತ್ರೆಗಳಿಗೆ, ಹಾಸ್ಟೆಲ್‌ಗಳಿಗೆ ಮತ್ತು ವಸತಿ ಶಾಲೆಗಳಿಗೆ; ಆಸ್ಪತ್ರೆಗಳಿಗೆ ಊಟ ತಯಾರು ಮಾಡುವ ಸ್ಥಳದಲ್ಲಿ essential ಇರುವಂತಹ 5-6 ಪದಾರ್ಥಗಳೇನಿವೆ, ಅವೆಲ್ಲಕ್ಕೂ ಕೂಡ ಕಮರ್ಷಿಯಲ್ ಸಿಲಿಂಡರ್‌ಗಳನ್ನು ಕೊಡುತ್ತೇವೆ. ಈಗ ತಕ್ಷಣಕ್ಕೆ ಇದು ತೊಂದರೆ ಇದೆ. ಒಂದು ವಾರದ ಮೇಲೆ ವಾತಾವರಣ ಬಹುತೇಕ ಸರಿ ಹೋಗುತ್ತದೆ. ಇದೆಲ್ಲಾ ಸರಳವಾಗಿ ಆಗುತ್ತದೆ. ಸದ್ಯಕ್ಕೆ ಏನಾಗಿದೆ ಎಂದರೆ, ನಿನ್ನೆ ದಿಢೀರನೆ ಸರಬರಾಜು ನಿಂತಿರುವ ಸಂಪೂರ್ಣವಾಗಿ ವಿವರಗಳನ್ನು ಕೊಟ್ಟಿದ್ದೇನೆ. ಆದರೂ ಕೂಡ ಕೆಲವು ವಿಷಯದಲ್ಲಿ ಎರಡೂ ಕಡೆಯ ಮಾನ್ಯ ಸದಸ್ಯರು ಮಾತನಾಡಿದರು. ಕಮರ್ಷಿಯಲ್ ಸಿಲಿಂಡರ್‌ಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನು ಕೊಡಲೇಬೇಕಾಗುತ್ತದೆ ಎಂದು ಹೇಳಿದರು. ಎಲ್ಲಿ ತೀರಾ ಅವಶ್ಯಕತೆ ಇದೆ, ಹೋಟೆಲ್‌ನವರಿಗೆ ನಾನು ಸಲಹೆ ಮಾಡಿದ್ದೇನೆ, ಸದ್ಯಕ್ಕೆ ಒಂದು ವಾರ ಅಥವಾ ಹತ್ತು ದಿನಗಳ ಕಾಲ ಎಲೆಕ್ಟ್ರಿಕ್ ಸ್ಟೌವ್ ಉಪಯೋಗಿಸಿ, ತೀರಾ ಅವಶ್ಯಕತೆ ಇರುವಷ್ಟು ಆಹಾರವನ್ನು ತಯಾರು ಮಾಡಿ ಮತ್ತು ಈಗ ತಕ್ಷಣಕ್ಕೆ ತೀರಾ ಅವಶ್ಯಕತೆ ಇರುವ ಆಸ್ಪತ್ರೆಗಳಿರಬಹುದು, ಹಾಸ್ಟೆಲ್‌ಗಳಿರಬಹುದು, ವಸತಿ ಶಾಲೆಗಳಾಗಿರಬಹುದು ಮತ್ತು manufacturing units, ಇಲ್ಲೆಲ್ಲಾ ಆಹಾರವನ್ನು ತಯಾರು ಮಾಡಬೇಕಾಗುತ್ತದೆ. ಅದಕ್ಕೆಲ್ಲಾ ಕೂಡ ವ್ಯವಸ್ಥಿತವಾಗಿ ಕಮರ್ಷಿಯಲ್ ಸಿಲಿಂಡರ್‌ಗಳನ್ನು ನಾವು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇನೆ. ನಾನು ಕೂಡ ಸದನಕ್ಕೆ ಹೇಳುತ್ತಿದ್ದೇನೆ, ಹೋಟೆಲ್‌ನವರು ಅನಿವಾರ್ಯವಾಗಿ ಸ್ವಲ್ಪ ದಿನ ತಾಳ್ಮೆಯಿಂದ ಇರಬೇಕು. ಅಲ್ಲಿ ಎಲೆಕ್ಟ್ರಿಕ್ ಸ್ಟೌವ್ ಉಪಯೋಗಿಸಿಕೊಂಡು ಸದ್ಯಕ್ಕೆ ಒಂದು ವಾರ, ಹತ್ತು ದಿನಗಳು ಸುಧಾರಿಸಿದರೆ, ಅಷ್ಟು ಹೊತ್ತಿಗೆ ಎಲ್ಲಾ ಸಲೀಸಾಗಿ ಪರಿಹಾರವಾಗುತ್ತದೆ ಎಂಬ ಸೂಚನೆ ಇದೆ. ಈಗಾಗಲೇ ಎರಡು ಹಡಗುಗಳು ಬಂದಿರುವುದರ ಜೊತೆಗೆ ಇನ್ನೂ 10 ರಿಂದ 12 ಹಡಗುಗಳು ಆ ಭಾಗದಿಂದ ಬರುವ ಸೂಚನೆ ಇದೆ. ಅದಕ್ಕೆ ನಾನು ಆಶ್ವಾಸನೆ ಕೊಡುವುದಿಲ್ಲ. ಏಕೆಂದರೆ ಆ ಹಡಗುಗಳು ಬರುವುದಕ್ಕೆ ಪ್ರಾರಂಭವಾದ ಮೇಲೆ ನಾನು ಮತ್ತೊಮ್ಮೆ ಸದನಕ್ಕೆ ತಿಳಿಸುತ್ತೇನೆ. ಈಗ ಎರಡು ಹಡಗು ಬರುತ್ತಿರುವುದರಿಂದ ಸ್ವಲ್ಪ ಸುಧಾರಣೆಯಾಗುತ್ತದೆ. ಅಲ್ಲಿಂದ 10-12 ಹಡಗುಗಳು ಬರುವುದಕ್ಕೆ ಪ್ರಾರಂಭವಾದರೆ, ಇಲ್ಲಿ ವ್ಯವಸ್ಥೆ ಮಾಡುವುದಕ್ಕೆ, ಏರ್ಪಾಟುಗಳನ್ನು ಮಾಡುವುದಕ್ಕೆ ಕೂಡ ಸೂಚನೆ ಕೊಟ್ಟಿದ್ದೇನೆ. ಜಿಲ್ಲಾಧಿಕಾರಿಗಳಿಗೆ Essential Commodities Act ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ. ರಸ್ತೆಯಲ್ಲಿ ಸಿಲಿಂಡರ್‌ಗಳನ್ನು ದುಪ್ಪಟ್ಟು ಬೆಲೆಗೆ ಮಾರುತ್ತಾರೆಂದು ಕೆಲವರು ಪ್ರಸ್ತಾಪ ಮಾಡಿದರು. ನಾವು ಈಗಾಗಲೇ ಪೊಲೀಸ್ ಕಮೀಷನರ್‌ರವರಿಗೆ, D.G.P. and I.G.P. ಯವರಿಗೆ ಹೇಳಿದ್ದೇವೆ. ತಕ್ಷಣ ಇದರ ಮೇಲೆ watch ಮಾಡಬೇಕು ಮತ್ತು ಸಿಲಿಂಡರ್‌ಗಳು ಯಾವುದೇ ಕಾರಣಕ್ಕೂ ಈ ರೀತಿ ಕಾಳಸಂತೆಗೆ

ಹೋಗಬಾರದು ಎಂದು ವಿವರವಾಗಿ ಹೇಳಿದ್ದೇವೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ, ಹೋಟೆಲ್‌ಗಳಿಗೆ ಕಮರ್ಷಿಯಲ್ ಸಿಲಿಂಡರ್‌ಗಳ ಸರಬರಾಜು ಇನ್ನು ಒಂದು ವಾರ, ಹತ್ತು ದಿವಸಗಳ ಕಾಲ ಕಷ್ಟವಾಗುತ್ತದೆ. ಏಕೆಂದರೆ, ಸ್ಟಾಕ್ ಇಲ್ಲ. ಸ್ಟಾಕ್ ಇದ್ದರೆ ಶೇ.20 ರಿಂದ 25%ರಷ್ಟು ಸಿಲಿಂಡರ್‌ಗಳನ್ನು ಕೊಡುವುದಕ್ಕಾಗುತ್ತದೆ. ಸ್ಟಾಕ್‌ನಲ್ಲಿ ತೀರಾ ಅವಶ್ಯಕತೆ ಇರುವಂತಹ ವಿಷಯಕ್ಕೆ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇವೆ, ಅದೇ ರೀತಿ ಕೊಡುತ್ತಿದ್ದೇವೆ. ಸಿಲಿಂಡರ್‌ಗಳ ತೊಂದರೆಯಿರುವ ಹಾಸ್ಟೆಲ್‌ಗಳಿಗೆ ಕೂಡ ಕೊಡುತ್ತಿದ್ದೇವೆ. ಬೆಂಗಳೂರಿನಲ್ಲಿ ಆಟೋಗಳ ವಿಷಯದಲ್ಲಿ ಕೂಡ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೇವೆ. ಮಾನ್ಯ ಸದಸ್ಯರಾದ ಐವನ್ ಡಿಸೋಜಾರವರು ಮಂಗಳೂರಿನ ಬಗ್ಗೆ ಕೇಳಿದ್ದಾರೆ. ಅಲ್ಲಿ ಕೂಡ ಆಟೋಗಳಿಗೆ ಗ್ಯಾಸ್ ಉಪಯೋಗಿಸುವುದಿದ್ದರೆ, ಅವರಿಗೂ ಸಿಲಿಂಡರ್‌ಗಳನ್ನು ಕೊಡುವುದಕ್ಕೆ ಸೂಚನೆ ಕೊಡುತ್ತೇನೆ. ಏಕೆಂದರೆ ಬೆಂಗಳೂರಿನಲ್ಲಿ ಕೊಡುತ್ತಿದ್ದೇವೆ. ತೆರಿಗೆ ವಿಷಯದಲ್ಲಿ ನಾನು ಪರಿಶೀಲನೆ ಮಾಡಿ ಹೇಳುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರವು ತೆರಿಗೆಗಳನ್ನು ಹಾಕುತ್ತದೆ. ಸರ್ಕಾರ ಶೇ.55ರಷ್ಟು ತೆರಿಗೆಯನ್ನು ಹಾಕಿದೆ ಎನ್ನುವ ವಿಷಯಕ್ಕೆ ನನ್ನ ಹತ್ತಿರ ಸಿದ್ಧ ಉತ್ತರವಿಲ್ಲ. ನಾಳೆ ಸರಿಯಾಗಿ ತಿಳಿದುಕೊಂಡು, ಯಾವ ಯಾವ ತೆರಿಗೆಯನ್ನು ಯಾರ್ಯಾರು ಎಲ್ಲೆಲ್ಲಿ ಹಾಕುತ್ತಿದ್ದಾರೆ, ರಾಜ್ಯದ್ದು ಏನು ಎನ್ನುವುದನ್ನು ಮಾನ್ಯ ಸಭಾಪತಿಯವರಿಗೆ ತಿಳಿಸುತ್ತೇನೆ.

**ಎ) ಕನ್ನಡ ಭಾಷೆ, ನೆಲ, ಜಲ ಸಂರಕ್ಷಣೆಗೆ ಹೋರಾಟುತ್ತಿರುವ ಸಂಘ-ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಗೌರವ ಸಲ್ಲಿಸುವ ಕುರಿತು.**

- - - - -

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ಭಾಷೆ, ಕನ್ನಡ ನೆಲ ಮತ್ತು ಕನ್ನಡ ಜಲದ ಸಂರಕ್ಷಣೆಗೆ ಯಾವತ್ತು ತನ್ನ ಬದ್ಧತೆಯನ್ನು ತೋರಿಸಿಕೊಂಡು ಬಂದಿರುತ್ತದೆ. ಕರ್ನಾಟಕದಲ್ಲಿ ಕನ್ನಡದ ರಕ್ಷಣೆಗೆ ಕೆಲಸ ಮಾಡುವ ಸಂಘ ಸಂಸ್ಥೆಗಳಿಗೆ ಬೆಂಬಲಿಸುವ, ಸ್ಫೂರ್ತಿ ನೀಡುವ ಜೊತೆಯಲ್ಲಿ ಕೆಲಸ ಮಾಡುವ ಕಾರ್ಯವನ್ನು ಕರ್ನಾಟಕ ರಾಜ್ಯ ಸರ್ಕಾರ ಮಾಡಿಕೊಂಡು ಬಂದಿರುತ್ತದೆ. ಅನೇಕ ಚಳುವಳಿಗಾರರ ಹೋರಾಟದ ಪ್ರತಿಫಲದಿಂದ ಕರ್ನಾಟಕ ಏಕೀಕರಣದ ಮೂಲಕ ವಿಶಾಲ ಕರ್ನಾಟಕ ರಾಜ್ಯವನ್ನು ಸ್ಥಾಪನೆ ಮಾಡಲಾಗಿರುತ್ತದೆ. ಕರ್ನಾಟಕಕ್ಕೆ ಕರ್ನಾಟಕದ ನೆಲ, ಜಲ, ಭಾಷೆಗೆ ದುಡಿದಂತಹ ಮಹನೀಯರಿಗೆ ಪ್ರತಿ ವರ್ಷ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡುವುದರ ಜೊತೆಗೆ, ಕನ್ನಡ ಭಾಷೆಯ ಉಳಿವಿಗೆ ಗೆಲುವಿಗೆ ಮತ್ತು ಕನ್ನಡತನದ ಬೆಳವಣಿಗೆಗೆ ಶ್ರಮಿಸುತ್ತಿರುವ ಅನೇಕ ಮಹನೀಯರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡುವುದರ ಜೊತೆಗೆ, ಕರ್ನಾಟಕದಲ್ಲಿ ನೆಲ-ಜಲ ಭಾಷೆಯ ಸಂರಕ್ಷಣೆಗೆ ಹೋರಾಟ ಮಾಡುವ ಸಂಘ ಸಂಸ್ಥೆಗಳಿಗೆ ಆರ್ಥಿಕ ಶಕ್ತಿ ಮತ್ತು ಇತರ ಸಂಪನ್ಮೂಲಗಳನ್ನು ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ ಕರ್ನಾಟಕದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರ ಸಹಿತವಾಗಿ ಅನೇಕ ಮಹನೀಯರಿಗೆ ಇಲ್ಲಿಯವರಿಗೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ನೀಡಿರುವುದಿಲ್ಲ. ಅಲ್ಲದೇ ಕರ್ನಾಟಕಕ್ಕೆ ದುಡಿಯುತ್ತಿರುವ ಅನೇಕ ಸಂಘ ಸಂಸ್ಥೆಗಳಿಗೆ ನಿವೇಶನ ಸ್ಥಳ ಅಥವಾ ಜಮೀನು ಮಂಜೂರು ಮಾಡಿರುವುದಿಲ್ಲ.

ಕರ್ನಾಟಕದಲ್ಲಿ ನೆಲ, ಜಲ ಮತ್ತು ಭಾಷೆಯ ಸಂರಕ್ಷಣೆಗೆ ಹೋರಾಟ ಮಾಡಿದ ಕನ್ನಡ ಚಳುವಳಿಗಾರರ ಮೇಲೆ ಮತ್ತು ಕನ್ನಡ ಸಂಘ ಸಂಸ್ಥೆಯ ಪದಾಧಿಕಾರಿಗಳ ಮೇಲೆ ರಾಜ್ಯದಲ್ಲಿ ಅನೇಕ ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆ. ಅಂತಹ ಪ್ರಕರಣಗಳನ್ನು ಕ್ಯಾಬಿನೆಟ್ ತೀರ್ಮಾನದ ಮೂಲಕ ರಾಜ್ಯ ಸರ್ಕಾರವು ವಾಪಸ್ ಪಡೆಯುವುದು ಸಕಾಲಿಕವಾಗಿರುತ್ತದೆ. ಆದುದರಿಂದ ರಾಜ್ಯ ಸರ್ಕಾರವು ಕರ್ನಾಟಕದ ನೆಲ, ಜಲ ಭಾಷೆಯ ಸಂರಕ್ಷಣೆಯ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಕೊಡುಗೆ ನೀಡಿರುವ ಮಹನೀಯರನ್ನು ಗುರುತಿಸಿ, ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡುವುದರ ಜೊತೆಗೆ ಕರ್ನಾಟಕದ ಪರವಾಗಿ ಹೋರಾಟ ಮಾಡುತ್ತಿರುವ, ಧ್ವನಿ ಎತ್ತಿರುವ ಸಂಘ ಸಂಸ್ಥೆಗಳಿಗೆ ನಿವೇಶನಗಳನ್ನು ಮತ್ತು ಜಮೀನುಗಳನ್ನು ನೀಡಬೇಕಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಮನವಿ ಮಾಡುತ್ತೇನೆ. ಈ ಕುರಿತು ಅನೇಕ ಮಾಧ್ಯಮಗಳಲ್ಲಿ ನಿರಂತರವಾಗಿ ವರದಿಗಳು ಬರುತ್ತಿದ್ದು, ರಾಜ್ಯ ಸರ್ಕಾರವು ಇದನ್ನು ಆದ್ಯತೆಯ ಮೇಲೆ ಪರಿಗಣಿಸಬೇಕಾಗಿರುತ್ತದೆ. ಆದಕಾರಣ, ರಾಜ್ಯ ಸರ್ಕಾರದ ಕನ್ನಡ ಮತ್ತು

ಸಂಸ್ಕೃತಿ ಇಲಾಖೆಯ ಮುಖಾಂತರ ಇಂತಹ ಮಹನೀಯರಿಗೆ ಮತ್ತು ಸಂಘ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಗೌರವ ಸಲ್ಲಿಕೆ ಮಾಡಲು ನಾನು ಈ ಸದನದ ಮೂಲಕ ಶೂನ್ಯ ವೇಳೆಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

**(ಮುಂದು)**

(378) 13-03-2026 12-20 KH/BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶಿವರಾಜ ಎಸ್.ತಂಗಡಗಿ (ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕನ್ನಡಕ್ಕಾಗಿ ಹೋರಾಟವನ್ನು ಮಾಡುವಂತಹವವರನ್ನು ಗುರುತಿಸಿ ಪ್ರಶಸ್ತಿಯನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ನಿರ್ದಿಷ್ಟವಾಗಿ ಮಾನ್ಯ ವಾಟಾಳ್ ನಾಗರಾಜ್ ರವರ ಬಗ್ಗೆ ಹೇಳಿದರು. ನಿಜವಾಗಿಯೂ ಅವರು ಬಹಳ ಹಿರಿಯರು. ನಮಗೂ ಕೂಡ ಅವರ ಬಗ್ಗೆ ಬಹಳಷ್ಟು ಗೌರವ ಇದೆ. ಮುಂದಿನ ದಿನಮಾನದಲ್ಲಿ ಸಮಿತಿಯನ್ನು ಮಾಡುತ್ತೇವೆ. ಆ ಸಮಿತಿಯ ಮುಖಾಂತರ ಏನು ಮಾಡಬೇಕೆನ್ನುವುದನ್ನು . . . ನಿಜವಾಗಿಯೂ ಅವರಿಗೆ ಪ್ರಶಸ್ತಿಯನ್ನು ಕೊಡಬೇಕಾಗಿರುವಂತಹದ್ದೇ ಆಗಿದೆ. ಅವರು ಬಹಳ ವರ್ಷಗಳಿಂದ ಮತ್ತು ಬಹಳ ದಿನದಿಂದಲೂ ಹೋರಾಟವನ್ನು ಮಾಡಿಕೊಳ್ಳುತ್ತಾ ಬಂದಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್ರವರ ಬಗ್ಗೆ ಮಾತ್ರ ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಮತ್ತು ಇದರ ಜೊತೆಗೆ ಬಹಳಷ್ಟು ಮಹನೀಯರಿಗೆ ಅವಕಾಶವನ್ನು ಕೊಡುವುದಕ್ಕೆ ಆಗಲಿಲ್ಲ. ಆ ಪ್ರಯತ್ನವನ್ನು ಸಮಿತಿಯೊಳಗೆ ಇಟ್ಟು ಸಮಿತಿ ಮುಖಾಂತರ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಮಾಡುತ್ತೇವೆ. ಎರಡನೆಯದಾಗಿ, ಕನ್ನಡ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿರುವ ಬಗ್ಗೆ, ಈಗಾಗಲೇ 'ಕರ್ನಾಟಕ' ಎಂದು ಹೆಸರಿಟ್ಟು 50 ವರ್ಷದ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಮಾಡಿದ್ದೇವೆ. ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಯಾವ್ಯಾವು ಅಂತಹ ಸಂಸ್ಥೆಗಳು ಇವೆ, ಯಾರ ಮೇಲೆ ಕ್ರಿಮಿನಲ್ ಕೇಸ್ ಆಗಿವೆ, ಅವುಗಳನ್ನು ತರಿಸಿ ಕ್ಯಾಬಿನೆಟ್‌ನಲ್ಲಿ ಇಟ್ಟು ವಿನಾಯಿತಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಘೋಷಣೆ ಮಾಡಿದ್ದಾರೆ. ಈಗ ನಾವು ಸಮಿತಿಯನ್ನು ಮಾಡಿದ್ದೇವೆ. ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ಇದೆ. ಅಂತಹ ಯಾವ ಸಂಘ-ಸಂಸ್ಥೆಗಳು ಇವೆ ಎನ್ನುವುದನ್ನು ಕೊಟ್ಟರೆ, ಅದನ್ನು ಪರಿಶೀಲನೆ ಮಾಡಿ ತರುವಂತಹ ಕೆಲಸ ಮಾಡುತ್ತೇವೆ. ಮೂರನೆಯದಾಗಿ, ನಿವೇಶನಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ನಿವೇಶನಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹ ಕೆಲಸ ಮಾಡುತ್ತೇನೆ.

**ಏ) ರಾಜ್ಯದ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು.**

***

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. 'ಹೊಸ ದಿಗಂತ' ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುವ 'ತ್ಯಾಜ್ಯ ಎಸೆಯುವವರ ವಿರುದ್ಧ ಸೂಕ್ತ ದಂಡ ವಿಧಿಸುತ್ತಿಲ್ಲ' ಎಂಬ ಶೀರ್ಷಿಕೆಯಡಿ ಪ್ರಕಟವಾದ ವಿಷಯದ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡುವಂತೆ ಕೋರುತ್ತೇನೆ.

ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ರೂಪಾಯಿ 1 ಲಕ್ಷದವರೆಗೆ ದಂಡ ವಿಧಿಸುವ ಕಾನೂನು ಇದ್ದರೂ ಸಹ ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಸದಿರುವ ಪರಿಣಾಮ ಸಂಪೂರ್ಣ ಸ್ವಚ್ಛತೆ ಸಾಧಿಸಲು ಸಾಧ್ಯವಾಗುತ್ತಿಲ್ಲವೆಂದು ಮಾದರಿ ಗ್ರಾಮ ಅಭಿಯಾನ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ ತಾಲ್ಲೂಕು ಘಟಕ ಮತ್ತು ರಾಷ್ಟ್ರೀಯ ನಿರ್ಮಲ ಗ್ರಾಮ ಪ್ರಶಸ್ತಿ ಪುರಸ್ಕೃತ ಜನ ಶಿಕ್ಷಣ ಟ್ರಸ್ಟ್ ಜಂಟಿ ಆಶ್ರಯದಲ್ಲಿ ನಡೆದ ಸಮುದಾಯ ಆರೋಗ್ಯ ಅರಿವು ಅಭಿಯಾನ ಕಸ ಮುಕ್ತ ಗ್ರಾಮ, ಕ್ಯಾನ್ಸರ್ ಮುಕ್ತ ಗ್ರಾಮ, ಸ್ವಚ್ಛ ಮನೆ ಸ್ವಯಂ ಘೋಷಣೆ, ಸಂವಾದ ಸಂಕಲ್ಪ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಸ್ವಚ್ಛತಾ ರಾಯಭಾರಿ ಶ್ರೀ ಶೀನ ಶೆಟ್ಟಿಯವರು ಕಳವಳ ವ್ಯಕ್ತಪಡಿಸಿದರು.

ಜಗತ್ತಿನ ಕೆಲವು ರಾಷ್ಟ್ರಗಳಲ್ಲಿ ಪ್ಲಾಸ್ಟಿಕ್ ಮಳೆ ಶುರುವಾಗಿದ್ದರೆ, ನಮ್ಮ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬೆಂಕಿಯೇ ಹೊತ್ತಿಕೊಂಡಿದೆ. ಮನೆ, ಅಂಗಡಿ, ಹೋಟೇಲ್, ಶಾಲೆ, ಧಾರ್ಮಿಕ ಕ್ಷೇತ್ರ, ವಿಶ್ವವಿದ್ಯಾಲಯಗಳ ವಠಾರದಲ್ಲಿ ಪ್ಲಾಸ್ಟಿಕ್‌ನ್ನು ಎಸೆಯುವುದಲ್ಲದೆ, ಅದನ್ನು ಸುಡುವ ಪ್ರಕ್ರಿಯೆಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಈ ಬಗ್ಗೆ ಕ್ರಮವಹಿಸಲು ಸರ್ಕಾರಕ್ಕೆ ಪತ್ರ ಬರೆದರೆ ಪ್ರೀತಿಯ ಪ್ರಶ್ನೋತ್ತರ ಪ್ರಕ್ರಿಯೆ ನಡೆಯುತ್ತದೆಯೇ ಹೊರತು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗುತ್ತಿಲ್ಲ. ಗ್ರಾಮೀಣ ಭಾಗದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಕಸ ಬಿಸಾಕುವುದನ್ನು ನಿಯಂತ್ರಿಸಲು ದಂಡ ವಿಧಿಸಲು ಸ್ವಯಂಪ್ರೇರಿತವಾಗಿ ಪ್ರಕರಣವನ್ನು ದಾಖಲಿಸುವ ಅಧಿಕಾರವನ್ನು ಪೊಲೀಸ್ ಇಲಾಖೆಗೂ ನೀಡಬೇಕು. ಜಿಲ್ಲಾ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಸ ಬಿಸಾಡುವುದನ್ನು ನಿಯಂತ್ರಿಸಲು ಸಂಬಂಧಪಟ್ಟ ಆಯಾ ಇಲಾಖೆಯೇ ಕ್ರಮವಹಿಸಬೇಕು. ಅರಣ್ಯ ಪ್ರದೇಶ ಮತ್ತು ವಿವಿಧ ಹೆದ್ದಾರಿಗಳು ಹಾದು ಹೋಗುವ ಅರಣ್ಯ ಭಾಗದಲ್ಲಿ ಬೇಕಾಬಿಟ್ಟಿ ಕಸ ಬಿಸಾಡುವುದನ್ನು ತಡೆಯಲು ದಂಡ ವಿಧಿಸುವ ಮತ್ತು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸುವ ಅಧಿಕಾರವನ್ನು ಅರಣ್ಯ ಇಲಾಖೆಗೂ ನೀಡಬೇಕು.

ಆದ್ದರಿಂದ ಈ ಎಲ್ಲಾ ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಸ್ವಚ್ಛತೆಯ ಬಗ್ಗೆ ಪ್ರಸ್ತುತವಿರುವ ನಿಯಮಗಳನ್ನು ಇನ್ನಷ್ಟು ಬಲಪಡಿಸಿ, ರಾಜ್ಯದ ಗ್ರಾಮೀಣ ಮತ್ತು ನಗರ ಭಾಗಗಳಲ್ಲಿ ಸದರಿ ನಿಯಮವು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಸ್ವಚ್ಛ ಪರಿಸರ ನಿರ್ಮಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಿಶೋರ್ ಕುಮಾರ್ ಪುತ್ತೂರು ರವರು ಕೇಳಿದಂತಹ ಶೂನ್ಯ ವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಐ) ಬೇಸಿಗೆ ಮುನ್ನವೇ ಕುಡಿಯುವ ನೀರಿನ ಸಮಸ್ಯೆ ಮತ್ತು ಹಲವು ಗ್ರಾಮದಲ್ಲಿ ಜಲಕ್ಷಾಮ ಎದುರಾಗಿದ್ದು, ಏಪ್ರಿಲ್-ಮೇ ನಲ್ಲಿ ಮತ್ತಷ್ಟು ಸಮಸ್ಯೆಯಾಗುವ ಕುರಿತು.**

***

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ದಿನಾಂಕ: 06.03.2026 ರ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ "ಬೇಸಿಗೆಗೆ ಮುನ್ನವೇ ಕುಡಿಯುವ ನೀರಿಗೆ ವಿಘ್ನ" ಎಂಬ ಶಿರೋನಾಮೆಯಡಿ ಬಂದಿರುವ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಬೇಸಿಗೆಯ ಆರಂಭದಲ್ಲೇ ಬಿಸಿಲಿನ ತಾಪಮಾನ ಕೂಡ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಈಗಾಗಲೇ ಹಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಈ ಬಾರಿ ಮಳೆಗಾಲ ಉತ್ತಮವಾಗಿದ್ದರೂ ಬಿಸಿಲಿನ ಹೊಡೆತಕ್ಕೆ ಅಂತರ್ಜಲ ಕುಸಿತದ ಪರಿಣಾಮವಾಗಿ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಮಧ್ಯ ಕರ್ನಾಟಕ ಸೇರಿದಂತೆ ರಾಜ್ಯದ ಬಹುತೇಕ ಹಳ್ಳಿಗಳಲ್ಲಿ ನೀರಿನ ಸಮಸ್ಯೆ ತಲೆದೋರುತ್ತಿದೆ. ಗ್ರಾಮಗಳ ಬೋರ್‌ವೆಲ್‌ಗಳಲ್ಲಿ ನೀರು ಬರುತ್ತಿಲ್ಲ. ಹಳ್ಳಕೊಳ್ಳಗಳು ಬತ್ತುತ್ತಿವೆ. ಕೆರೆಯಲ್ಲಿ ನೀರು ಮಧ್ಯಕ್ಕೆ ಹೋಗಿವೆ. ಈಗಲೇ ಇಷ್ಟಾದರೆ ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿ ಆಂತಕ ಸೃಷ್ಟಿಸುವ ಸಂಭವ ಇದೆ.

ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿಯೂ ಸಹ ಸುಮಾರು 97 ಗ್ರಾಮಗಳಲ್ಲಿ, ಕಲ್ಯಾಣ ಕರ್ನಾಟಕದ ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರಗಿ ಜಿಲ್ಲೆಗಳ ಸುಮಾರು ನೂರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಮತ್ತು ಉತ್ತರ ಕನ್ನಡದ 209 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಲ್ಬಣಗೊಂಡಿದೆ. ಸರ್ಕಾರ ಕೂಡಲೇ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿ ರವರು ಕೇಳಿದಂತಹ ಶೂನ್ಯ ವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

## ೩. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ (ಕ.ವಿ.ಪ):-** ಮಾನ್ಯ ಸಭಾಪತಿಯವರೇ,

158ನೇ ಅಧಿವೇಶನದ ದಿನಾಂಕ:23-01-2026ರ ಉಪವೇಶನದಲ್ಲಿ ಘನತೆವೆತ್ತ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕದ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**4. ನಿಯಮ 58ಎ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ಶೂನ್ಯವೇಳೆ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ: "ಬೆಳಗಾವಿ ಅಂಗನವಾಡಿ ಮಕ್ಕಳಿಗೆ 'ಎಕ್ಸ್‌ಪೈರಿ' ಮಿಲೆಟ್ ಲಡ್ಡು!" ನೀಡಿರುವ ಕುರಿತು.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜು ರವರು ದಿನಾಂಕ: 09-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಆ) ವಿಷಯ: ದಾಖಲೆಯಲ್ಲಿ ಜೋಳ ಬೆಳೆದ ರಾಯಚೂರು ರೈತರ ಕುರಿತು.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರು ದಿನಾಂಕ: 09-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರಿಗೆ ಆಸರೆಯಾಗಿದ್ದ "ಜಿಲ್ಲಾ ಸಾಂತ್ವನ ಕೇಂದ್ರಗಳ" ಸ್ಥಗಿತಗೊಳಿಸಲು ಮುಂದಾಗಿರುವ ಕುರಿತು.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ದಿನಾಂಕ: 09-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ: "ಹೆಚ್ಚುತ್ತಿದೆ ಧಗೆ ಅಣೆಕಟ್ಟುಗಳಲ್ಲಿ ಇಳಕೆಗೆ ನೀರಿನ ಮಟ್ಟ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಸಾಧ್ಯತೆ ಮುಂಜಾಗ್ರತೆಗೆ ಮಂಗಳೂರು ಮಹಾನಗರ ಪಾಲಿಕೆ ಅಣಿಯಾಗಬೇಕೆನ್ನುವ ಕುರಿತು.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ದಿನಾಂಕ: 10-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಉ) ವಿಷಯ: ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿ ಸರ್ಕಾರಿ ವೈದ್ಯರು ಹೊರ ರೋಗಿ ಸೇವೆ ಬಂದ್ ಮಾಡಲು ನಿರ್ಧರಿಸಿರುವ ಕುರಿತು.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯಗಳಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಮತ್ತು ಶ್ರೀ ಹಣಮಂತ ರುದ್ರಪ್ಪ ನಿರಾಣಿ ರವರುಗಳು ದಿನಾಂಕ: 10-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳಿಗೆ ಸಂಬಂಧಿಸಿದಂತೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

**ಊ) ವಿಷಯ: "ಇ-ಖಾತಕ್ಕೆ ಪರದಾಟ ಸರ್ವರ್ ಡೌನ್ ನೆಪದಿಂದ ಕೈಗಾರಿಕಾ ಆಸ್ತಿ ನೋಂದಣಿಗೆ ತೊಡಕು ಉಂಟಾಗಿರುವ ಬಗ್ಗೆ.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರು ದಿನಾಂಕ: 11-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಋ) ವಿಷಯ: ಮಂಗಳೂರು ಮಹಾನಗರದಲ್ಲಿ 24X7 ನೀರು ಸರಬರಾಜು ಮಾಡಬೇಕಾಗಿದ್ದ ಜಲಸಿರಿ ಯೋಜನೆ 2023ಕ್ಕೆ ಮುಗಿಯಬೇಕಾಗಿದ್ದು, ಸದರಿ ಯೋಜನೆಯು ಈವರೆಗೂ ಮುಕ್ತವಾಗಿರುವುದಿಲ್ಲ ಎಂಬ ಬಗ್ಗೆ.**

* * *

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ದಿನಾಂಕ: 11-03-2026 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

## 5. ವರದಿಯನ್ನೊಪ್ಪಿಸುವುದು

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ) (ಸದಸ್ಯರು, ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಸದಸ್ಯನಾದ ನಾನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 215 ರೀತ್ಯಾ ಸಮಿತಿಯ ಮೊದಲನೇ ವರದಿಯನ್ನು ಸದನದಲ್ಲಿ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಯನ್ನೊಪ್ಪಿಸಲಾಯಿತು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನವರೆಗೂ ಮಾನ್ಯ ಸದಸ್ಯರುಗಳು 745 ಪ್ರಶ್ನೆಗಳನ್ನು ಕೇಳಿದ್ದಾರೆ. ಈಗಾಗಲೇ 463 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಇದುವರೆಗೂ ಸುಮಾರು 282 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಕಳೆದ ಬಾರಿಯ 158ನೇ ಅಧಿವೇಶನದಲ್ಲಿ 553 ಪ್ರಶ್ನೆಗಳನ್ನು ಕೇಳಿದಂತಹ ಸಂದರ್ಭದಲ್ಲಿ ಇದುವರೆಗೂ 89 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ. ಹಾಗಾದರೆ, ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅಧಿಕಾರಿಗಳ ಹತ್ತಿರ ಉತ್ತರವನ್ನು ಪಡೆದುಕೊಂಡು ನಮಗೆ ಉತ್ತರವನ್ನು ಕೊಡದೇ ಇರುವಷ್ಟು ಸರ್ಕಾರ ವಿಫಲವಾಗಿದೆಯೇ ಎನ್ನುವುದು ಬಹಳ ಮೂಲ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರಿಗೆ ಮತ್ತು ಮಾನ್ಯ ಕಾನೂನು ಸಚಿವರಿಗೆ ಹೇಳುತ್ತಿದ್ದೇನೆ. ತಾವುಗಳು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವುದಿಲ್ಲ. ಹಿಂದಿನ ಅಧಿವೇಶನದಲ್ಲಿ ಅಧಿಕಾರಿಗಳಿಗೆ 100 ಬಾರಿ ಈ ಸದನದಲ್ಲಿ ಹೇಳಿದ್ದೇನೆ. ಅಧಿಕಾರಿಗಳೇ ಉತ್ತರ ಕೊಡಲಿಲ್ಲವೆಂದರೆ ಕ್ರಮ ಏಕೆ ತೆಗೆದುಕೊಳ್ಳುವುದಿಲ್ಲ? ಮಾನ್ಯ ಸಭಾನಾಯಕರೇ, ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿ. ಮಾನ್ಯ ಸದಸ್ಯರು ಪ್ರಶ್ನೆ ಹಾಕಿ ಉತ್ತರ ಪಡೆಯುವುದಕ್ಕೆ ಎಷ್ಟು ಪರದಾಡುತ್ತಾರೆ. ಈ ಸದನದಲ್ಲಿ ಒಂದು ಸ್ಪಷ್ಟವಾದ ನಿರ್ಣಯವನ್ನು ಮಾಡಿ. ಇಲ್ಲದಿದ್ದರೆ, ನಾವು ಉತ್ತರ ಕೊಡುವುದಿಲ್ಲ ಎಂದು ಹೇಳಿ. ನಾನು ಮತ್ತೆ ಕೇಳುವುದಿಲ್ಲ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರ ಕಛೇರಿಗಳಿಗೆ ಮಾಹಿತಿ ಕೊಟ್ಟಿದ್ದೇವೆ. ಹಾಗೆಯೇ ಮುಖ್ಯ ಕಾರ್ಯದರ್ಶಿಯವರಿಗೂ ಮಾಹಿತಿ ಕೊಟ್ಟಿದ್ದೇವೆ. ಆದಷ್ಟು ಮುಂದಿನ ವಾರದಲ್ಲಿ . . .

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಾವು ಪ್ರತಿ ಬಾರಿ ಇದನ್ನೇ ಹೇಳುತ್ತೀರಿ. ಈಗ ನೋಡಿ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಈಗ ತಾವು ಈ ರೀತಿ ಹೇಳುತ್ತೀರಿ. ತಾವು ಹೇಳಿದ ನಂತರ ಅದನ್ನು ಕಾರ್ಯರೂಪಕ್ಕೆ ತರಬೇಕಲ್ಲವೇ? ನಾನು ಹಿಂದೆ ಒಂದು ಬಾರಿ ಕೇಳಿದ್ದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊತ್ತೇವೆ ಎಂದು ಹೇಳಿದ್ದೀರಿ. ನಾಳೆ ಅಧಿವೇಶನ ಇರುತ್ತದೆ. ಒಂದು ತಿಂಗಳ ಕಾಲವಕಾಶ ಕೇಳುತ್ತೀರಿ. ಅಧಿಕಾರಿಗಳು ಉತ್ತರ ಕೊಡದೇ ಇದ್ದರೆ ಮಾನ್ಯ ಸಚಿವರು ನೋಡುವಂತಹ ಜವಾಬ್ದಾರಿ ಇರುವುದಿಲ್ಲವೇ?

(ಮುಂದು)

(379) 13.3.2026 12.30 ಪಿಕೆ:ಬಿಎನ್ಎಸ್ (ಸಭಾಪತಿಗಳ ಉಸ್ಥಿತಿ)

**ಸಭಾಪತಿಯವರು:-** ಇನ್ನು ಒಂದು ತಿಂಗಳ ಕಾಲ ಸದನ ನಡೆಯುತ್ತದೆಯೋ ಇಲ್ಲವೋ ಎನ್ನುವುದನ್ನು ಮಂತ್ರಿಗಳು ನೋಡಬೇಕಾಗುತ್ತದೆ ಅಲ್ಲವೇ?

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರು ಹೇಳಿರುವಂಥದ್ದಕ್ಕೆ ಧ್ವನಿಗೂಡಿಸುತ್ತೇನೆ. ನಾನು ಮತ್ತು ನಮ್ಮ ಸಭಾನಾಯಕರು ಜೊತೆಯಾಗಿ, ದಿನಾಂಕ 20 ರಂದು, ಯಾವ ಇಲಾಖೆ ಉತ್ತರಗಳು ಹೆಚ್ಚು ಪೆಂಡಿಂಗ್ ಇದೆಯೋ ಆ ಇಲಾಖೆಯ ಕಾರ್ಯದರ್ಶಿಗಳ ಸಭೆ ನಡೆಸುತ್ತೇವೆ. ಉತ್ತರ ಸ್ವಲ್ಪ ವಿಳಂಬವಾಗುತ್ತದೆ, 15-20-30 ದಿವಸಗಳ ಅವಧಿ ಬೇಕಾಗುತ್ತದೆ ಎಂದು ನಿಮಗೆ ಪತ್ರ ಬರೆದು ಅನುಮತಿ ತೆಗೆದುಕೊಂಡಿದ್ದಾರೋ, ಅವುಗಳಲ್ಲಿ ತಾಂತ್ರಿಕವಾಗಿ ಸರಿಯಿದ್ದರೆ ಅಂಥದ್ದನ್ನು ಬಿಟ್ಟು ಉಳಿದ ಎಲ್ಲವನ್ನು 26ನೇ ತಾರೀಖಿನೊಳಗಾಗಿ ಉತ್ತರ ಕೊಡಿಸುವ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು:-** ನೀವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ? 3-4 ಸಲ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಇಬ್ಬರು ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಗಳೆ, 20ನೇ ತಾರೀಖಿಗೆ ಸಭೆ ಮಾಡುತ್ತೇವೆ, 26ನೇ ತಾರೀಖಿನೊಳಗಾಗಿ ಅವರು ಸ್ಪಂದಿಸದೇ ಹೋದರೆ ಅಂಥವರ ಮೇಲೆ ಸೂಕ್ತ ಕ್ರಮ ಜರುಗಿಸುತ್ತೇವೆ.

6. ಖಾಸಗಿ ಸದಸ್ಯರ ಕಾರ್ಯಕಲಾಪ

ಖಾಸಗಿ ವಿಧೇಯಕ

ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕ, 2025

ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ರಮೇಶ್‌ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, **2025ರ ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕವನ್ನು** ಮಂಡಿಸಲು **ತಮ್ಮ** ಅನುಮತಿ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "2025ರ ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು.

**ಶ್ರೀ ರಮೇಶ್‌ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಸಾರ್ವಜನಿಕ ಹಿತಾಸಕ್ತಿಗೆ ಅನುಗುಣವಾಗಿ ಈ ವಿಧೇಯಕದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಬಹಳ ಪ್ರಮುಖವಾಗಿ ಚಿನ್ನ ಎನ್ನುವುದು ಪ್ರತಿಯೊಬ್ಬ ಜನಸಾಮಾನ್ಯರ ಜೀವನದ ಭಾಗ. ವಿಶೇಷವಾಗಿ ಯಾವುದೋ ಕಷ್ಟ, ತೊಂದರೆ ಆದಂತಹ ಸಂದರ್ಭದಲ್ಲಿ ಚಿನ್ನವನ್ನು ಅಡವಿಟ್ಟು ಸಾಲ ಪಡೆದುಕೊಳ್ಳುವುದು ಪ್ರತಿಯೊಬ್ಬ ನಾಗರಿಕ ಅಥವಾ ಪ್ರತಿಯೊಂದು ಕುಟುಂಬದಲ್ಲಿ ಆಗುವಂತಹ ದಿನನಿತ್ಯದ ವ್ಯವಹಾರದ ಚಟುವಟಿಕೆಯಾಗಿದೆ. ಇವತ್ತು ಯಾರು ಜನಸಾಮಾನ್ಯರು ತಮ್ಮ ತುರ್ತು ಸಂದರ್ಭಕ್ಕೆಂದು ಖಾಸಗಿ ಸಂಸ್ಥೆಗಳಲ್ಲಿ ಸಾಲ ಪಡೆದುಕೊಳ್ಳುವುದಕ್ಕೆ ಹೋಗುವಾಗ ಅಥವಾ ರಾಷ್ಟ್ರೀಕೃತ ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆದುಕೊಳ್ಳಲು ಹೋಗುವಂತಹ ಸಂದರ್ಭದಲ್ಲಿ ಆವತ್ತಿನ ಮಾರುಕಟ್ಟೆಗೆ ಅನುಗುಣವಾಗಿ ಚಿನ್ನದ ಬೆಲೆ ಏನಿರುತ್ತದೆಯೋ ಅದಕ್ಕನುಗುಣವಾಗಿ, ಒಂದು ಗ್ರಾಮ್‌ಗೆ 50%-60% ವೇಸ್ಟೇಜ್, ಮತ್ತೊಂದನ್ನು ತೆಗೆದು ಸಾಲ ಕೊಡುವಂತಹ ವ್ಯವಸ್ಥೆಯನ್ನು ನೋಡುತ್ತೇವೆ. ರಾಷ್ಟ್ರೀಕೃತ ಬ್ಯಾಂಕುಗಳು ಕೊಡುವ ಸಾಲಕ್ಕೆ ಸಂಬಂಧಪಟ್ಟಂತೆ ಹೆಚ್ಚು ಒತ್ತು ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ಖಾಸಗಿ ಸಂಸ್ಥೆಗಳಲ್ಲಿ ಏನು ಸಾಲ ಕೊಡುತ್ತಿದ್ದಾರೋ ಅಲ್ಲಿ ಅನೇಕ ರೀತಿಯ ವಂಚನೆ ಮತ್ತು ಶೋಷಣೆ ನಡೆಯುತ್ತಿದೆ. ಉದಾಹರಣೆಗೆ, ಇವತ್ತು ಕೆಲವು fake gold loan companies ಇವೆ. ಅವುಗಳನ್ನು pawn brokers or finance companies or non-banking finance companies ಎಂದು ಕರೆಯಬಹುದು. ಸಾಮಾನ್ಯ ಜನರು, ಕೂಲಿ ಕಾರ್ಮಿಕರು, ಬಡ ವರ್ಗದವರು, ಕೆಳವರ್ಗದವರು ಸಾಲ ಬಯಸಿ ಬಂದ ಸಂದರ್ಭದಲ್ಲಿ ಅವರಿಗೆ ಮೋಸ ಮಾಡುವಂತಹ ಅನೇಕ ಫೇಕ್ ಕಂಪನಿಗಳು ರಾಜ್ಯದಲ್ಲಿವೆ. ಅವರು ಸಾಲ ಕೊಡಬೇಕಾದರೆ ಮೊದಲು

ಅವರು undervaluation of gold ಅನ್ನು ಮಾಡುತ್ತಾರೆ. ಇವತ್ತಿನ ದಿವಸ ಒಂದು ಗ್ರಾಂ ಚಿನ್ನದ ಬೆಲೆ ರೂ. 15,000 ಇರುತ್ತದೆ. ಆದರೆ ಒಂದು ವರ್ಷದ ಹಿಂದೆ ಒಂದು ಗ್ರಾಂ ಚಿನ್ನಕ್ಕೆ ರೂ. 7,000 ಇದ್ದರೆ ಆ ರೂ. 7,000 ಮೊತ್ತವನ್ನು ಕೊಡುವುದಿಲ್ಲ. ಅದರಲ್ಲಿ, ವೇಸ್ಟೇಜ್, ಮತ್ತೊಂದು ಎಂದು ಹೇಳಿ 50% ಕೊಡುತ್ತಾರೆ. ಅಂದರೆ, ಅಂದಾಜು ಒಂದು ಗ್ರಾಂ ರೂ. 3,000 ಕೊಡುತ್ತಾರೆ. ಒಂದು ಸ್ಲಿಪ್‌ನ ಹಿಂಭಾಗದಲ್ಲಿ ಕಂಡೀಷನ್‌ಗಳನ್ನು ಹಾಕಿರುತ್ತಾರೆ. 6 ತಿಂಗಳ ಒಳಗೆ ಸಾಲ ಕಟ್ಟಬೇಕೆಂತಲೋ, 3 ತಿಂಗಳ ಒಳಗೆ ಬಡ್ಡಿ ಕಟ್ಟಬೇಕೆಂತಲೋ ಹಾಕಿಕೊಂಡು, ದುಡ್ಡು ಕಟ್ಟಿಲ್ಲ ಎಂದು ಅವರೇ ಒಂದು paper notification ಅಥವಾ ಒಂದು ನೋಟಿಸ್ ಬೋರ್ಡ್‌ನಲ್ಲಿ notification ಎಂದು, ಅಥವಾ deemed notice ಎಂದು ಮಾಡಿ, ಚಿನ್ನವನ್ನೇನು ಅಡವಿಟ್ಟಿರುತ್ತಾರೋ ಅದನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಯಾರು 1-5 ಗ್ರಾಂ ಚಿನ್ನವನ್ನು ಇಟ್ಟಿರುತ್ತಾನೋ ಅವನಿಗೆ ಕೇವಲ 25% ಅಷ್ಟೇ ಸಿಕ್ಕಿರುತ್ತದೆ. ಇವತ್ತು ಚಿನ್ನದ ಬೆಲೆ ಒಂದು ಗ್ರಾಂಗೆ ರೂ. 15,000 ಇರುತ್ತದೆ. ಆ ಚಿನ್ನವನ್ನು ಹರಾಜು ಮಾಡಿದರೆ ಸಂಸ್ಥೆಯವರೇ ಇವನಿಗೆ ದುಡ್ಡು ಕೊಡಬೇಕಾಗುತ್ತದೆ. ಆದರೆ ಆದು ಆಗುತ್ತಿಲ್ಲ. ಗ್ರಾಹಕರ ಚಿನ್ನದಲ್ಲಿ ಅವರು ಲಾಭ ಮಾಡುವಂತಹ ಕೆಲಸವನ್ನು ಫೇಕ್ ಕಂಪನಿಗಳು, ಪಾನ್ ಬ್ರೋಕರ್‌ಗಳು, ಖಾಸಗಿ ಕಂಪನಿಗಳು ಮಾಡುತ್ತಿವೆ. ಇದು ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಇಂಥದ್ದು ಇಡೀ ದೇಶದಲ್ಲೂ ನಡೆಯುತ್ತದೆ. ಆದರೆ ನಾನು ರಾಜ್ಯಕ್ಕೆ ಸೀಮಿತವಾಗಿ ಮಾತನಾಡುತ್ತಿದ್ದೇನೆ. ಮುತ್ತೂಟ್ ಫೈನ್ಯಾನ್ಸ್, ಮಣ್ಣಪ್ಪುರಂ ಫೈನ್ಯಾನ್ಸ್, ಅಟ್ಟಿಕಾ ಇಂತಹ ಸಂಸ್ಥೆಗಳು ಪತ್ರಿಕೆಗಳಲ್ಲಿ ದೊಡ್ಡದಾಗಿ ಜಾಹೀರಾತು ಕೊಡುತ್ತಾರೆ. ಆದರೆ ದುರ್ಬಿನ್ ಹಾಕಿ ಹುಡುಕಿದರೂ ನಮಗೆ ಅವರ ಕಂಡೀಷನ್‌ಗಳು ಗೊತ್ತಾಗುವುದಿಲ್ಲ. ಅಷ್ಟು ಚಿಕ್ಕದಾಗಿ ಲೋನ್ ಅಕೌಂಟ್ ಬಗ್ಗೆ ಹಾಕಿರುತ್ತಾರೆ, 6 ತಿಂಗಳಲ್ಲಿ ಚಿನ್ನವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಕೇಳಿದರೆ, ನಾವು ನೋಟಿಸ್ ಕೊಟ್ಟಿದ್ದರೂ ನೀವು ಸಾಲವನ್ನು ಹಿಂದಿರುಗಿಸಲಿಲ್ಲ ಎಂದು ಹೇಳುತ್ತಾರೆ. ಕೂಲಿ-ಕಾರ್ಮಿಕ ಬಟ್ಟೆ ತೆಗೆದುಕೊಳ್ಳುವುದಕ್ಕೋ ಅಥವಾ ಆಸ್ಪತ್ರೆ ಖರ್ಚಿಗೋ ಸಾಲ ತೆಗೆದುಕೊಂಡಿರುತ್ತಾನೆ. ಅವನಿಗೆ ಸಾಕಷ್ಟು ಅವಕಾಶ ಕೊಡುವುದಿಲ್ಲ. ಅವನು ಅಡವಿಟ್ಟ ಚಿನ್ನದ ಮೌಲ್ಯ ಒಂದು ಲಕ್ಷ ರೂಪಾಯಿಗಳಿದ್ದರೆ, ಅದಕ್ಕೆ ರೂ. 15-20 ಸಾವಿರಗಳನ್ನು ಕೊಟ್ಟು, ಹರಾಜು ಹಾಕಿ ಅದನ್ನು ಇವರೇ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. Auction ನಲ್ಲಿ ಕಂಪನಿಯವರೇ ಇಟ್ಟುಕೊಂಡಿರುತ್ತಾರೆ. ಈ ರೀತಿ ಲಕ್ಷಾಂತರ ಪ್ರಕರಣಗಳು ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಇದರ ಜೊತೆಗೆ, exorbitant rate of interest, ಬಡ್ಡಿ ಹಾಕುವಂಥದ್ದು ಸಹ ಸರ್ಕಾರದ ಸುತ್ತೋಲೆಗೆ ಅನುಗುಣವಾಗಿಯಾಗಲಿ ಅಥವಾ ರಿಸರ್ವ್ ಬ್ಯಾಂಕ್‌ನ ಗೈಡ್‌ಲೈನ್ಸ್‌ಗೆ ಅನುಗುಣವಾಗಿ ಇರುವುದಿಲ್ಲ. ನಾವು ಬ್ಯಾಂಕುಗಳಿಗೆ ಹೌಸಿಂಗ್ ಲೋನ್ ತೆಗೆದುಕೊಳ್ಳುವುದಕ್ಕೆ ಹೋದರೆ 7-8-9%ಗೆ ಅವಕಾಶ ಇದೆ. ಆದರೆ ಖಾಸಗಿಯವರು ಯಾರು ಗೋಲ್ಡ್ ಲೋನ್ ಕೊಡುತ್ತಿದ್ದಾರೋ ಅವರು 15-16% exorbitant rate of interest ಹಾಕಿ ಮೋಸ ಮಾಡುತ್ತಿದ್ದಾರೆ. ಇದೂ ಒಂದು ರೀತಿಯ ಶೋಷಣೆಯಾಗಿದೆ. ಇನ್ನೊಂದು, tampering the pledged gold. ಚಿನ್ನವನ್ನು ಗಿರವಿ ಇಟ್ಟು ಅದನ್ನು

ಬಿಡಿಸಿಕೊಳ್ಳುವುದಕ್ಕೆ ಸಕಾಲದಲ್ಲಿ ದುಡ್ಡನ್ನು ಕಟ್ಟಿದರೆ, ಆತ ಇಟ್ಟಿದ್ದ 10 ಗ್ರಾಮ್ ಚಿನ್ನಕ್ಕೆ 8 ಗ್ರಾಂ ಅಷ್ಟೇ ವಾಪಸ್ಸು ಕೊಡುತ್ತಾರೆ. ವೇಸ್ಟೇಜ್ ಎಂದು ಲೆಕ್ಕ ಹಾಕಿ ಮೋಸ ಮಾಡುತ್ತಾರೆ. Tampering the pledged gold, ಇದೂ ಕೂಡ ಒಂದು ರೀತಿಯ ಮೋಸವಾಗಿದೆ. ಇನ್ನೊಂದು, illegal auction. ಈಗಾಗಲೇ ನಾನು ಹೇಳಿದಂತೆ, ಗ್ರಾಹಕರಿಗೆ ನೋಟಿಸ್ ಕೊಡುವುದಿಲ್ಲ, ಸಾಕಷ್ಟು ಸಮಯವನ್ನು ಕೊಡುವುದಿಲ್ಲ. ಒಂದು paper notification ಅಥವಾ ನೋಟಿಸ್ ಕೂಡ ಕೊಡುವುದಿಲ್ಲ. ಗ್ರಾಹಕ pledge ಮಾಡುವಾಗ ಅವನ ಬಳಿ ಮುಂಚೆಯೇ ಒಂದು ಸಹಿ ತೆಗೆದುಕೊಂಡು, ನೋಟಿಸ್ ಸರ್ವ್ ಆಗಿದೆ ಎಂದು, ಅದನ್ನು deemed service ಎಂದು ಮಾಡಿ, ಕಾನೂನುಬಾಹಿರವಾಗಿ ಹರಾಜು ಹಾಕುವಂತಹ ಪ್ರಕ್ರಿಯೆ ಮಾಡುತ್ತಾರೆ. ಮತ್ತೆ, collusion between employees and middlemen. ಯಾರು ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮಧ್ಯವರ್ತಿಗಳ ಮೂಲಕ ಹೋಗುತ್ತಾರೋ, ಅವರ ಜೊತೆ ಹೊಂದಾಣಿಕೆ ಮಾಡಿಕೊಂಡು, ಅವರಿಗೆ ಕಮಿಷನ್ ಕೊಟ್ಟು ಶೋಷಣೆ ಮಾಡುವಂತಹ ವ್ಯವಸ್ಥೆಯನ್ನು ಕೂಡ ಖಾಸಗಿ ಕಂಪನಿಗಳು ಮಾಡುತ್ತಿವೆ. ಇವತ್ತೇನು ಜನಸಾಮಾನ್ಯರಿಗೆ ಕರ್ನಾಟಕದಲ್ಲಿ ಚಿನ್ನದ ಸಾಲದ ಹೆಸರಿನಲ್ಲಿ ಆಗುತ್ತಿರುವಂತಹ ಶೋಷಣೆ ತಪ್ಪಿಸಬೇಕೆಂದು ನಾನು ಈ ಖಾಸಗಿ ವಿಧೇಯಕವನ್ನು ಪ್ರಸ್ತಾಪ ಮಾಡಿದ್ದೇನೆ. ಅವರ ಹಿತಕ್ಕೆ, ಅವರ ಸಂರಕ್ಷಣೆಗೆ ರಾಜ್ಯ ಸರ್ಕಾರ ಬರಬೇಕು. ಇಲ್ಲದೇ ಹೋದರೆ ಲಕ್ಷಾಂತರ ಕೆಳವರ್ಗದ ಜನ ಇದ್ದಾರೆ, ಶೋಷಿತ ಸಮುದಾಯದವರಿದ್ದಾರೆ ಅವರಿಗೆ ಅನ್ಯಾಯವಾಗುತ್ತದೆ. ಅವರ ಚಿನ್ನವನ್ನು ಇಟ್ಟುಕೊಂಡು ಖಾಸಗಿ ಕಂಪನಿಗಳು ಅವರಿಗೆ ಮೋಸ ಮಾಡುವಂಥದ್ದು ಮಾಡುತ್ತಿದ್ದಾರೆ. ಮಾನ್ಯ ಉಮಾಶ್ರೀಯವರು ಆಗಲೇ ಚರ್ಚೆ ಮಾಡುತ್ತಿದ್ದರು. 10 ಗ್ರಾಂ ಚಿನ್ನವನ್ನು ಅಡವಿಟ್ಟು ರೂ. 10,000 ಸಾಲ ತೆಗೆದುಕೊಂಡಿರುತ್ತಾನೆ. ಇವತ್ತಿನ ದರದಲ್ಲಿ ಆ ಚಿನ್ನಕ್ಕೆ ಒಂದು ಲಕ್ಷ ರೂಪಾಯಿಗೂ ಹೆಚ್ಚು ಬೆಲೆ ಇರುತ್ತದೆ. ಕನಿಷ್ಠ ಹರಾಜು ಹಾಕಿದರೂ ಗ್ರಾಹಕರ ಸಾಲ-ಬಡ್ಡಿ ಹಣವನ್ನು ಹಿಡಿದುಕೊಂಡರೂ ಮತ್ತೆ ಕಂಪನಿಯವರು ಗ್ರಾಹಕನಿಗೆ ಮಿಕ್ಕ ಹಣವನ್ನು ವಾಪಸ್ಸು ಕೊಡಬೇಕಾಗುತ್ತದೆ. ಆದರೆ ಅವರು ಅದನ್ನು ಮಾಡುತ್ತಿಲ್ಲ. Due service of notice ಇಲ್ಲ, ಸರಿಯಾದ valuation ಇಲ್ಲ, ಸರಿಯಾಗಿ ನೋಟಿಸ್ ಕೊಡುವುದಿಲ್ಲ, ಸರಿಯಾದ ಅವಕಾಶವಿಲ್ಲ. ಅವನ ಚಿನ್ನವನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ಸಂದರ್ಭದಲ್ಲಿ ದುಡ್ಡು ವಾಪಸ್ಸು ಕೊಡುವ ಪ್ರಯತ್ನ ಇಲ್ಲ. ಹಾಗಾಗಿ, ಸಾರ್ವಜನಿಕ ಹಿತದೃಷ್ಟಿಯಿಂದ ಈ ಖಾಸಗಿ ವಿಧೇಯಕದ ಅವಶ್ಯಕತೆ ಇದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಮಸೂದೆಯನ್ನು ಎಲ್ಲಾ ಮಾನ್ಯ ಸದಸ್ಯರು ಅನುಮೋದನೆ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಸದನ ಇದನ್ನು ಅನುಮೋದಿಸಿದೆ. ಈ ಕುರಿತು ಚರ್ಚೆ ಮಾಡಲು ಮುಂದಿನ ವಾರ ದಿನಾಂಕವನ್ನು ಮತ್ತು ಅವಧಿಯನ್ನು ಫಿಕ್ಸ್ ಮಾಡುತ್ತೇನೆ. ಆಗ ಇತರ ಸದಸ್ಯರು ಇದರ ಬಗ್ಗೆ ಮಾತನಾಡಬಹುದು.

**7. ವಿತ್ತೀಯ ಕಾರ್ಯಕಲಾಪ**

**2026-27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಸಾಮಾನ್ಯ ಚರ್ಚೆ**

**ಶ್ರೀ ಎಸ್.ಕೇಶವ್ ಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು 17ನೇ ಆಯವ್ಯಯವನ್ನು ಮಂಡಿಸಿದ್ದಾರೆ. ಅವರಿಗೆ ಅಭಿನಂದನೆಗಳು. ತಮ್ಮ 78ನೇ ವಯಸ್ಸಿನಲ್ಲೂ 3 ಗಂಟೆ 31 ನಿಮಿಷಗಳ ಕಾಲ ನಿರಂತರವಾಗಿ ನಿಂತು ಅದನ್ನು ಓದಿದ್ದಾರೆ, ಅಭಿನಂದನೆಗಳು.

(ಮುಂದು)

(380) 13-03-2026 12.40 ಡಿಎಸ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್ ಎಸ್ (ಮುಂದು):-**

ಅವರಿಗೆ ಕುಳಿತುಕೊಳ್ಳಿ ಎಂದು ಹೇಳಿದಾಗಲೂ ಅದನ್ನು ನಿರಾಕರಿಸಿ, ನಾನು ನಿಂತುಕೊಳ್ಳುವಷ್ಟು ಶಕ್ತಿವಂತ ಎಂದು ಸಂದೇಶವನ್ನು ರಾಜ್ಯಕ್ಕೆ ಮತ್ತು ಪಕ್ಷಕ್ಕೆ ಕೊಟ್ಟಂಥ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಮಾನ್ಯ ಮಂಜುನಾಥ ಭಂಡಾರಿಯವರು ಪೀಠವನ್ನು ಅಲಂಕರಿಸಿದರು)**

ಒಂದು ಬಜೆಟ್ ಎಂದಾಗ ನನಗನಿಸುತ್ತದೆ, ವಿಶೇಷವಾಗಿ ಕರ್ನಾಟಕ ಕೃಷಿಗೆ ಹೆಸರಾದಂತಹ ರಾಜ್ಯ. ಕರ್ನಾಟಕದ ಕೃಷಿಯನ್ನು ನೋಡಿದಾಗ 3,000 ಕ್ಕಿಂತ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವಂತಹ ಸಂಗತಿಯನ್ನು ನಾವು ಓದುತ್ತಲೇ ಇದ್ದೇವೆ. ಇಡೀ ದೇಶದಲ್ಲಿ ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲಿದೆ. ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಹಾಗೆಂದು ನಾವು ನಮ್ಮನ್ನು ಸಮಾಧಾನ ಮಾಡಿಕೊಳ್ಳುವಂಥದ್ದಲ್ಲ. ಆರ್ಥಿಕವಾಗಿಯೂ ಕೂಡ ಕರ್ನಾಟಕ ಎರಡನೇ ಸ್ಥಾನದಲ್ಲಿದೆ, ಮಹಾರಾಷ್ಟ್ರ ಮೊದಲನೇ ಸ್ಥಾನದಲ್ಲೇ ಇದೆ. ಆದರೆ, ಆತ್ಮಹತ್ಯೆ ಎನ್ನುವಂಥದ್ದು ತುಂಬಾ ಗಂಭೀರವಾದ ವಿಚಾರವಾಗಿದೆ. ಈ ಆತ್ಮಹತ್ಯೆಗೆ ಮೂಲ ಕಾರಣಗಳೇನು, ರೈತನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಸಮಸ್ಯೆ ಏನಿದೆ, ಸಮಸ್ಯೆಯ ಮೂಲಕ್ಕೆ ಹೋಗಿ ನಾವು ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವ ಸಂಗತಿಯನ್ನು ಕರ್ನಾಟಕ ರಾಜ್ಯ ಸರ್ಕಾರ ಮಾಡಬೇಕಾಗಿತ್ತು. ಬಜೆಟ್‌ನಲ್ಲಿ ರೈತನನ್ನು ಉದ್ದೇಶಿಸಿ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರು ರೈತರ ಸಮಸ್ಯೆಯನ್ನು ಆಮೂಲಾಗ್ರವಾಗಿ ಬಗೆಹರಿಸುವಂತಹ ನಿಟ್ಟಿನಲ್ಲಿ ಬೆಳಕನ್ನು ಚೆಲ್ಲಲಿಲ್ಲ. ರೈತರಿಗೆ ಕೊಡುವಂತಹ ಯೋಜನೆಗಳಲ್ಲಿ ಅಲ್ಲೊಂದು ಇಲ್ಲೊಂದು ಕೊಡುತ್ತಾ ಹೋದರೂ ಕೂಡ ಅದನ್ನು ಒಂದು ಕ್ಷೇತ್ರವಾಗಿ ಅಂದರೆ, ರೈತರಿಗೆ ವಿಶೇಷವಾದಂತಹ ಗಮನ ಕೊಡುತ್ತಿಲ್ಲ. ಹಿಂದೆ ಹೇಗೆ ಮಾನ್ಯ ಯಡಿಯೂರಪ್ಪನವರು ರೈತರಿಗೆ ಒಂದು ವಿಶೇಷ

ಬಜೆಟ್ ಅನ್ನು ಕೊಟ್ಟಿದ್ದಾರೆಯೋ, ಆ ರೀತಿ ಈ ಬಾರಿ ಬಂದಿರುವುದರಲ್ಲಿ ಮೂರನೇ ವರ್ಷದ ಬಜೆಟ್ ಅನ್ನು ಅವರು ಮಂಡಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರ ಸಮಸ್ಯೆಯನ್ನು ಆಮೂಲಾಗ್ರವಾಗಿ ಪರಿಹರಿಸುತ್ತೇನೆ ಎನ್ನುವ ನಿಟ್ಟಿನಲ್ಲಿ ಅವರು ಇದರಲ್ಲಿ ಗಮನ ಕೊಟ್ಟಿಲ್ಲ. ಈ ರಾಜ್ಯದಲ್ಲಿ ಒಟ್ಟು 37 ಲಕ್ಷ ರೈತರಿಗೆ 28,000 ಕೋಟಿ ರೂಪಾಯಿಗಳಷ್ಟು ಶೂನ್ಯ ಬಡ್ಡಿ ದರದಲ್ಲಿ ಕೊಟ್ಟಿದ್ದಾರೆ. ಆದರೆ ಈ ಹಣದಲ್ಲಿ ಶೇಕಡ 40.37 ರಷ್ಟು ಮಾತ್ರ ತಲುಪಿದೆ. ಉಳಿದಂತಹ ಶೇಕಡ 60 ರಷ್ಟು ಅವರ ಕೈಗೆ ಏಕೆ ತಲುಪಿಲ್ಲ? ಅಂದರೆ, ಹಣವನ್ನು ನಿರ್ಧಾರ ಮಾಡುವುದು ಮುಖ್ಯವಲ್ಲ. ಆ ಹಣ ನೂರಕ್ಕೆ ನೂರು ಅವರ ಕೈಗೆ ಹೋಗಿದೆಯೇ ಎಂದು ನೋಡುವುದು ಕೂಡ ಬಜೆಟ್ ಮಂಡಿಸುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಜವಾಬ್ದಾರಿ ಇರುತ್ತದೆ.

ಕಬ್ಬು ಬೆಳೆಗಾರರಿಗೆ ಸರ್ಕಾರ ವಿಶೇಷವಾದಂತಹ ಧನವನ್ನು ಕೊಡುತ್ತೇವೆ, ಕಾರ್ಖಾನೆಗಳ ಜೊತೆ ಸೇರಿಕೊಳ್ಳುತ್ತೇವೆ, ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದರು. ಆದರೆ, ಇಲ್ಲಿಯವರೆವಿಗೂ ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಗೊಂಡಿಲ್ಲ. ಮೆಕ್ಕೆಜೋಳಕ್ಕೆ 2,004 ರೂಪಾಯಿಗಳ ಕನಿಷ್ಠ ಬೆಂಬಲ ಬೆಲೆ ಕೊಡುತ್ತೇವೆಂದು ಹೇಳಿದ್ದರು, ಆದರೆ ಯಾವ ಸಂದರ್ಭದಲ್ಲಿ ಅವುಗಳನ್ನು ಕೊಂಡುಕೊಳ್ಳುವಂತಹ ಕೇಂದ್ರಗಳನ್ನು ತೆರೆಯಬೇಕಾಗಿತ್ತೋ, ಆ ಸಂದರ್ಭದಲ್ಲಿ ಅವುಗಳನ್ನು ತೆರೆಯಲಿಲ್ಲ. ಮೆಕ್ಕೆಜೋಳದ ಸಮಸ್ಯೆ ತೀವ್ರವಾಯಿತು ಎಂದಾಗ, ಹಾಹಾಕಾರವಾದ ನಂತರ ಸರ್ಕಾರಕ್ಕೆ ಕಣ್ತೆರಿಯಿತು ಏಕೆ? ಹಾಗೆಯೇ ಹೆಸರುಕಾಳನ್ನು ತೆಗೆದುಕೊಳ್ಳಬೇಕು ಎಂದಾಗ ಅದರ ಗುಣಮಟ್ಟ ಸರಿಯಿಲ್ಲವೆಂದರು, ನಾನು ಹೇಳುವಂಥದ್ದು ಗುಣಮಟ್ಟ ಸರಿಯಿಲ್ಲ ಎಂದರೆ ಸರ್ಕಾರ ಸರಿಯಾದಂತಹ ಸಂದರ್ಭದಲ್ಲಿ ತೆಗೆದುಕೊಳ್ಳಬೇಕು, ಅದಕ್ಕೆ ಪರಿಹಾರ ಏನು ಕೊಡಬೇಕೆಂದು ಯೋಚನೆ ಮಾಡಬೇಕಾಗಿತ್ತು. ಅದರ ಬಗ್ಗೆ ಯೋಚಿಸಲಿಲ್ಲ.

ರಸಗೊಬ್ಬರದ ಸಮಸ್ಯೆ ತುಂಬಾ ದೊಡ್ಡದು. ಕೇಂದ್ರ ಸರ್ಕಾರ ರಸಗೊಬ್ಬರಕ್ಕೆ ಬೆಂಬಲ ಬೆಲೆಯನ್ನು ಕೊಡುತ್ತಿದೆ, ಯೂರಿಯಾ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 2,400 ರೂಪಾಯಿಗಳವೆ. ಆದರೆ ಆಂತರಿಕ ಮಾರುಕಟ್ಟೆಯಲ್ಲಿ 300 ರೂಪಾಯಿಗಳಿಗೆ ಸಿಗುತ್ತಿದೆ. 2,100 ರೂಪಾಯಿಗಳ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. D.A.P (Diammonium Phosphate) ಬೆಲೆ 1,400 ರೂಪಾಯಿಗಳಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 2,700 ರೂಪಾಯಿಗಳಿದೆ. ಇದರ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕೊಡುತ್ತಿದೆ. ಇದು ತುಂಬಾ ದೊಡ್ಡ ಮೊತ್ತ. ಇದನ್ನು ಸರ್ಕಾರ ಸದ್ವಿನಿಯೋಗ ಮಾಡಿಕೊಳ್ಳಬೇಕಲ್ಲವೇ?

ಹಾಗೆಯೇ ಕಳೆದ ಮೂರು ವರ್ಷಗಳಿಂದ ನ್ಯಾನೋ ಯೂರಿಯಾವನ್ನು ಬಳಸಬೇಕೆಂದು ಕೇಂದ್ರ ಸರ್ಕಾರ ಹೇಳುತ್ತಿದೆ. ರಾಜ್ಯ ಸರ್ಕಾರ ನ್ಯಾನೋ ಯೂರಿಯಾವನ್ನು ಬಳಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದೆ? ಯೂರಿಯಾ ಸಿಗುತ್ತಿಲ್ಲವೆಂದು ರಾಜ್ಯದಲ್ಲಿ ದೊಡ್ಡ ಗಲಾಟೆ ಪ್ರಾರಂಭವಾಯಿತು. ಆಗ ಸರ್ಕಾರದವರು ನಮ್ಮ ಹತ್ತಿರ stock ಇದೆ ಎಂದು ಹೇಳುತ್ತಾರೆ. ಅವರು ಮೊದಲು opening stock 1.7 ಲಕ್ಷ ಟನ್ ನಮ್ಮ ಹತ್ತಿರ ದಾಸ್ತಾನಿದೆ ಎಂದು ಹೇಳುತ್ತಾರೆ. ಹಾಗೆಯೇ 5.24 ಲಕ್ಷ ಟನ್ ಕೇಂದ್ರದಿಂದ ಬಂದಿದೆ,

ಯಾವುದೇ ರೀತಿಯಾದ ಕೊರತೆ ಇಲ್ಲ ಎಂದು ಹೇಳುತ್ತಾರೆ. ಆದರೆ ನಂತರ ಸಮಸ್ಯೆ ಉಲ್ಬಣವಾದಾಗ ಕೇಂದ್ರ ಸರ್ಕಾರವನ್ನು ಹೊಣೆಯಾಗಿಸುತ್ತಾರೆ, ಈ ರೀತಿ ಏಕೆ? ಮಳೆ ಜಾಸ್ತಿ ಬಂದಿದೆ, ರೈತರು ಎಲ್ಲಾ ಕಡೆ ಬಿತ್ತನೆ ಬೀಜವನ್ನು ಬಿತ್ತಿದ್ದಾರೆ, ಬೆಳೆ ಬೆಳೆದಿದ್ದಾರೆ, ಅವರಿಗೆ ಯೂರಿಯಾ ಬೇಕಾಗುತ್ತದೆ. ಇಡೀ ಕರ್ನಾಟಕದಲ್ಲಿ ಒಂದೇ ಬಾರಿಗೆ ಅವರೇನು ಬೆಳೆ ಬೆಳೆಯುವುದಿಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಸಮಯದಲ್ಲಿ ಬೆಳೆ ಬೆಳೆಯುತ್ತಾರೆ. ಬೆಳೆಯುವಂತಹ ಸಂದರ್ಭದಲ್ಲಿ ಎಲ್ಲಿ stock ಇಡಬೇಕು ಎಂದು ನಮ್ಮ ಹತ್ತಿರ ಒಂದು road map ಇಲ್ಲವೇ? stock ಅನ್ನು ಆ ರೀತಿ move ಮಾಡಬೇಕಲ್ಲವೇ? ರಾಜ್ಯ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಈ ರೀತಿ blame game ಮಾಡಬಾರದು. ಹಾಗೆಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ fertilizer ಕೊರತೆ ಇದೆ. ರಷ್ಯಾ ಮತ್ತು ಉಕ್ರೇನ್ ದೇಶಗಳ ನಡುವೆ ಯುದ್ಧ ನಡೆಯುತ್ತಿದೆ. ಉಕ್ರೇನ್‌ನಲ್ಲಿ fertilizer ತಯಾರಾಗುವಂತಹ ಜಾಗವೇನಿದೆ, ಆ ಜಾಗದಲ್ಲಿ ಸಾರಿಗೆ ವ್ಯವಸ್ಥೆಯ ಸಮಸ್ಯೆ ಇದೆ. ಅದಕ್ಕಾಗಿಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಜಾಸ್ತಿಯಾಗಿರುವಂಥದ್ದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಲೆ ಜಾಸ್ತಿಯಾಗಿ ಅದು ಸಿಗುವುದಿಲ್ಲ ಎನ್ನುವಂತಹ ಸಂದರ್ಭದಲ್ಲೂ ಕೇಂದ್ರ ಸರ್ಕಾರ ಆ ರಸಗೊಬ್ಬರವನ್ನು ಕೊಡುತ್ತಿದೆ ಎನ್ನುವಾಗ ರಾಜ್ಯ ಸರ್ಕಾರ ಜವಾಬ್ದಾರಿಯಿಂದ ವರ್ತಿಸಬೇಕಲ್ಲವೇ? ರೈತನ ಬೆಂಬಲಕ್ಕೆ ಸಮಯಕ್ಕೆ ಸರಿಯಾಗಿ ಬಲವಾಗಿ ನಿಂತುಕೊಳ್ಳಬೇಕಾಗಿತ್ತು. ಆದರೆ ಅದನ್ನು ರಾಜ್ಯ ಸರ್ಕಾರ ಇನ್ನಷ್ಟು ಜವಾಬ್ದಾರಿಯುತವಾಗಿ ಮಾಡಲಿಲ್ಲ ಏಕೆ?

"ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ"ಗೆ ಕೇವಲ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಷ್ಟು ಸಾಕೇ? 'ಕೃಷಿ ವಿಸ್ತಾರ ಯೋಜನೆ' ಎನ್ನುವುದು ಒಂದು ಮಹಾನ್ ಕಲ್ಪನೆಯಾಗಿದೆ. ಕೃಷಿಯನ್ನು ವಿಸ್ತರಿಸುವುದು ಹೇಗೆ; ಸಾವಯವ ಕೃಷಿಯೊಳಗೆ ತರುವುದು ಹೇಗೆ; ನಮ್ಮ ಪಾರಂಪರಿಕ ಕೃಷಿಯನ್ನು ಬೆಳೆಸುವುದು ಹೇಗೆ? ಇದಕ್ಕೆ ಅನುದಾನವನ್ನು ಇನ್ನೂ ಜಾಸ್ತಿ ಕೊಡಬೇಕಾಗಿತ್ತು. "ಮಿಲೆಟ್ ಹಬ್" ಮಾಡುತ್ತೇವೆಂದು ಹೇಳಿದ್ದಾರೆ. "ಮಿಲೆಟ್ ಹಬ್"ಗೆ ಹಣ ಎಲ್ಲಿಟ್ಟಿದ್ದಾರೆ? "ಮಿಲೆಟ್ ಹಬ್" ಕಾರ್ಯಕ್ರಮದ ಆಹ್ವಾನ ಪತ್ರಿಕೆ ಸದನದಲ್ಲಿ ಬಂದಿದೆ. "ಮಿಲೆಟ್ ಹಬ್" ಮಾಡುತ್ತೇವೆ ಎಂದು ಹೇಳಿದರೆ ಸಾಕೇ? "ಮಿಲೆಟ್ ಹಬ್" ಗೆ ಬಜೆಟ್‌ನಲ್ಲಿ ಇಷ್ಟು ಹಣ ಇಟ್ಟಿದ್ದೇವೆ ಎಂದು ಹೇಳುವುದು ಬೇಡವೇ? ಈ ಯೋಜನೆ ಚೆನ್ನಾಗಿದೆ. ಆ ಯೋಜನೆಯನ್ನು ಜಾರಿಗೊಳಿಸುವುದಕ್ಕೆ road map ಏನು? ಹಣ ಎಲ್ಲಿದೆ? ಹಣ ಇಲ್ಲ. ಯೋಜನೆಯನ್ನು ಘೋಷಣೆ ಮಾಡಿದರೆ ಆಗುವುದಿಲ್ಲ, ಅದನ್ನು ಹೇಗೆ ಜಾರಿಗೆ ತರುತ್ತೇವೆ, ಅದಕ್ಕೆ ಎಲ್ಲಿ ಎಷ್ಟು ಹಣ ಇಟ್ಟಿದ್ದೇವೆ ಎನ್ನುವುದರ ಬಗ್ಗೆ ವಿವರಣೆ ಕೊಡಬೇಕು.

"ರೈತರಿಗೆ ಉತ್ತಮ ಗುಣಮಟ್ಟದ ಕೃಷಿ ಪರಿಕರಗಳನ್ನು ಕೈಗೆಟುಕುವ ದರದಲ್ಲಿ ಲಭ್ಯವಾಗಿಸುವುದರ ಜೊತೆಗೆ ಮಾರುಕಟ್ಟೆಯ ಅನಿಶ್ಚಿತತೆಯನ್ನು ನಿವಾರಿಸುವ ಉದ್ದೇಶದಿಂದ ಬಿತ್ತನೆ ಬೀಜಗಳು, ಕೀಟನಾಶಕಗಳು, ರಸಗೊಬ್ಬರಗಳು ಹಾಗೂ ಕೃಷಿ ಯಂತ್ರೋಪಕರಣಗಳು ಒಂದೇ ಸೂರಿನಡಿ ದೊರಕಿಸಲು ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ M.S.I.L ವತಿಯಿಂದ ರೈತ ಮಾಲ್‌ಗಳನ್ನು ಸ್ಥಾಪಿಸಲಾಗುವುದು"

ಎಂದು ಹೇಳಿದ್ದಾರೆ. ಆದರೆ M.S.I.Lಗೆ ಆ ತಾಕತ್ತು ಇದೆಯೇ? ಈ ರೀತಿ ರೈತರಿಗೆ ಬೇಕಾದಂತಹ ಸವಲತ್ತುಗಳನ್ನು ಕೊಡುವಷ್ಟು ಶಕ್ತಿಯುತವಾಗಿ ಇದೆಯೇ ಎಂಬುದನ್ನು ಯೋಚನೆ ಮಾಡಬೇಕು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕನ್ನು ಸಂಪೂರ್ಣ ಸಾವಯವ ಕೃಷಿ ತಾಲ್ಲೂಕನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಬಜೆಟ್ ಪುಸ್ತಕವನ್ನು ತೆಗೆದು ನೋಡಿದಾಗ ಸಾವಯವ ಕೃಷಿಗೆ ಹಣವನ್ನೇ ಇಟ್ಟಿಲ್ಲ. ಅದರಲ್ಲಿ ಕಳೆದ ವರ್ಷ ಇಟ್ಟಿರುವ ಹಣದಲ್ಲಿ ಪೂರ್ತಿಯಾಗಿ ಶೂನ್ಯವನ್ನು ತೋರಿಸುತ್ತಿದೆ. ಸಾವಯವ ಕೃಷಿಯನ್ನು ಬೆಳೆಸುತ್ತೇವೆ, ಪರ್ಯಾಯವಾಗಿ ರೈತರಿಗೆ ನಾವು ಒಂದು ಅವಕಾಶವನ್ನು ಮಾಡಿಕೊಡುತ್ತೇವೆ ಎಂದು ಹೇಳಿದಾಗ ಅದಕ್ಕೆ ಜಾಗ ಎಲ್ಲಿದೆ? ಜಾಗ ಇಲ್ಲ.

ವಿಬಿ–ಜಿ ರಾಮ್ ಜಿ ಬಗ್ಗೆ ಮತ್ತು ಮನರೇಗಾ ಬಗ್ಗೆ ಇತ್ತೀಚೆಗೆ ದೊಡ್ಡ ವಾದವೇ ಆಯಿತು . ನಾನು ಅಂದುಕೊಂಡಿದ್ದೆ, ರಾಜ್ಯ ಸರ್ಕಾರ ಮನರೇಗಾವನ್ನು ಬಿಟ್ಟು ಕೊಡುವುದಿಲ್ಲ, ವಿಬಿ–ಜಿ ರಾಮ್ ಜಿ ಯಲ್ಲಿ ಏನು ಬದಲಾವಣೆಗಳನ್ನು ತರಬೇಕು ಎಂದು ಕೇಂದ್ರ ಸರ್ಕಾರದ ಜೊತೆ ಮಾತನಾಡಿದರೆ, ಅದಕ್ಕೆ ಅನುಗುಣವಾಗಿ ಹಣವನ್ನು ಒದಗಿಸುತ್ತದೆ, ಏಕೆಂದರೆ ನಾವು ವಿವರವಾಗಿ ಚರ್ಚೆ ಮಾಡಿದ್ದೆವು. ಸರ್ಕಾರದಿಂದ ಬೇರೆ ಬೇರೆ ಯೋಜನೆಗಳು ಏನು ಬರುತ್ತಿದ್ದವು, ಅದರ ಒಟ್ಟು ಕ್ರೋಢೀಕರಣವನ್ನು ತೆಗೆದುಕೊಂಡು ಆ ಒಂದು ಯೋಜನೆಗೆ ನಿಮ್ಮಿಂದ ಎಷ್ಟು ಖರ್ಚಾಗುತ್ತದೆ, ನಾಲ್ಕು ಸಾವಿರ ಕೋಟಿ, ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳು ಬೇಕೆ ಎಂದು ಯೋಚನೆ ಮಾಡಿ ಇಡಬೇಕು. ಏಕೆಂದರೆ, ಶೇಕಡ 60 ರಷ್ಟು ಕೇಂದ್ರದಿಂದ ಬರುತ್ತದೆ, ಆದರೆ ಕೇಂದ್ರದ ಜೊತೆ ಜಗಳ ಏಕೆ? ಕೇಂದ್ರದ ಯೋಜನೆಗಳ ಬಗ್ಗೆ ತಾತ್ಸಾರ ಏಕೆ? ಅವರಿಗೆ ಪತ್ರ ಬರೆಯಬಹುದಾಗಿತ್ತು, ಅವರ ಜೊತೆಯಲ್ಲಿ ಸಂವಾದ ಮಾಡಬಹುದಾಗಿತ್ತು. ನಿಮ್ಮ ಯೋಜನೆಗಳಲ್ಲಿ ಈ ಬದಲಾವಣೆಗಳನ್ನು ಮಾಡಿಕೊಂಡರೆ ನಮಗೆ ಅನುಕೂಲವಾಗುತ್ತದೆ ಎಂದು ಹೇಳಬಹುದಾಗಿತ್ತು. ರೈತರಿಗೆ ಅನುಕೂಲವಾಗುತ್ತಿದೆ, ಅದರಲ್ಲಿ time frame ನಲ್ಲಿ ಹಣ ಸಿಗುತ್ತಿದೆ ಮತ್ತು real time ನಲ್ಲಿ ಅದನ್ನು ಮಾನಿಟರ್ ಮಾಡುತ್ತಿದ್ದಾರೆ, ಎಲ್ಲವನ್ನು ಕೂಡ ಗೂಗಲ್ ಮ್ಯಾಪ್‌ನಲ್ಲಿ ಅದನ್ನು ಟ್ಯಾಗ್ ಮಾಡಬೇಕಾಗುತ್ತದೆ. ಹೀಗಾಗಿ ಯಾವುದೇ ರೀತಿಯಾದ ಶೋಷಣೆಗೆ ರೈತ ಒಳಗಾಗುವುದಿಲ್ಲ ಎನ್ನುವಂತಹ ಎಲ್ಲಾ ಸಂಗತಿಗಳು ಇದ್ದಾಗ್ಯೂ ಸಹ ಸರ್ಕಾರ ಆ ಯೋಜನೆಯನ್ನು ಕೈಬಿಟ್ಟಿದ್ದು ಏಕೆ?

ಅದೇರೀತಿ "ಮಹಾತ್ಮ ಗಾಂಧಿ ಜನ ಶಿಕ್ಷಣ ಕೇಂದ್ರ"ಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ತುಂಬಾ ಸಂತೋಷ ಆದರೆ, ಈ ಮಹಾತ್ಮ ಗಾಂಧೀಜಿ ಜನ ಶಿಕ್ಷಣ ಯೋಜನೆಯನ್ನು ಜಾರಿಗೊಳಸುವುದಕ್ಕೆ ಸಂಬಂಧಿಸಿದಂತೆ ಯಾವ ರೀತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂಬುದು ಗೊತ್ತಿಲ್ಲ. ಹೆಂಡವನ್ನು ಕುಡಿಯಬಾರದು ಎಂದು ಮಹಾತ್ಮ ಗಾಂಧೀಜಿಯವರು ಹೇಳಿರುವುದರಿಂದ ಅಲ್ಲಿ ಹೆಂಡ ಕುಡಿಯುವುದನ್ನು ಬಿಡಿಸುತ್ತಾರೆಯೇ? ಅದನ್ನು ಬಿಡುವುದು ಹೇಗೆ ಎಂದು ಅಲ್ಲಿ ಹೇಳಿಕೊಡುತ್ತಾರೆಯೇ? ಹಾಗೆಯೇ ಹಸುವನ್ನು

ಸಾಕಬೇಕು, ಹಸುವನ್ನು ಕೊಲ್ಲಬಾರದು, ಅದರಲ್ಲಿ ಬರುವಂತಹ ಗೊಬ್ಬರವನ್ನು ಸಾವಯವ ಕೃಷಿಗೆ ಉಪಯೋಗಿಸಬೇಕು ಎಂಬುದನ್ನು ಹೇಳಿಕೊಡುತ್ತಾರೆಯೇ?

(ಮುಂದು)

(381) 13/03/2026 12:50 ಎಸ್‌ಪಿಆರ್/ಎಂಡಿ (ವೈಸ್ ಛೇರ್ಮನ್ ರವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್ ಎಸ್. (ಮುಂದು):-**

ಹಾಗೆಯೇ ಹಸಿರನ್ನು ಬೆಳೆಸಬೇಕು ಹಾಗೂ ಪರಿಸರವನ್ನು ಉಳಿಸಬೇಕು ಎನ್ನುವುದನ್ನು ಹೇಳುತ್ತೀರಾ? ಸ್ವಾವಲಂಬಿ ಮತ್ತು ಸ್ವಚ್ಛ ಗ್ರಾಮಗಳನ್ನು ನಿರ್ಮಾಣ ಮಾಡಬೇಕು ಎನ್ನುವುದನ್ನು ಅಲ್ಲಿ ಹೇಳುತ್ತೀರಾ? ಮನೆಯಲ್ಲಿ ಮಡದಿ, ಮಕ್ಕಳನ್ನು ಹೊಡೆಯಬಾರದು, ಇವರುಗಳನ್ನು ಚೆನ್ನಾಗಿ ಹಾಗೂ ಜವಾಬ್ದಾರಿಯುತವಾಗಿ ನೋಡಿಕೊಳ್ಳಬೇಕು. ಇಂತಹವುಗಳನ್ನು ಮಹಾತ್ಮಾ ಗಾಂಧಿ ಶಿಕ್ಷಣ ಕೇಂದ್ರಗಳಲ್ಲಿ ಹೇಳಿಕೊಡುತ್ತೀರಾ? ಇದರ ಬಗ್ಗೆ ಅಲ್ಲ ವಿವರಗಳಿಲ್ಲ. ರಾಜ್ಯದ ಕೇವಲ ಕೆಲವಾರು ಜಿಲ್ಲೆಗಳಲ್ಲಿ ಮಾತ್ರವೇ ಯೋಜನೆಗಳನ್ನು ಮಾಡುತ್ತೇವೆ ಎಂದು ಹೇಳಿದರೆ, ರಾಜ್ಯದಾದ್ಯಂತ ಏಕೆ ಇಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಯೋಜನೆಯ ವಿವರಗಳನ್ನು ಏಕೆ ನೀಡಿಲ್ಲ? ಪ್ರತಿಯೊಂದು ಪಂಚಾಯಿತಿಗಳಿಗೂ ಮಹಾತ್ಮಾ ಗಾಂಧಿಜಿಯವರ ಹೆಸರನ್ನು ಇಡುತ್ತೀರಿ ಎಂದು ತಿಳಿಸಿದ್ದು, ಇದು ಸಂತೋಷದ ವಿಚಾರ. ಈ ರೀತಿಯ ಹೆಸರನ್ನು ಇಡಬೇಕು. ಆದರೆ, ನಾನು ಕೇಳುವುದೇನೆಂದರೆ, ರಾಮನಗರದಲ್ಲಿರುವ ಪಂಚಾಯಿತಿಗೆ ರಾಮನಗರ ಮಹಾತ್ಮಾ ಗಾಂಧಿಜಿ ಗ್ರಾಮ ಪಂಚಾಯಿತಿ ಎಂಬುದಾಗಿ ಹೆಸರನ್ನು ಇಡುತ್ತೀರಾ? ಅದೇ ರೀತಿಯಾಗಿ ಚನ್ನಪಟ್ಟಣದ ಗ್ರಾಮ ಪಂಚಾಯಿತಿಗೂ ಈ ರೀತಿಯ ಹೆಸರನ್ನು ಇಡುತ್ತೀರಾ? ಎಲ್ಲಾ ಗ್ರಾಮ ಪಂಚಾಯಿತಿಗಳೂ ಮಹಾತ್ಮಾ ಗಾಂಧಿ ಗ್ರಾಮ ಪಂಚಾಯಿತಿಗಳಾದರೆ, ಅದನ್ನು ಗುರ್ತಿಸುವುದು ಹೇಗೆ ಎನ್ನುವುದರ ಬಗ್ಗೆ ವಿವರಣೆ ಬೇಕು. ಈ ಕುರಿತು ಸರ್ಕಾರ ಯೋಚನೆ ಮಾಡಬೇಕು. ಮಹಾತ್ಮಾ ಗಾಂಧಿಯವರ ಹೆಸರನ್ನು MGNREGA (Mahatma Gandhi National Rural Employment Guarantee Act) ಯೋಜನೆಯಲ್ಲಿ ಬದಲಾಯಿಸಿದ್ದಾರೆ ಎನ್ನುವ ಕಾರಣಕ್ಕಾಗಿಯೇ ಸೆಡ್ಡು ಹೊಡೆದು ಇನ್ನೊಂದು ಯಾವುದೋ ಹೆಸರನ್ನು ಇಡುತ್ತೇನೆ ಎಂದು ಹೇಳಿದರೆ, ಅದು ತಪ್ಪಾಗುತ್ತದೆ. ಆ ರೀತಿಯ ಯೋಚನೆಗಳನ್ನು ಸರ್ಕಾರ ಮಾಡಬಾರದು. ಒಂದು ವೇಳೆ, ಈ ರೀತಿಯಾಗಿ ಮಾಡಿದರೆ, ಅಲ್ಲಿರುವ ಸ್ಥಾನೀಯ identity ತೊಂದರೆ ಬರುತ್ತದೆ. ಹೀಗಾಗಿ ಸರ್ಕಾರ ಇದರ ಬಗೆ ಯೋಚನೆ ಮಾಡಬೇಕು. ಈಗ ಮಂಡಿಸಿರುವ ಆಯವ್ಯಯದಲ್ಲಿ ಸಮಗ್ರವಾದ ಕೃಷಿ ನೀತಿಯನ್ನು ಸರ್ಕಾರವು ಯೋಚನೆ ಮಾಡಿಲ್ಲ. ರೈತನಿಗೆ ಬೇಕಾದ ಬೀಜ, ರಸಗೊಬ್ಬರಗಳಿಂದ ಆದಿಯಾಗಿ ತಾನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗುವ

ರೀತಿಯಿಂದ ಹಿಡಿದು ಸಮಗ್ರವಾಗಿ ಅವರ ಬದುಕನ್ನು ಸುಧಾರಿಸುವಂತಹ 3,000 ಜನ ರೈತರನ್ನು ಕಣ್ಣು ಮುಂದೆ ಇಟ್ಟುಕೊಂಡು, ಸರ್ಕಾರವು ಒಂದು ದೊಡ್ಡ ಜಾಹಿರಾತನ್ನು ನೀಡಬೇಕಾಗಿತ್ತು. ಇದು ಯಾವ ರೀತಿಯಾಗಿ ಎಂದರೆ, "ರೈತರೇ, ನಿಮಗೆ ಯಾವುದೇ ರೀತಿಯಾದ ಸಮಸ್ಯೆ ಇರಲಿ, ಅದಕ್ಕೆ ನಾವು ಇದ್ದೇವೆ , ಇದಕ್ಕಾಗಿ ಸಹಾಯವಾಣಿಗಳಿವೆ; ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ನಮ್ಮ ಅಧಿಕಾರಿಗಳಿದ್ದಾರೆ; ನಮ್ಮದೇ ಆದ ದೊಡ್ಡ ಪಡೆ ಇದೆ, ಇವರನ್ನು ಸಂಪರ್ಕ ಮಾಡಿ" ಎಂಬುದಾಗಿ ಮಾಡಬೇಕಾಗಿತ್ತು. ಆದರೆ, ಸರ್ಕಾರವು ಈ ರೀತಿಯಾಗಿ ಮಾಡಲಿಲ್ಲ. ನಾನು ಹೇಳುವುದು ಏನೆಂದರೆ, ವಿ.ಬಿ.ಜಿ. ರಾಮ್ ಜಿ ಯೋಜನೆಯನ್ನು ವಿರೋಧಿಸುವಾಗ, ರಾಜ್ಯ ಸರ್ಕಾರವು ದೊಡ್ಡ ದೊಡ್ಡ ಜಾಹಿರಾತುಗಳನ್ನು ಕೊಟ್ಟಿತ್ತು. ಅಂದರೆ, ಕಣ್ಣು ಮುಂದೆ ರೈತರ ಸಾವನ್ನು ಕಂಡಾಗ, ಸರ್ಕಾರವು ಜಾಹಿರಾತನ್ನು ನೀಡಬೇಕಲ್ಲವೇ? "ರೈತರೇ ಸಾಯಬೇಡಿ" ಎಂಬುದಾಗಿ ಕೇವಲ ಒಂದೇ ಒಂದು ಜಾಹಿರಾತು ಸರ್ಕಾರದ ಕಡೆಯಿಂದ ಬಂತೇ? "ರೈತರೇ, ನಿಮ್ಮ ಜೀವ ಅಮೂಲ್ಯ, ಯಾವುದೋ ಒಂದು ಕ್ಷಣದಲ್ಲಿ ನಿಮ್ಮ ಜೀವನವನ್ನು ನೀವು ಕಳೆದುಕೊಳ್ಳಬೇಡಿ" ಎನ್ನುವ ಒಂದೇ ಒಂದು ಜಾಹಿರಾತು ಇಲ್ಲಿಯತನಕ ಬಂದಿಲ್ಲ.

ನೀರಾವರಿ ಯೋಜನೆಯ ಬಗ್ಗೆ ನಾನು ಗಮನ ಕೊಡುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮೊದಲನೆಯ ಅವಧಿಯಲ್ಲಿ "ನಮ್ಮ ನಡೆಗೆ ಕೃಷ್ಣೆಯೆಡೆಗೆ" ಎಂದು ಹೇಳಿದ್ದರು. ಕೃಷ್ಣೆಗಾಗಿ ಪ್ರತಿ ವರ್ಷ 10,000 ಕೋಟಿ ರೂಪಾಯಿಗಳನ್ನು ಮೀಸಲಿಡುವುದಾಗಿ ಹೇಳಿದ್ದರು. ಆ ಸಂದರ್ಭದಲ್ಲಿ ನಾವು ಹಣವನ್ನು ಮೀಸಲಿಡುತ್ತಾರೆ ಎಂದು ನಾನು ಅಂದುಕೊಂಡಿದ್ದೆನು. ಆ ಸಂದರ್ಭದಲ್ಲಿ ಇಡೀ ನೀರಾವರಿ ಯೋಜನೆಗಳಿಗಾಗಿ ಐದು ವರ್ಷಗಳ ಅವಧಿಯಲ್ಲಿ ಖರ್ಚು ಮಾಡಿದ್ದು ಕೇವಲ 50,000 ಕೋಟಿ ರೂಪಾಯಿಗಳು ಮಾತ್ರವೆ. ಈ ಬಾರಿ ಕೃಷ್ಣ, ಕಾವೇರಿ, ಗೋದಾವರಿ ಕೊಳ್ಳಗಳಿಗೆ 8,045 ಕೋಟಿ ರೂಪಾಯಿಗಳನ್ನು ನೀಡುತ್ತೇನೆ ಎಂದು ಅವರು ಹೇಳಿದ್ದು, ಇದು ಸಾಕಾಗುತ್ತದೆಯೇ? ಕಳಸಾ ಬಂಡೂರಿ ಮತ್ತು ಮಹದಾಯಿ ಯೋಜನೆಗಳಿಗೆ ಶೂನ್ಯ ಮೊತ್ತ, ಎತ್ತಿನಹೊಳೆಯ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಇನ್ನು ಕೇವಲ 18.73 ಕಿಲೋ ಮೀಟರ್ ಕಾಲುವೆ, ಇದರ ಬಗ್ಗೆ ಬಡ್ಜೆಟ್ ಎಷ್ಟು, ಇದನ್ನು ಯಾವಾಗ ಮುಗಿಸಲಾಗುತ್ತದೆ ಎನ್ನುವ ಅಂಶಗಳ ಬಗ್ಗೆ ಒಂದೇ ಒಂದು ಚಕಾರವಿಲ್ಲ. ಇದು ಏಕೆಂದು ನಾನು ಪ್ರಶ್ನಿಸುತ್ತೇನೆ.

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದಿಂದ 5,300 ಕೋಟಿ ರೂಪಾಯಿಗಳಷ್ಟು ಹಣ ಬರಬೇಕಾಗಿದೆ ಎಂಬುದಾಗಿ ಹೇಳುತ್ತಾರೆ. ಇದು ಸಂತೋಷದ ಸಂಗತಿಯಾಗಿದೆ. ಹಣ ಬೇಕು ಎಂದರೆ, ಅದನ್ನು ತೆಗೆದುಕೊಳ್ಳಬೇಕು. ಇದನ್ನು ಕೊಡುತ್ತೇವೆ ಎಂದು ಹೇಳಿದ್ದು ಎಲ್ಲಿಯೂ ನಿಜ ಎಂದಾದರೆ,

ಅದನ್ನು ಏಕೆ ಕೊಡುತ್ತಿಲ್ಲ ಎಂದು ಕೇಂದ್ರ ಸರ್ಕಾರವನ್ನು ಕೇಳುವ ವ್ಯವಧಾನವನ್ನು ರಾಜ್ಯ ಸರ್ಕಾರವು ಇಟ್ಟುಕೊಳ್ಳಬೇಕು. ಒಂದು ವೇಳೆ, ಅಕಸ್ಮಾತ್ತಾಗಿ ಕೇಂದ್ರ ಸರ್ಕಾರವು ಇದನ್ನು ಕೊಡಲಿಲ್ಲ ಎಂದಾದರೆ, 5,300 ಕೋಟಿ ರೂಪಾಯಿಗಳನ್ನು ಮಾಡುವಷ್ಟು ತಾಕತ್ತು ರಾಜ್ಯ ಸರ್ಕಾರಕ್ಕೆ ಇಲ್ಲವೇ? ಗೃಹಲಕ್ಷ್ಮಿ ಯೋಜನೆಯಲ್ಲಿ ಎರಡು ತಿಂಗಳ ಹಣ ಅಂದರೆ, 5,000 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ ಎಂಬುದಾಗಿ ಬಂತು. ಕೇಂದ್ರದಿಂದ 5,300 ಕೋಟಿ ರೂಪಾಯಿಗಳಷ್ಟು ಹಣ ಬರಬೇಕಾಗಿತ್ತು. ಈ 5,000 ಕೋಟಿ ರೂಪಾಯಿಗಳಷ್ಟು ಹಣ ಹೋಯಿತು ಅಥವಾ ಇಲ್ಲವೇ ಎನ್ನುವುದು ಇನ್ನೂ ನಮಗೆ ಗೊತ್ತಾಗಿಲ್ಲ. ಮಹಿಳೆಯರಿಗೆ ಕೊಡಬೇಕಾಗಿದ್ದ ಎರಡು ತಿಂಗಳ ಬಾಕಿಯ ಬಗ್ಗೆ ಸರ್ಕಾರವು ಸರಿಯಾದ ಉತ್ತರವನ್ನು ನೀಡಿರಲಿಲ್ಲ. ಇದಕ್ಕೆ ಆರ್ಥಿಕ ಇಲಾಖೆಯೆ ಕಾರಣ ಎಂಬುದಾಗಿ ಹೇಳಿದರು. ಕಾರಣ ಏನೇ ಆಗಿರಲಿ; ಆದರೆ, 5,300 ಕೋಟಿ ರೂಪಾಯಿಗಳಿಂದ ಭದ್ರಾ ಮೇಲ್ದಂಡೆ ಯೋಜನೆಯನ್ನು ನಿಲ್ಲಿಸಬಹುದೇ? ಅದನ್ನು ನಿಲ್ಲಿಸಬೇಕೇ? ನಮ್ಮದೇ ಆದ ಇಚ್ಛಾಶಕ್ತಿಯನ್ನು ಇಲ್ಲಿ ಉಪಯೋಗಿಸಬೇಕಲ್ಲವೇ? ಇದಕ್ಕಾಗಿ ಸಾಲ ಮಾಡಬೇಕಲ್ಲವೇ? ಆದರೆ ಸಾಲ ಮಾಡಿದ್ದೇವೆಯೇ? ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಶಿಕ್ಷಣ ಅತ್ಯಂತ ಪ್ರಮುಖವಾದದ್ದು. ಶಿಕ್ಷಣ ಕ್ಷೇತ್ರ ಎಂದಾಗ ನನಗೆ...., ಇಡೀಯಾದ ಶಿಕ್ಷಣ ಕ್ಷೇತ್ರಕ್ಕೆ, ಒಟ್ಟಾರೆಯಾಗಿ ಇಡಿ ಭಾರತದಲ್ಲಿ ಎಲ್ಲರೂ ಇದಕ್ಕಾಗಿ 14.5% ರಷ್ಟನ್ನು ಆಯವ್ಯಯದಲ್ಲಿ ಮೀಸಲಿಟ್ಟಿದ್ದಾರೆ. ಅಂದರೆ ನಾನು ಒಟ್ಟು ಸರಾಸರಿಯ ಬಗ್ಗೆ ಮಾತನಾಡುತ್ತಿದ್ದೇನೆ. ಆದರೆ, ನಮ್ಮದು ಒಂದು ಪ್ರಗತಿಪರ ರಾಜ್ಯವಾಗಿದೆ. ಚೆನ್ನಾಗಿ ಹಣವನ್ನು ಮೀಸಲಿಟ್ಟು, ಎಲ್ಲರನ್ನೂ ಮೀರಿಸಬೇಕಾಗಿದೆ. ಆದರೆ, ನಮ್ಮ ರಾಜ್ಯ ಸರ್ಕಾರವು ಕೇವಲ 10.80% ಮಾತ್ರವೇ ಮೀಸಲಿಟ್ಟಿದೆ. ಇದು ಏಕೆ? ಅಂದರೆ, ನಾನು ಹೇಳುವ ವಿಚಾರವೇನೆಂದರೆ, ಶಿಕ್ಷಣ ಕ್ಷೇತ್ರದ ಬಗ್ಗೆ ನಾವು ಗಮನವನ್ನು ಕೊಡಬೇಕಲ್ಲವೇ? ನಾನು ಹೇಳುವುದು ಏನೆಂದರೆ, ಕಳೆದ 15 ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಸಂಖ್ಯೆಯು 30% ರಷ್ಟು ಕಡಿಮೆಯಾಗಿದೆ. ಇದು ಏಕೆ? ಖಾಸಗಿ ಶಾಲೆಗಳ ಸಂಖ್ಯೆ ಜಾಸ್ತಿಯಾಗಿದೆಯೇ? ಸರ್ಕಾರಿ ಶಾಲೆಗಳಲ್ಲಿ ಕೊಡುತ್ತಿರುವ ಶಿಕ್ಷಣ ಹಾಗೂ ಅವುಗಳ ಗುಣಮಟ್ಟ ಸರಿ ಇಲ್ಲವೇ? ಈ ಬಗ್ಗೆ ನಾವು ಯೋಚನೆ ಮಾಡಬೇಕು.

ಬರ ಪರಿಸ್ಥಿತಿಯಿಂದಾಗಿ ಆತ್ಮಹತ್ಯೆ ಮಾಡಿಕೊಂಡವರ ಮಕ್ಕಳಿಗೆ ಉಚಿತವಾದ ಶಿಕ್ಷಣವನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ, ಕಳೆದ ಮೂರು ವರ್ಷಗಳಿಂದ ಅವರ ಶೈಕ್ಷಣಿಕದ ಬಗ್ಗೆ ಗಮನವಿಲ್ಲ. ಇದರ ಬಗ್ಗೆ ಆಯವ್ಯಯದಲ್ಲಿ ಒಂದೇ ಒಂದು ಸುದ್ದಿ ಇಲ್ಲ.

ಒಟ್ಟು 17,000 ಸ್ನಾತಕೋತ್ತರ ಪದವಿ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ, 60,000 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ದೊರೆತಿಲ್ಲ. ಇದರ ಬಗ್ಗೆ ಚಕಾರ ಇಲ್ಲ. ಇದು ದೊಡ್ಡ ಸಂಖ್ಯೆಯಾಗಿದೆ. ಈ ಸರ್ಕಾರವು ವಿದ್ಯಾಕ್ಷೇತ್ರಕ್ಕೆ 10.8% ರಷ್ಟು ಕೊಡುಗೆಯನ್ನು ನೀಡಿದ್ದು, ಆದರೆ, ಇದರ ಸರಾಸರಿಯು 14.8% ರಷ್ಟಿದೆ. ಇದನ್ನು ಏಕೆ ಕೊಟ್ಟಿಲ್ಲ?

2025-26 ನೇ ಸಾಲಿನ ಶೈಕ್ಷಣಿಕ ಅವಧಿ ಮುಗಿಯುತ್ತಾ ಬಂದರೂ ಸಹ, ವಿದ್ಯಾರ್ಥಿಗಳ ಶೂ ಮತ್ತು ಸಾಕ್ಸ್‌ಗಳಿಗಾಗಿ ಸರ್ಕಾರವು ಇನ್ನೂ ಹಣ ಬಿಡುಗಡೆ ಮಾಡಿರುವುದಿಲ್ಲ. ಅಂದರೆ ಇದರಲ್ಲಿರುವ ಸಮಸ್ಯೆಯಾದರೂ ಏನು? ಶಿಕ್ಷಣ ಕ್ಷೇತ್ರದಲ್ಲಿ ದುಡ್ಡು ಇಲ್ಲವೋ ಅಥವಾ ಸರ್ಕಾರದಲ್ಲಿಯೇ ದುಡ್ಡು ಇಲ್ಲವೋ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕಾಗಿದೆ. ರಾಜ್ಯದಲ್ಲಿ 993 ಅನಧಿಕೃತ ಶಾಲೆಗಳು ಮಾನ್ಯತೆ ಇಲ್ಲದೆಯೇ ಇವೆ. ಆದರೆ, ಮಾನ್ಯತೆ ಕೊಡುತ್ತೇವೆ ಎಂದು ಹೇಳಿದವರು ಮಾನ್ಯ ಪಡೆಯುವುದಕ್ಕೆ ತಯಾರಿಲ್ಲ. ಇದು ಯಾವ ಕಾರಣಕ್ಕಾಗಿ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಇದರ ಬಗ್ಗೆ ಸರ್ಕಾರವು ಗಂಭೀರವಾಗಿ ಯೋಚನೆ ಮಾಡಬೇಕು.

ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ 70% ಹುದ್ದೆಗಳು ಖಾಲಿ ಇವೆ. ಇದು ಏಕೆ? ಅಂದರೆ, ವಿಶ್ವವಿದ್ಯಾನಿಲಯಗಳಲ್ಲಿ ಇಷ್ಟು ದೊಡ್ಡ ಹುದ್ದೆಗಳನ್ನು ಸುಮ್ಮನೆ ಸೃಜಿಸಲಾಗಿದೆಯೇ? ಇದರ ಅವಶ್ಯಕತೆ ಇದೆಯೇ? ಅಷ್ಟು ವಿದ್ಯಾರ್ಥಿಗಳಿದ್ದಾರೆಯೇ? ಇದರ ಬಗ್ಗೆ ಸರ್ಕಾರದ ಮೂಲಕ ಒಂದು enquiry ಆಗಬೇಕು. ಇಷ್ಟು ವಿದ್ಯಾರ್ಥಿಗಳಿದ್ದಾರೆ, ಇವರಿಗೆ ಇಷ್ಟು ಬೇಕಾಗುತ್ತದೆ; ಹೀಗಾಗಿ ಇವರಿಗೆ ಉದ್ಯೋಗ ನೀಡಬೇಕು ಎಂಬುದರ ಬಗ್ಗೆ ಈಗಿನ ಆಯವ್ಯಯದಲ್ಲಿ ಯಾವುದೇ ಚಕಾರವಿಲ್ಲ.

ಮೈಸೂರು ವಿಶ್ವವಿದ್ಯಾನಿಲಯ ರಾಜ್ಯದ ಮೊದಲ ವಿಶ್ವವಿದ್ಯಾನಿಲಯವಾಗಿದೆ. ಅಲ್ಲಿ 18 ವರ್ಷಗಳಿಂದ ಬೋಧಕರ ನೇಮಕಾತಿ ಆಗಿಲ್ಲ. Adhoc ರವರಿಂದಲೇ ಅದನ್ನು ನಡೆಸುತ್ತಿದ್ದಾರೆ. ಇದು ಏಕೆ ಹಾಗೂ ಇದರ ಅವಶ್ಯಕತೆ ಏನಿದೆ?

ನಮ್ಮದು Innovative and IT City ಆಗಿದೆ. Artificial Intelligence, Robotics ಮುಂತಾದವು ಇವತ್ತಿನ ದಿವಸ ಜಗತ್ತಿನಲ್ಲಿ ಏನೇನು ಆಗುತ್ತಿದೆಯೋ, ಅದೂ ನಮ್ಮ ಬೆಂಗಳೂರು ಹಾಗೂ ರಾಜ್ಯದಲ್ಲಿಯೂ ಸಹ ಆಗುತ್ತಿದೆ. ಆದರೆ, ನಾನು ಹೇಳುತ್ತಿರುವುದು ಏನೆಂದರೆ, ಎ.ಐ. ಸೃಷ್ಟತಾ ಕೇಂದ್ರಕ್ಕೆ ಕೇವಲ 5 ಕೋಟಿ ರೂಪಾಯಿಗಳಷ್ಟು ಹಣವನ್ನು ಮಾತ್ರವೇ ಘೋಷಿಸಿದ್ದು, ಇದು ಸಾಕಾಗುತ್ತದೆಯೇ? ಎಷ್ಟು ದೊಡ್ಡ ರೋಡ್ ಮ್ಯಾಪ್ ಇದಕ್ಕೆ ಬೇಕಾಗುತ್ತದೆ. ನಮ್ಮ ಭಾರತ ದೇಶದಲ್ಲಿ ಎ.ಐ. ಸಮ್ಮೇಳನವಾಗುತ್ತದೆ. ಇಡೀ ಜಗತ್ತಿನ ಎ.ಐ. ದಿಗ್ಗಜರೆಲ್ಲರೂ ಕೂಡ ದೆಹಲಿಗೆ ಬರುತ್ತಾರೆ, ಅಲ್ಲಿ

ಕುಳಿತುಕೊಂಡಿದ್ದಾರೆ ಎನ್ನುವ ಸಂದರ್ಭದಲ್ಲಿ ಕರ್ನಾಟಕ ಕೂಡ ತುಂಬಾ ದೊಡ್ಡ ಮಟ್ಟದಲ್ಲಿ ಎ.ಐ. ಗೆ ಕೊಡುಗೆ ಕೊಡುತ್ತಿದೆ. ಇಂತಹದ್ದಕ್ಕೆ ರಾಜ್ಯ ಸರ್ಕಾರವು ಕೇವಲ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಎಲ್ಲಿಗೆ ಸಾಕಾಗುತ್ತದೆ? ಇದಲ್ಲದೇ, Quantum Computing Knowledge Hub ಅನ್ನು ಮಾಡಬೇಕು ಹಾಗೂ ತುಂಬಾ ದೊಡ್ಡ ಪ್ರಮಾಣದಲ್ಲಿ ನಮ್ಮ ರಾಜ್ಯವನ್ನು ಅಭಿವೃದ್ಧಿಪಡಿಸಬೇಕು. ಇದಕ್ಕಾರಿ ರಾಜ್ಯ ಸರ್ಕಾರವು 10 ಕೋಟಿ ರೂಪಾಯಿಗಳಷ್ಟು ಹಣ ನೀಡಿದೆ. ಇದು ಸಾಕಾಗುತ್ತದೆಯೇ? G.C.C. (Global Capability Centres) ಇವರೇ ಇಡೀ ಜಗತ್ತನ್ನು ಆಳುತ್ತಿದ್ದಾರೆ. ಇದಕ್ಕಾಗಿ ಭಾರತದಲ್ಲಿ ತುಂಬಾ ದೊಡ್ಡ ರೀತಿಯ ಬೇಡಿಕೆ ಇದೆ. ಇದೇ ರೀತಿಯಾಗಿ ನಮ್ಮ ಬೆಂಗಳೂರು ಹಾಗೂ ನಮ್ಮ ರಾಜ್ಯದಲ್ಲಿ ಬೇಡಿಕೆ ಇದೆ. ಆದರೆ, ಇವರುಗಳಿಗೆ ಯಾವ ರೀತಿಯಾಗಿ ನಾವು ಮಾಡಬೇಕು ಎನ್ನುವುದಕ್ಕೆ ರಾಜ್ಯ ಸರ್ಕಾರದ ಬಳಿ ರೋಡ್ ಮ್ಯಾಪ್ ಇಲ್ಲ. ಜಿ.ಸಿ. ಸೆಂಟರ್‌ಗಳನ್ನು ಆದ್ಯತೆಯ ಮೇರೆಗೆ, ಹೆಚ್ಚು ಮಾಡುತ್ತಾ, ರಾಜ್ಯದಾದ್ಯಂತೆ, Tier-2, Tier-3 city ಗಳಲ್ಲಿ ಹಬ್ಬುವ ಹಾಗೆ ಮಾಡುತ್ತಾ, ಬೆಂಗಳೂರು ನಗರದ ಸಪೋರ್ಟ್ ಬೇಸ್ ಅನ್ನು ದೊಡ್ಡದಾಗಿ ಮಾಡುವುದಕ್ಕೆ ಈ ಆಯವ್ಯಯದಲ್ಲಿ ಯಾವುದೇ ರೀತಿಯಾದ ವಿವರಣೆ ಇಲ್ಲ.

ಸಮಗ್ರವಾದ ಯೋಜನೆಗೆ ಸರಿಯಾದ ರೀತಿಯಲ್ಲಿ ಜನರನ್ನು ತುಂಬಬೇಕಾಗುತ್ತದೆ. ಈಗ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಸರ್ಕಾರವು ತಿಳಿಸಿದೆ. ರಾಜ್ಯದ ಕೆ.ಪಿ.ಎಸ್.ಸಿ. ಯಾವ ಸ್ಥಿತಿಯಲ್ಲಿದೆ? ಇದರ ಸ್ಥಿತಿಯನ್ನು ನೆನೆಸಿಕೊಂಡರೆ, ಕಣ್ಣಿನಲ್ಲಿ ನೀರು ಅಲ್ಲ ರಕ್ತ ಬರುತ್ತದೆ. ಕೆ.ಪಿ.ಎಸ್.ಸಿ. ಪರೀಕ್ಷೆಯನ್ನು ಬರೆದ ಬಹಳಷ್ಟು ಉದ್ಯೋಕಾಂಕ್ಷಿಗಳು ನನಗೆ ಫೋನ್ ಅನ್ನು ಮಾಡಿ "ತಾವು ಪರೀಕ್ಷೆ ಬರೆದು, ಎರಡು ವರ್ಷಗಳಾಗಿದ್ದು, ಇನ್ನೂ ರಿಸೆಲ್ಟ್ ಬಂದಿಲ್ಲ, ಇದು ಏಕೆ ಬಂದಿಲ್ಲ ಎನ್ನುವುದು ಗೊತ್ತಿಲ್ಲ, ನಾನು ತುಂಬಾ ಕಷ್ಟಪಟ್ಟು ಓದಿದ್ದೇನೆ; ನನಗೆ age bar ಆಗಿ ಹೋಗುತ್ತದೆ, ದಯವಿಟ್ಟು ಇದನ್ನು ನೋಡಿ, ಸದನದಲ್ಲಿ ನಮ್ಮ ಬಗ್ಗೆ ಮಾತನಾಡಿ" ಎಂಬುದಾಗಿ ತಿಳಿಸಿರುತ್ತಾರೆ. ಅಂದರೆ, ಕೆ.ಪಿ.ಎಸ್.ಸಿ. ಅನ್ನು ಯು.ಪಿ.ಎಸ್.ಸಿ. ಮಟ್ಟಕ್ಕೆ ಏಕೆ ತೆಗೆದುಕೊಂಡು ಹೋಗುತ್ತಿಲ್ಲ? ಅಲ್ಲಿ ವ್ಯವಸ್ಥೆ ಚೆನ್ನಾಗಿದೆ. ಆದರೆ, ಕೆ.ಪಿ.ಎಸ್.ಸಿ. ಯಲ್ಲಿ ಆ ರೀತಿಯ ವ್ಯವಸ್ಥೆ ಮಾಡುವುದಕ್ಕೆ ಏನು ತೊಂದರ ಇದೆ? ಇಲ್ಲಿ ಇಷ್ಟೊಂದು ಅಧ್ವಾನವಾಗಿರುವುದು ಸರ್ಕಾರ ಆದಿಯಾಗಿ ಎಲ್ಲರಿಗೂ ಗೊತ್ತಿದೆ. ಆದರೆ, ಇದಕ್ಕಾಗಿ ಸರ್ಕಾರ ಏನು ಮಾಡುತ್ತಿದೆ?

ರಾಜ್ಯದ ಬೇರೆ ಬೇರೆ ಇಲಾಖೆಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಎನ್ನುವುದನ್ನೂ ಸಹ ನಾನು ಸದನದ ಗಮನಕ್ಕೆ ತರುತ್ತೇನೆ.

(ಮುಂದು)

(382)13-03-2026/1-00/bkp-ak (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್ ಎಸ್(ಮುಂದು)**

ಇಡೀ ದೇಶದಲ್ಲಿ average ನಲ್ಲಿ ಖರ್ಚಾಗುತ್ತಿದೆ. ಆದರೆ, ಕರ್ನಾಟಕ ಖರ್ಚು ಮಾಡುವಂತಹದ್ದು 4.9% ಮಾತ್ರ. ಇದು ಏಕೆ? ಗ್ರಾಮೀಣಾಭಿವೃದ್ಧಿಗೆ 4.1% ಇದೆ. ಇದು ಅತ್ಯಂತ ಪ್ರಮುಖವಾಗಿರುವಂತಹ ಕ್ಷೇತ್ರವಾಗಿದೆ. 4.1% ನಮ್ಮ average ಇದೆ ಎನ್ನುವಂತಹದ್ದು ಆದರೆ 2.9% ನಮ್ಮ ಕೊಡುಗೆ ಇದಕ್ಕೆ ಇದೆ. ಅಂದರೆ, ಕರ್ನಾಟಕಕ್ಕೆ ಗ್ರಾಮೀಣಾಭಿವೃದ್ಧಿ ಆದ್ಯತೆಯ ವಿಷಯ ಅಲ್ಲವಾ? ಹಾಗೆಯೇ ರಸ್ತೆಗಳು, ಸೇತುವೆಗಳು, ಇವುಗಳ ಅಭಿವೃದ್ಧಿಗಾಗಿ ತುಂಬಾ ದೊಡ್ಡ ಪ್ರಮಾಣದ ಕೊಡುಗೆ ಕೊಡಬೇಕಲ್ಲವೇ? Because infrastructure plays an important role. ಎಲ್ಲರೂ ಸಹ ಕೇಳುವಂತಹದ್ದು, ಮೂಲಭೂತ ಸೌಲಭ್ಯಗಳು ಹೇಗೆ ಇದೆ ಎಂದು ಕೇಳುತ್ತಾರೆ. ಅದಕ್ಕೆ ನೀವು 4.3% ಅನ್ನು ಅವೇರೇಜ್‌ನಲ್ಲಿ ಕೊಡಬೇಕು, 2.3% ಕೊಡುತ್ತಿದ್ದೀರಿ. ಇದು ಸರಿಯೇ?

ಈ ವಿಷಯವಾಗಿ ಮೂಲಭೂತ ಸೌಕರ್ಯಗಳಿಗೆ ದುಡ್ಡು ಖರ್ಚು ಮಾಡಲು ನಿಮಗೆ ಏನು ತೊಂದರೆಯಾಗಿದೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ. ನಗರಾಭಿವೃದ್ಧಿ ವಿಷಯವಾಗಿ ಹೇಳುವುದಾದರೆ Urban Development plays an important role. ಏಕೆಂದರೆ, ಇವತ್ತು urbanization ಜಾಸ್ತಿ ಇದೆ. ಕರ್ನಾಟಕದಲ್ಲಿ Tier-2, Tier-3 city ಗಳು ಬೆಳೆಯುತ್ತಿವೆ. ನಾವು ಇಡೀ ಭಾರತವನ್ನು ಯೋಚನೆ ಮಾಡಿದಾಗ ಎಲ್ಲರೂ 3.2%ರಷ್ಟು ಖರ್ಚು ಮಾಡುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಆದರೆ, ನಾವು ಎಷ್ಟು ಖರ್ಚು ಮಾಡುತ್ತಿದ್ದೇವೆಂದರೆ 0.8% ರಷ್ಟು ಖರ್ಚು ಮಾಡುತ್ತಿದ್ದೇವೆ. ಇದು ಸರಿಯೇ? ನಾವು ಎಲ್ಲಿ ಇದ್ದೇವೆ? ಹಾಗೆಯೇ ಓ.ಬಿ.ಸಿ.ಗಳಿಗೆ ಕೊಟ್ಟಿರುವಂತಹ ಕೊಡುಗೆ ಇದೆಯಲ್ಲಾ, ಇದನ್ನು ನೋಡಿದಾಗ ಇದು ತುಂಬಾ ತೊಂದರೆ ಅನಿಸುತ್ತದೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಓ.ಬಿ.ಸಿ. ಸಮುದಾಯದಿಂದ ಬಂದವರಾಗಿರುತ್ತಾರೆ. ಅವರು ಅಲ್ಪ ಸಂಖ್ಯಾತ ಓ.ಬಿ.ಸಿ. ಮತ್ತು ಎಸ್.ಸಿ/ ಎಸ್.ಟಿ ಎಂದು ಹೇಳಿ ಯಾವಾಗಲೂ ಮಾತನಾಡುತ್ತಾ ಇರುತ್ತಾರೆ. ವಿವಿಧ ಸಮುದಾಯಗಳಿಗೆ ಕಳೆದ ವರ್ಷ 27,011 ಲಕ್ಷ ಕೋಟಿ ರೂಪಾಯಿಗಳ ಹಣವನ್ನು ಅದಕ್ಕೆ ಮೀಸಲಿಟ್ಟಿದ್ದರು. ಈ ಬಾರಿ 26,138 ಲಕ್ಷ ಕೋಟಿ ರೂಪಾಯಿಗಳು, ಹಾಗೆಯೇ ದೇವರಾಜ ಅರಸ್ ಹಿಂದುಳಿದ ನಿಗಮಕ್ಕೆ 27,500 ಲಕ್ಷ ಕೋಟಿ ರೂಪಾಯಿಗಳು. ಈ ವರ್ಷ ಕೊಟ್ಟಿರುವುದು 13,750 ಲಕ್ಷ ಕೋಟಿ ರೂಪಾಯಿಗಳು ಹೀಗಾಗಿ, ಇದು ಸುಮಾರು 50% ಕಡಿತ ಮಾಡಲಾಗಿದೆ. ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ 2,125 ಲಕ್ಷ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಈ ವರ್ಷ 1,788 ಲಕ್ಷ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 15.85% ನಷ್ಟು ಕಡತ ಮಾಡಿದ್ದಾರೆ. ಮತ್ತೆ ನಿಜಗುಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ 688 ಲಕ್ಷ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಕಳೆದ ವರ್ಷ 925 ಲಕ್ಷ ಕೋಟಿ ರೂಪಾಯಿಗಳಿತ್ತು, ಅಂದರೆ 25.62% ರಷ್ಟು ಕಡಿತ. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮಕ್ಕೆ 1,300 ಲಕ್ಷ ರೂಪಾಯಿಗಳನ್ನು ಕಳೆದ

ವರ್ಷ ಕೊಟ್ಟಿದ್ದರು. ಈ ಬಾರಿ 1,100 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ 15.36% ಕಡಿತ ಮಾಡಿದ್ದಾರೆ. ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮಕ್ಕೆ 8,250 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಕಳೆದ ಬಾರಿ 14,500 ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. 43.10% ರಷ್ಟು ಕಡಿತ. ಇದು ಏತಕ್ಕೆ ಈ ರೀತಿ ಮಾಡಲಾಗಿದೆ? ಹಾಗೆಯೇ ಕರ್ನಾಟಕ ಒಕ್ಕಲಿಗ ಸಮುದಾಯ 8,250 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, 43.10% ರಷ್ಟು ಕಡಿತ. ಆಹಾರ ಮತ್ತು ವಸತಿ ಸಹಾಯ ವಿದ್ಯಸಿರಿಗೆ ಈ ಬಾರಿ ಹಣವನ್ನೇ ಕೊಟ್ಟಿರುವುದಿಲ್ಲ. ಶೂನ್ಯವನ್ನು ತೋರಿಸಿದ್ದಾರೆ.

**ವೈಸ್ ಛೇರ್ಮನ್:-** ಶ್ರೀಮಾನ್ ಕೇಶವ ಪ್ರಸಾದ್ ರವರೆ, ಈಗ ನಿಮಗೆ 25 ನಿಮಿಷಗಳಾಗಿದ್ದು, ಇನ್ನು ಎಷ್ಟು ನಿಮಿಷಗಳು ಬೇಕಾಗುತ್ತದೆ?

**ಶ್ರೀ ಕೇಶವ ಪ್ರಸಾದ್ ಎಸ್:-** ಇನ್ನು 15 ನಿಮಿಷಗಳ ಅವಕಾಶವನ್ನು ಕೊಟ್ಟರೆ ಸಾಕಾಗುತ್ತದೆ.

**ವೈಸ್ ಛೇರ್ಮನ್:-** ಇವತ್ತು ಶುಕ್ರವಾರ ಆಗಿರುವುದರಿಂದ ಇನ್ನು ಕೆಲವು ಜನರು ಮಾತನಾಡುವವರು ಇದ್ದಾರೆ, ದಯವಿಟ್ಟು ಬೇಗ ಮುಗಿಸಿ.

**ಶ್ರೀ ಕೇಶವ ಪ್ರಸಾದ್ ಎಸ್:-** 15 ನಿಮಿಷ ಕಾಲಾವಕಾಶ ಕೊಡಿ ನಾನು ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ತಾವು ಬೇಗ ಮುಗಿಸಿದರೆ ಇನ್ನು ಇಬ್ಬರು ಮಾತನಾಡಬಹುದುಲ್ಲವೇ?

**ಶ್ರೀ ಕೇಶವ ಪ್ರಸಾದ್ ಎಸ್:-** ಖಂಡಿತವಾಗಿಯೂ ನಾನು ಬೇಗ ಮುಗಿಸುತ್ತೇನೆ. ಅಂದರೆ, ಈ ರೀತಿಯಲ್ಲಿ ಕಡತಗಳನ್ನು ಏತಕ್ಕೆ ಮಾಡಿದ್ದೀರಿ ಎಂದು ಕೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ ನನಗೆ ವಿವರಣೆ ಬೇಕು. ಹೀಗಾಗಿ, ನಾನು ಹೇಳುವುದೇನೆಂದರೆ ಮದರಸಾಗಳಲ್ಲಿ ಶಿಕ್ಷಣಕ್ಕಾಗಿ ಹಣವನ್ನು ಕೊಡಬೇಕು. 3,500 ಲಕ್ಷ ಕೋಟಿ ರೂಪಾಯಿಗಳಲ್ಲಿ ಹಣವನ್ನು ಕೊಟ್ಟಿದ್ದೀರಿ. ಈ ಬಾರಿ ನೀವು 8,500 ಲಕ್ಷ ರೂಪಾಯಿಗಳನ್ನು 142.85% ಏರಿಕೆ. ಏತಕ್ಕೆ ಈ ರೀತಿಯ ತಾರತಮ್ಯ ಮಾಡಿದ್ದೀರಿ? ನೀವು ಏರಿಕೆಯನ್ನು ಮಾಡಿ. ಆದರೆ, ಬೇರೆಯವರಿಗೆ ಕಡಿಮೆ ಮಾಡಿ ಇವರಿಗೆ ಮಾತ್ರ ಜಾಸ್ತಿ ಮಾಡುವಂತಹದ್ದು ಏತಕ್ಕೆ ಎನ್ನುವಂತಹದ್ದು ನನ್ನ ಪ್ರಶ್ನೆಯಾಗಿದೆ. ಹಾಗೆಯೇ ಇನ್ನೊಂದು ಗಂಭೀರವಾದ ವಿಚಾರವನ್ನು ತಮ್ಮ ಜೊತೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರಕ್ಕೆ ಮದ್ಯ ಮಾರಾಟದಿಂದ 45,000 ಕೋಟಿ ರೂಪಾಯಿಗಳ ದುಡ್ಡು ಬರುತ್ತದೆ ಎಂದು ಹೇಳಿದ್ದೀರಿ. ಎಲ್ಲಾ ಕಡೆಯು ಮಧುಲೋಕ, ಟಾನಿಕ್, ತೀರ್ಥ, ಜಲಾಶಯ, ಈ ರೀತಿಯದ್ದೇ ಆಗಿ ಹೋಗಿರುತ್ತದೆ. ಆದರೆ, ಮದ್ಯದ ಕಂಪನಿಗಳಿಗೆ ದರವನ್ನು ನಿಗದಿ ಮಾಡುವಂತಹ ಜವಾಬ್ದಾರಿಯನ್ನು ಏತಕ್ಕೆ ಕೊಟ್ಟಿದ್ದೀರಿ? ಇದರ ಹಿಂದಿರುವ ಕಾರಣಗಳೇನು, ಅದಕ್ಕಾಗಿಯೇ ಈ ವಿಚಾರ ಏನು ಎನ್ನುವಂತಹದ್ದನ್ನು ಸರ್ಕಾರ ಯೋಚನೆ ಮಾಡಬೇಕು. ನಾನು ಇನ್ನು ಒಂದಿಷ್ಟು ಬಜೆಟ್‌ನ ವಿಷಯಗಳಿಗೆ ಹೋಗುತ್ತೇನೆ.

ಈ ಸಲದ ಅಂದರೆ 2025-26ನೇ ಸಾಲಿನಲ್ಲಿ 2,08,100 ಕೋಟಿ ರೂಪಾಯಿಗಳನ್ನು ನಾವು ಅಂದಾಜು ಮಾಡಿದ್ದೆವು. ಆದರೆ, ಪರಿಷ್ಕೃತ ಅಂದಾಜಿನಲ್ಲಿ 1,93,100 ಕೋಟಿ ರೂಪಾಯಿಗಳಷ್ಟೆ ನಮಗೆ ಬಂದಿರುವುದಾಗಿದೆ.

ಕಳೆದ ವರ್ಷವೇ 15,000 ಕೋಟಿ ರೂಪಾಯಿಗಳ ಕೊರತೆ ಇತ್ತು ಎಂದಾಗ ನಾವು ಈ ವರ್ಷ 2,20,000 ಕೋಟಿ ರೂಪಾಯಿಗಳು ಬರುತ್ತದೆ ಎಂದು ಹೇಳಿದ್ದೇವೆ. ಅಂದರೆ, 13.93% ಹೆಚ್ಚಳ, ಇದು ಹೇಗೆ ಬರುತ್ತದೆ.

ಮಾನ್ಯ ಸಭಾಪತಿಯವರೆ, ಇಷ್ಟು ದೊಡ್ಡ ಮೊತ್ತದ ದುಡ್ಡು ಬರುವಂತಹದ್ದಕ್ಕೆ ದಾರಿ ಎಲ್ಲಿ ಇದೆ ಎನ್ನುವಂತಹದ್ದು ನನಗೆ ಅರ್ಥವಾಗುತ್ತಿಲ್ಲ. ಹಾಗೆಯೇ ನಾನು ಹೇಳುವಂತಹದ್ದು ಬಂಡವಾಳ ವೆಚ್ಚದ ಬಗ್ಗೆ ಹೇಳುತ್ತಿದ್ದೇನೆ. ಬಂಡವಾಳ ವೆಚ್ಚ ಏತಕ್ಕೆ ಕಡಿಮೆಯಾಗುತ್ತಿದೆ? ಸಾಲ ಮಾಡಬೇಕು, ನಮ್ಮ ಸಾಲ 1,32,000 ಕೋಟಿ ರೂಪಾಯಿಗಳು ಇರಲಿ. ಅದರೆ, ಬಂಡವಾಳ ವೆಚ್ಚಕ್ಕೆ ನೀವು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ? ಬಂಡವಾಳ ವೆಚ್ಚವನ್ನು ಕಡಿಮೆ ಮಾಡುತ್ತಿದ್ದೀರಿ. ಈ ವಿಚಾರದಲ್ಲಿ ಭಾರತ ಸರ್ಕಾರವನ್ನು ಹೋಲಿಸಿಕೊಂಡು ಯಾವಾಗಲೂ ನೀವು ಸಾಲ ಮಾಡಿದ್ದೀರಿ, ಸಾಲ ಮಾಡಿದ್ದೀರಿ ಎಂದು ಹೇಳುತ್ತೀರಲ್ಲಾ, ಸಾಲ ಮಾಡಿರುವುದು ಸರಿ. ಆದರೆ, ಆ ಸಾಲವನ್ನು ಏತಕ್ಕೆ ಮಾಡಲಾಗಿದೆ? ನಾವು ಏತಕ್ಕೆ ಸಾಲ ಮಾಡುತ್ತಿದ್ದೇವೆಂದು ನಾವುಗಳು ಹೋಲಿಕೆ ಮಾಡಿಕೊಳ್ಳಬೇಕಲ್ಲವೇ? ನೋಡಿ ನಾನು ಹೋಲಿಕೆಯನ್ನು ಹೇಳುತ್ತೇನೆ. ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಇದ್ದಂತಹ ಸಂದರ್ಭದಲ್ಲಿ 17.24 ಲಕ್ಷ ಕೋಟಿ ರೂಪಾಯಿಗಳನ್ನು ಸಾಲ ಮಾಡಿದ್ದರು. ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ತಮ್ಮ ಅಧಿಕಾರವನ್ನು ಬಿಟ್ಟುಕೊಡುವಾಗ ಮತ್ತು ಡಾ॥ ಮನಮೋಹನ್ ಸಿಂಗ್‌ರವರು ಬಂದಾಗ 55.86 ಲಕ್ಷ ಕೋಟಿ ರೂಪಾಯಿಗಳ ಸಾಲ ಆಯಿತು ಎಂದು ಹೇಳಿ ವರದಿ ತೋರಿಸುತ್ತಾ ಇತ್ತು. ಆದರೆ, actual ಸಾಲ ಇದ್ದುದು 49.65 ಲಕ್ಷ ಕೋಟಿ ರೂಪಾಯಿಗಳು. ಇದು ಏತಕ್ಕೆಂದರೆ, ಸಾಲದ ಮೂಲ ಇದ್ದುದು 37.14 ಲಕ್ಷ ಕೋಟಿ ರೂಪಾಯಿಗಳು. 10 ವರ್ಷಗಳ ಕಾಲ ಬಂಡವಾಳ ವೆಚ್ಚವನ್ನು ಮಾಡಿದ್ದು, 12.51 ಲಕ್ಷ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರು. ವಾಸ್ತವಿಕವಾಗಿ ಸಮಗ್ರ ಸಾಲ 49.65 ಲಕ್ಷ ಕೋಟಿ ರೂಪಾಯಿಗಳು ಮಾತ್ರ ಇತ್ತು. ಹಾಗಾದರೆ, 55.86 ಲಕ್ಷ ಕೋಟಿ ರೂಪಾಯಿಗಳು ಎಂದು ಏನು ತೋರಿಸಿದ್ದರಲ್ಲಾ, 6.21 ಲಕ್ಷ ಕೋಟಿ ರೂಪಾಯಿಗಳು ಅದು ಎಲ್ಲಿ ಹೋಗಿತ್ತು? ಅದು ಗೊತ್ತಿಲ್ಲ. ಹಾಗೆಯೇ ಆ ಸಂದರ್ಭದಲ್ಲಿ ಮುಚ್ಚಿಟ್ಟಂತಹ ಸಾಲ ಒಂದಿಷ್ಟು ಇತ್ತು. Oil Bond ಮೇಲೆ ಇತ್ತು. 1.34 ಲಕ್ಷ ಕೋಟಿ ರೂಪಾಯಿಗಳ ಸಾಲ ಇತ್ತು, ಅದನ್ನು ಮುಚ್ಚಿಟ್ಟಿದ್ದರು. 18 ತಿಂಗಳ ಕಾಲ ಸಬ್ಸಿಡಿಯನ್ನು ಕೊಟ್ಟಿರಲಿಲ್ಲ. 3 ತಿಂಗಳ ಮೇಲೆ ಸಬ್ಸಿಡಿ ಹಣವನ್ನು ಇಟ್ಟುಕೊಳ್ಳುವಂತಿಲ್ಲ. 1.40 ಲಕ್ಷ ಕೋಟಿ ರೂಪಾಯಿಗಳು ಉಳಿದಿತ್ತು. ಹಾಗೆಯೇ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು recapitalization ಮಾಡಬೇಕಾಗಿತ್ತು. NPA (Non-Performing Assets) ಆಗಿತ್ತು, NPA ಇರಬಾರದು. ಅದು ಇದ್ದರೆ, ಅದನ್ನು ಸರಿ ಮಾಡುವಂತಹ ಜವಾಬ್ದಾರಿ ಇತ್ತು. ಇಡೀ ಯು.ಪಿ.ಎ. ಅಂದರೆ ಕಾಂಗ್ರೆಸ್ ಸರ್ಕಾರ ತನ್ನ ಅಷ್ಟು ವರ್ಷದ ಆಳ್ವಿಕೆಯಲ್ಲಿ 35,000 ಕೋಟಿಗಳನ್ನು ಮಾತ್ರ ಕೊಟ್ಟಿತ್ತು. ಆದರೆ, ಕೇಂದ್ರ ಸರ್ಕಾರ 3,10,000 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಇದೆಲ್ಲವನ್ನು ಒಟ್ಟಿಗೆ ಸೇರಿಸಿದಾಗ 61.70 ಲಕ್ಷ ಕೋಟಿ ರೂಪಾಯಿಗಳ ಸಾಲದ ಹೊರೆ ಬಂತು. ಇದು ಯಾವುದನ್ನೂ ಸಹ ಶ್ರೀಮಾನ್ ನರೇಂದ್ರ ಮೋದಿಯವರು ಮಾಡಿದಂತಹದ್ದು ಆಗಿರುವುದಿಲ್ಲ. ಹಾಗೆಯೇ ಕೋವಿಡ್ ಬಂತು. ಇಂತಹ ಸಮಸ್ಯೆಯನ್ನು

ಇಡೀ ಜಗತ್ತೇ ಕೇಳಿರಲಿಲ್ಲ. 20 ಲಕ್ಷ ಕೋಟಿ ರೂಪಾಯಿಗಳನ್ನು ಸಾಲ ಮಾಡಿದರು. *'ಜಾನ್‌ಭೀ ಚಾಹಿಯೇ ಜಹಾನ್‌ಭೀ ಚಾಹಿಯೇ'* ಅಂದರು. ಅದಕ್ಕೆ ಬಡ್ಡಿ 7 ಲಕ್ಷ ಕೋಟಿ ರೂಪಾಯಿಗಳು ಸೇರಿಕೊಂಡಿತು. ಒಟ್ಟಾರೆ, ಸಾಲ 177.96 ಲಕ್ಷ ಕೋಟಿ ರೂಪಾಯಿಗಳು. ಕೇಂದ್ರದ ಸಾಲ 197.17 ಲಕ್ಷ ಕೋಟಿ ರೂಪಾಯಿಗಳು ಎಂದು ತೋರಿಸುತ್ತಿದೆ. ಇದರಲ್ಲಿ ಅದನ್ನು ತೆಗೆದು ಬಿಟ್ಟರೆ ಹತ್ತಿರ ಹತ್ತಿರ 20 ಲಕ್ಷ ಕೋಟಿ ರೂಪಾಯಿಗಳು ಬರುತ್ತದೆ ಎಂದು ತಿಳಿದುಕೊಳ್ಳೋಣ. ಆದರೆ ಶ್ರೀಮಾನ್ ನರೇಂದ್ರ ಮೋದಿಯವರ ಸರ್ಕಾರ ಬಂಡವಾಳ ವೆಚ್ಚಕ್ಕೆ 11 ವರ್ಷಗಳಲ್ಲಿ ಖರ್ಚು ಮಾಡಿರುವುದು 65.33 ಲಕ್ಷ ಕೋಟಿ ರೂಪಾಯಿಗಳು. ಇದರಲ್ಲಿ 20 ಲಕ್ಷ ಕೋಟಿ ರೂಪಾಯಿಗಳನ್ನು ತೆಗೆದರೆ 46.12 ಲಕ್ಷ ಕೋಟಿ ರೂಪಾಯಿಗಳನ್ನು ಉತ್ಪಾದನೆ ಮಾಡಿ ಬಂಡವಾಳ ವೆಚ್ಚಕ್ಕೆ ಖರ್ಚು ಮಾಡಿದೆ. ಈ ರೀತಿಯಲ್ಲಿ ಒಂದು ವಿವರಣೆ ಮಾನ್ಯ ಮುಖ್ಯಮಂತ್ರಿಗಳಿಂದ ಬೇಕಲ್ಲವೇ? ಈ ಸಂಬಂಧ ಒಂದು ವೈಟ್ ಪೇಪರ್ ಅನ್ನು ತಂದು ಬಿಡಲಿ. ನಾನು ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವಂತಹದ್ದು ಏನು ಎಂದು ವೈಟ್ ಪೇಪರ್ ಅನ್ನು ತರಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಹಾಗೆಯೇ ಕೇಂದ್ರ ಸರ್ಕಾರ ನಮಗೆ ಹಣವನ್ನು ಕೊಟ್ಟಿಲ್ಲ, ಎಂದು ಏನು ಹೇಳಲಾಗುತ್ತಿದೆ. Tax devolution ಎಷ್ಟು? Grants-in-Aid ಎಷ್ಟು? ಇವರೆಡು ಸೇರಿಸಿ ನಮಗೆ ಇನ್ನು ಎಷ್ಟು ಬಂದಿದೆ? ನಮ್ಮಿಂದ ನಾಲ್ಕುವರೆ ಲಕ್ಷ ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಎಂದು ಏನು ಹೇಳುತ್ತಾರೆ. ನಾಲ್ಕುವರೆ ಲಕ್ಷ ಕೋಟಿ ರೂಪಾಯಿಗಳು ಯಾವ ರೀತಿಯಲ್ಲಿ ಹೋಗುತ್ತದೆ? ಇದು ನಮಗೂ ಸಹ ಅರ್ಥವಾಗಬೇಕು. ಏಕೆಂದರೆ ನಾವು ಗಮ್ಮಾರರು ನಮಗೆ ಅರ್ಥವಾಗುವುದಿಲ್ಲ. ನಾವು ಮುಖ್ಯಮಂತ್ರಿಗಳ ರೀತಿಯಲ್ಲಿ ತುಂಬಾ ಬುದ್ಧಿವಂತರಲ್ಲ. 17 ಬಜೆಟ್‌ಗಳನ್ನು ನಾವು ಮಂಡನೆ ಮಾಡಿರುವುದಿಲ್ಲ. ನಮಗೆ ಇಲ್ಲಿಗೆ ಬಂದ ಮೇಲೆ ಬಜೆಟ್ ಏನೆಂದು ಅರ್ಥವಾಗುತ್ತಿದೆ. ಮೊದಲು ನಮಗೆ ಬಜೆಟ್ ವಿಷಯಗಳೇ ಗೊತ್ತಿರಲಿಲ್ಲ. ಯಾವಾಗ ಇಷ್ಟೊಂದು ಬಜೆಟ್ ಮೇಲೆ ಮುಖ್ಯಮಂತ್ರಿಗಳು ಮಾತನಾಡುತ್ತಾರೋ ನೀನು ಸುಮ್ಮನೆ ಕುಳಿತುಕೊಳ್ಳೋ ಎಂದು ನೀವು ಹೇಳಿದ ಹಾಗೆ ಗದರುತ್ತಾರೋ ಆಗ ನಾವು ಸ್ವಲ್ಪ ತಿಳಿದುಕೊಳ್ಳೋಣ ಬಜೆಟ್ ಬಗ್ಗೆ ಇಷ್ಟೊಂದು ಅಧಿಕೃತವಾಗಿ ಮುಖ್ಯಮಂತ್ರಿಗಳು ಮಾತನಾಡುತ್ತಾರಲ್ಲಾ, ಈ ಅಂಕಿ-ಸಂಖ್ಯೆಗಳಲ್ಲಿ ನಿಜವಾಗಿಯೂ ಏನಾದರೂ ಅರ್ಥ ಇದೆ ಎಂದಾಗ ಹೊರ ಹೊಮ್ಮಿರುವಂತಹ ಸಂಗತಿ ಇದಾಗಿದೆ.

ಮಾನ್ಯ ಸಭಾಪತಿಯವರೆ, ಹಾಗಾಗಿ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕು. ಏಕೆಂದರೆ, ಇದರ ಬಗ್ಗೆ ಹಿಂದಿನ track record ಒಂದನ್ನು ನಾನು ಹೇಳುತ್ತೇನೆ. 1995 ರಿಂದ 1999 ರವರೆಗೆ ಅವರು ನಮ್ಮ ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದರು ಮತ್ತು ಹಣಕಾಸು ಖಾತೆಯನ್ನು ಸಹ ಅವರೇ ನೋಡಿಕೊಂಡಿದ್ದರು. ಕೊನೆಗೆ ಅವರು ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಯಿತು. ತದನಂತರ ಶ್ರೀಮಾನ್ ಎಸ್.ಎಂ. ಕೃಷ್ಣ ರವರು ಮುಖ್ಯಮಂತ್ರಿಗಳಾಗಿ ಬಂದರು. ಶ್ರೀಮಾನ್ ಎಸ್. ಎಂ. ಕೃಷ್ಣ ರವರು

ಮುಖ್ಯಮಂತ್ರಿಗಳಾದ ಮೇಲೆ ವೈಟ್ ಪೇಪರ್ ತಂದರು. ಆ ವೈಟ್ ಪೇಪರ್ ಅನ್ನು ಹಣಕಾಸು ಸಚಿವರಾಗಿದ್ದ ಶ್ರೀಮಾನ್ ಸಿದ್ದರಾಮಯ್ಯನವರ ಮೇಲೆ ಮಾಡಿದರು. ಇಲ್ಲ, ಅ ವೈಟ್ ಪೇಪರ್ ಅನ್ನು ಕರ್ನಾಟಕ ಸರ್ಕಾರ ತೆಗೆದು ಹಾಕಿದೆ. ಆ ಒಂದು ವೈಟ್ ಪೇಪರ್ ಅನ್ನು ಮಂಡನೆ ಮಾಡಲಿ. ನಾನು ಹೇಳುವುದೇನೆಂದರೆ, ಉಪ ಮುಖ್ಯಮಂತ್ರಿಗಳಿಗೆ ಒಳ್ಳೆಯ ಹಣಕಾಸನ್ನು ಕೊಟ್ಟಂತಹ track record ಇರುವುದಿಲ್ಲ. ಅವರು 3 ಗಂಟೆ 31 ನಿಮಿಷಗಳ ಕಾಲ ಬಜೆಟ್ ಅನ್ನು ಓದಿದ್ದಕ್ಕೆ ನನ್ನ ಅಭಿನಂದನೆಗಳು ಇದೆ. 78ನೇ ವಯಸ್ಸಿನಲ್ಲಿಯೂ ಅಷ್ಟೊಂದು ಸಮಯ ನಿಂತುಕೊಂಡು ಓದಿದ್ದಕ್ಕೆ ಅಭಿನಂದನೆಗಳು ಇದೆ. 17ನೇ ಬಜೆಟ್ ಅನ್ನು ಮಂಡನೆ ಮಾಡಿದ್ದಕ್ಕೆ ಅಭಿನಂದನೆಗಳು ಇದೆ. ಆದರೆ, ಅವರು ಕೊಟ್ಟಿರುವಂತಹ ಬಜೆಟ್ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಅಲ್ಲ.

(ಮುಂದು)

(383) 13.03.2026 01.10 ಎಸ್‌ವಿ-ಎಕೆ (ವೈಸ್ ಛೇರ್‌ಮನ್ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್. ಎಸ್. (ಮುಂದು):-**

ಕರ್ನಾಟಕ ರಾಜ್ಯ ಹಣಕಾಸಿನ ಸ್ಥಿತಿಯನ್ನು ಹಳ ತಪ್ಪಿಸುತ್ತಿದೆ. ಇದನ್ನು debt trap ಗೆ ತೆಗೆದುಕೊಂಡು ಹೋಗುತ್ತಿದೆ. We are on the verge of a debt trap. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಸರಿ ಮಾಡಬೇಕಾಗಿತ್ತು. ನಾನು ಬೇರೆ ಏನನ್ನೂ ಕೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಈ ರೀತಿಯ ಆಯವ್ಯಯವನ್ನು ಮಂಡಿಸುವುದಕ್ಕೆ ಅವರಿಗೆ ಯಾವ ಒತ್ತಡವಿತ್ತು? ಅಧಿಕಾರದಲ್ಲಿ ಎರಡು ವರ್ಷ ಇರಬೇಕೆಂತಲೋ ಅಥವಾ ಈ ಬಜೆಟ್ ಅನ್ನು ಮಂಡಿಸಿದ ಮೇಲೆ ಕರ್ನಾಟಕದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ್ದೇನೆಂದು ಜನರಿಗೆ ತೋರಿಸಬೇಕಿತ್ತೋ ನನಗೆ ಅರ್ಥವಾಗುತ್ತಿಲ್ಲ. ಹಾಗಾಗಿ ಹಿಂದುಳಿದ ವರ್ಗದ ಒಬ್ಬ ಮುಖ್ಯಮಂತ್ರಿಯವರು 17ನೇ ಬಜೆಟ್ ಅನ್ನು ಮಂಡಿಸಿದ್ದಾರೆನ್ನುವುದು ಎಷ್ಟು ಅಭಿಮಾನದ ಸಂಗತಿಯೋ ಅವರ ಬಜೆಟ್‌ನಲ್ಲಿ ಕೂಡ ಅಷ್ಟೇ ಶಕ್ತಿಯಿದೆ. ಅವರ ಬಜೆಟ್‌ನಲ್ಲಿ revenue deficit ಇಲ್ಲ. ಮೂರನೇ ವರ್ಷದ revenue deficit ಬಜೆಟ್ ಅನ್ನು ಮಂಡಿಸುತ್ತಿದ್ದಾರೆ. ಹಾಗಾಗಿ ನಾನು ತಮ್ಮ ಮೂಲಕ ಕೇಳಕೊಳ್ಳುವುದೇನೆಂದರೆ ಅವರು ಮಂಡಿಸಿರುವ ಈ ಬಜೆಟ್‌ನಲ್ಲಿ ಅಭಿವೃದ್ಧಿ ಪಥದಲ್ಲಿ ಹೋಗುವ ಯಾವುದೇ ಸಂಗತಿಗಳಿಲ್ಲ.

ನನಗೆ ಸಮಯ ಕಡಿಮೆ ಕೊಟ್ಟಿದ್ದೀರಿ. ಸಾಕಷ್ಟು ವಿಷಯಗಳಿತ್ತು. 51% ಇರುವಂಥ ಒ.ಬಿ.ಸಿ.ಗಳಿಗೂ ರೂ.3,800 ಕೋಟಿ ಮಾತ್ರ ಕೊಟ್ಟಿದ್ದಾರೆ. ಏಕೆ ಈ ಅನ್ಯಾಯ? ಏಕೆ ಈ ತಾರತಮ್ಯ? ಓ.ಬಿ.ಸಿ. ಸಮುದಾಯದಿಂದ ಬಂದು ಓ.ಬಿ.ಸಿ.ಗಳಿಗೆ ದುಡ್ಡು ಕೊಡಲಿಲ್ಲ ಅಂದರೆ ಎಷ್ಟು ಸರಿ? ಎಸ್.ಸಿ.ಪಿ/ಟಿ.ಎಸ್.ಪಿ ಹಣವನ್ನು ನೀವು ಬೇರೆಯದಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇಲ್ಲಿರುವಂಥ ತುಂಬಾ ಜನ ಕೇಳುತ್ತಿದ್ದಾರೆ. ಈ ಬಜೆಟ್ ಬಗ್ಗೆ ನಾವು ಹೇಗೆ ಮಾತನಾಡುವುದು ಎಂದು ಅವರ ಮನಸ್ಸಿನಲ್ಲಿ ಬೇಗುದಿಯಿದೆ. ಏಕೆಂದರೆ ಎಸ್.ಸಿ/ಎಸ್.ಟಿ ಸಮುದಾಯಕ್ಕೆ ಮೀಸಲಿಟ್ಟ ಹಣವನ್ನು ಅವರ ಹಾಸ್ಟೆಲ್‌ಗಳಿಗೆ, ಅವರ ಕೈಗಾರಿಕೆಗಳ ಅಭಿವೃದ್ಧಿಗೆ, ಅವರ ಸಮಗ್ರತೆಗಾಗಿ ಬಳಕೆ ಮಾಡಿಕೊಳ್ಳಬೇಕಾಗಿತ್ತು. ಅದನ್ನು ಮಾಡಿರುವುದಿಲ್ಲ. ಹಾಗಾಗಿ ನಾನು

ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ನೀವು ಈ ಬಜೆಟ್ ಅನ್ನು ಯಾವ ಕಾರಣಕ್ಕೆ ಕೊಟ್ಟಿರಿ? ಯಾವ ಮೋಹನ ಮುರಳಿ ನಿಮ್ಮನ್ನು ಕರೆದಿತ್ತು ಎಂಬುದನ್ನು ದಯವಿಟ್ಟು ಕರ್ನಾಟಕದ ಜನತೆಗೆ ವಿವರಿಸಿ ಎಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಜಾಪ್ರಭುತ್ವ ಅಳವಡಿಕೆ ಮಾಡಿಕೊಂಡ ನಂತರ, ನಮ್ಮ ದೇಶದಲ್ಲಿ ಚುನಾಯಿತ ಸರ್ಕಾರಗಳು ಜನ್ಮ ತಾಳಿದ ನಂತರ ಆಯವ್ಯಯ ಯಾವುದೇ ಚುನಾಯಿತ ಸರ್ಕಾರದ ಒಂದು ಭಾಗ. ಪ್ರತಿಯೊಂದು ರಾಜ್ಯದಲ್ಲಿಯೂ ಸಹ ಇಂಥ ವ್ಯವಸ್ಥೆಯನ್ನು ನಾವು ನೋಡುತ್ತೇವೆ. ಕರ್ನಾಟಕದಲ್ಲಿ ವಿಶೇಷವಾಗಿ 1947ರಲ್ಲಿ ತಾತ್ಕಾಲಿಕ ಸರ್ಕಾರ ಬಂದರೂ ಸಹ ಕರ್ನಾಟಕದಲ್ಲಿ 1952ರಲ್ಲಿ ದಿವಂಗತ ಕೆಂಗಲ್ ಹನುಮಂತಯ್ಯನವರ ಮೂಲಕ ಮೊದಲನೆಯ ಬಜೆಟ್ ಮಂಡನೆಯಾದಂಥದ್ದು.

ಬಹಳ ಜನಕ್ಕೆ ಆಶ್ಚರ್ಯವಾಗಬಹುದು. ಕರ್ನಾಟಕದ ಮೊದಲನೆಯ ಬಜೆಟ್ ಗಾತ್ರ ಎಷ್ಟು ಎಂದರೆ ರೂ.21 ಕೋಟಿ. ಇವತ್ತು ಮಾನ್ಯ ಸಿದ್ದರಾಮಯ್ಯನವರು ಕೊಟ್ಟಿರುವ ಬಜೆಟ್‌ನ ಗಾತ್ರ ರೂ.4,48,000 ಕೋಟಿ. ಕರ್ನಾಟಕದ ಮೊದಲನೆಯ ಬಜೆಟ್ ದಿವಂಗತ ಕೆಂಗಲ್ ಹನುಮಂತಯ್ಯನವರ ಬಜೆಟ್‌ನ ಗಾತ್ರ ರೂ.21 ಕೋಟಿ. ತದನಂತರ ಅವರು ನಾಲ್ಕು ಬಾರಿ ಬಜೆಟ್ ಅನ್ನು ಮಂಡನೆ ಮಾಡಿದರು. ನಂತರ ದಿವಂಗತ ಟಿ.ಮರಿಯಪ್ಪನವರು ವಿತ್ತ ಸಚಿವರಾಗಿ ಅವರು ನಾಲ್ಕು ಬಜೆಟ್ ಅನ್ನು ಮಂಡನೆ ಮಾಡಿದರು. ಅವರು ಒಮ್ಮೆ ರೂ.61 ಕೋಟಿ ಬಜೆಟ್ ಮಂಡನೆ ಮಾಡಿ, ಅದರ ಮುಂದಿನ ವರ್ಷ ರೂ.52 ಕೋಟಿ ಬಜೆಟ್ ಮಂಡನೆ ಮಾಡಿದ್ದರು. ಅಂದರೆ ಕರ್ನಾಟಕದ ಇತಿಹಾಸದಲ್ಲಿ ಒಂದು ಬಾರಿ ಹೆಚ್ಚು ಬಜೆಟ್ ಕೊಟ್ಟು ಬೇರೆ ಬೇರೆ ಕಾರಣಕ್ಕೆ, revenue deficit ಕಾರಣಕ್ಕೆ ಕಡಿಮೆ ಬಜೆಟ್ ಕೊಟ್ಟಂಥ ದಾಖಲೆಗಳು ಇತಿಹಾಸದಲ್ಲಿ ಇದೆ.

ಮಾನ್ಯ ಸಿದ್ದರಾಮಯ್ಯನವರ ವಿಷಯಕ್ಕೆ ಬಂದರೆ ಇಡೀ ದೇಶಕ್ಕೆ ಗೊತ್ತಿದೆ. ಸಾಮಾಜಿಕ ನ್ಯಾಯದ ಬದ್ಧತೆಯುಳ್ಳ ಒಬ್ಬ ಸಾಮಾಜಿಕ ನಾಯಕನಾಗಿ ಕರ್ನಾಟಕದಲ್ಲಿ 17 ಬಜೆಟ್ ಕೊಟ್ಟಂಥ ಕೀರ್ತಿ ಮಾನ್ಯ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ. ಯಾರಿಗೆ ಸೈದ್ಧಾಂತಿಕವಾಗಿ ಅವರನ್ನು ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ, ಯಾರಿಗೆ ಮಾನ್ಯ ಸಿದ್ದರಾಮಯ್ಯನವರನ್ನು ಎದುರಿಸುವಂಥ ಶಕ್ತಿ ಇಲ್ಲ, ಪಾಪ ಅವರಿಗೆ ಅನಿವಾರ್ಯವಾಗಿ ಮಾನ್ಯ ಸಿದ್ದರಾಮಯ್ಯನವರನ್ನು ವ್ಯಂಗ್ಯ ಮಾಡುವುದು, ಮಾನ್ಯ ಸಿದ್ದರಾಮಯ್ಯನವರನ್ನು ಅಪಹಾಸ್ಯ ಮಾಡುವುದನ್ನು ನಾವು ನೋಡುತ್ತಿದ್ದೇವೆ.

ಸ್ವಾಭಾವಿಕವಾಗಿ ಕರ್ನಾಟಕದ ಬಜೆಟ್ ಇತಿಹಾಸವನ್ನು ನೋಡುವಂಥ ಸಂದರ್ಭದಲ್ಲಿ 1952ರಿಂದ ಇಲ್ಲಿಯವರೆಗೆ ಆಗಬೇಕಾಗಿರುವಂಥದ್ದು, ಆಗಿರುವಂಥದ್ದು, ಬಜೆಟ್‌ನಲ್ಲಿ ಏನು ಲೋಪವಿದೆ, ಇಲಾಖಾವಾರು ಅನುದಾನವೇನು ಕೊಟ್ಟಿದ್ದಾರೆ, ಕೊಟ್ಟಂಥ ಅನುದಾನಗಳು ಸಮರ್ಪಕವಾಗಿ ಬಳಕೆಯಾಗಿದೆಯೇ, ಬಳಕೆಯಾಗಿಲ್ಲವೇ, ಆಗಿಲ್ಲವಾದರೆ ಕಾರಣವೇನು ಅಥವಾ ಯಾವುದಾದರೂ ಇಲಾಖೆಗೆ ಜಾಸ್ತಿ ಬೇಕೆ, ಬೇಕಾದರೆ

ಯಾವ ಕಾರಣಕ್ಕೆ ಜಾಸ್ತಿ ಅನುದಾನ ಬೇಕು, ಈ ರೀತಿಯ ಆರೋಗ್ಯಕರವಾದ ಚರ್ಚೆಯಾಗಬೇಕು. ಬೌದ್ಧಿಕವಾಗಿ ಯಾರು ದಿವಾಳಿಯಾಗಿದ್ದಾರೆ, ಯಾರಿಗೆ ಬಜೆಟ್‌ನ ನ್ಯೂನತೆಯನ್ನು ಮಾತನಾಡುವುದಕ್ಕೆ ಶಕ್ತಿಯಿಲ್ಲ ಅಂಥವರು ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ಮಾತನಾಡುವಂಥದ್ದು, ಅಪಹಾಸ್ಯ ಮಾಡುವಂಥದ್ದು ಸ್ವಾಭಾವಿಕ. ಏಕೆಂದರೆ ಅವರು ಬೌದ್ಧಿಕವಾಗಿ ದಿವಾಳಿಯಾಗಿರುತ್ತಾರೆ ಹಾಗಾಗಿ ಬಜೆಟ್ ಮೇಲೆ ಮಾತನಾಡುವುದಕ್ಕೆ ಶಕ್ತಿ ಇರುವುದಿಲ್ಲ.

1995-96ರಲ್ಲಿ ಮಾನ್ಯ ಸಿದ್ದರಾಮಯ್ಯನವರು ಕೊಟ್ಟಂಥ ಮೊದಲನೆಯ ಬಜೆಟ್ ಗಾತ್ರ ರೂ.10,250 ಕೋಟಿ. 1997-98ರಲ್ಲಿ ಕೊಟ್ಟಂಥ ಎರಡನೆ ಬಜೆಟ್ ಗಾತ್ರ ರೂ.13,456 ಕೋಟಿ. 1999-2000ದಲ್ಲಿ ಕೊಟ್ಟ ಬಜೆಟ್‌ನ ಗಾತ್ರ ರೂ.17,818 ಕೋಟಿ. 2004-2005 ಕೊಟ್ಟ ಬಜೆಟ್‌ನ ಗಾತ್ರ ರೂ.31,595 ಕೋಟಿ. 2013-14ರಲ್ಲಿ ಕೊಟ್ಟ ಬಜೆಟ್‌ನ ಗಾತ್ರ ರೂ.1,21,611 ಕೋಟಿ. 2016-17ರಲ್ಲಿ ಕೊಟ್ಟಂಥ ಬಜೆಟ್‌ನ ಗಾತ್ರ ರೂ.1,63,419 ಕೋಟಿ. 2023-24ರಲ್ಲಿ ಕೊಟ್ಟಂಥ ಬಜೆಟ್‌ನ ಗಾತ್ರ ರೂ.3,27,747 ಕೋಟಿ. 2025-26ರಲ್ಲಿ ಕೊಟ್ಟಂಥ ಬಜೆಟ್‌ನ ಗಾತ್ರ ರೂ.4,09, 549 ಕೋಟಿ ಹಾಗೂ ಈ ವರ್ಷದಲ್ಲಿ ಕೊಟ್ಟ ಆಯವ್ಯಯದ ಗಾತ್ರ ರೂ.4,48,000 ಕೋಟಿ. ಸ್ವಾಭಾವಿಕವಾಗಿ ಇವತ್ತು ಚರ್ಚೆಯಾಗುತ್ತಿರುವಂಥದ್ದು ಕೇಂದ್ರದಿಂದ ನಮಗೆ ಸಿಗಬೇಕಾದ ಅನುದಾನಗಳು ಸಿಗುತ್ತಿವೆಯೇ? Devolution of tax ನಲ್ಲಿ ನಮ್ಮ ರಾಜ್ಯಕ್ಕೆ ಸಿಗಬೇಕಾದ ಪಾಲು ಸಿಗುತ್ತಿದೆಯೇ? ನಮಗೆ ಕೊಡುವಂಥ ಅನುದಾನಗಳನ್ನು ಏಕೆ ಕೇಂದ್ರ ಸರ್ಕಾರ proportionate ಆಗಿ ಕೊಡುತ್ತಿಲ್ಲ? ಸಾಲ ಹೆಚ್ಚಾಗುವುದಕ್ಕೆ ಕಾರಣ ಏನು ಎಂದು ಬಹಳ ದೊಡ್ಡ ಮಟ್ಟದ ಚರ್ಚೆಯಾಗುತ್ತಿದೆ.

ಸಾರ್ವಜನಿಕವಾಗಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. Not only Karnataka, ಭಾರತದಲ್ಲಿರುವಂಥದ್ದು ಒಕ್ಕೂಟ ವ್ಯವಸ್ಥೆಯಲ್ಲಿ ಯಾವುದೇ ಕೇಂದ್ರ ಸರ್ಕಾರವಾಗಿರಲಿ, ಅದು ಕಾಂಗ್ರೆಸ್ ಇರಬಹುದು, ಬಿಜೆಪಿ ಇರಬಹುದು ಅಥವಾ ಇನ್ನೊಂದಿರಲಿ, ರಾಜ್ಯಕ್ಕೆ ಕೊಡುವಂಥ ಅನುದಾನಗಳು ಭಿಕ್ಷೆಯಲ್ಲ. It is a mandatory right. ನಾವು ಅವರಿಂದ ಏನನ್ನೂ ಕೇಳುತ್ತಿಲ್ಲ. ನಾವು ಕೊಟ್ಟಿರುವುದಕ್ಕೆ in return ನೀವೇನು ಕೊಡಬೇಕೋ ಅದನ್ನು ಕೊಡಿ ಎಂದು ಕೇಳುತ್ತಿದ್ದೇವೆಯೇ ಅದು ಇಲ್ಲ. ಜಿ.ಎಸ್.ಟಿ.ಯನ್ನು ಈ ದೇಶದಲ್ಲಿ ತರುವಂಥ ಪ್ರಸ್ತಾವನೆಯನ್ನು ಯು.ಪಿ.ಎ. ಸರ್ಕಾರದ ಡಾ:ಮನ್‌ಮೋಹನ್ ಸಿಂಗ್ ಕೊಟ್ಟರು. ಅಂದಿನ ಕಾಲಘಟ್ಟದಲ್ಲಿ ಮಾನ್ಯ ನರೇಂದ್ರ ಮೋದಿಯವರು ಗುಜರಾತ್‌ನಲ್ಲಿ ಮುಖ್ಯಮಂತ್ರಿಯಾಗಿದ್ದರು. ಬೇರೆ ಬೇರೆ ಕಾರಣಕ್ಕೆ ಅವರು ಜಿ.ಎಸ್.ಟಿ.ಯನ್ನು ವಿರೋಧ ಮಾಡಿದರು. ಸಾಂದರ್ಭಿಕವಾಗಿ ಮತ್ತು ಕಾಲಕ್ಕೆ ಅನುಗುಣವಾಗಿ ಅವರೇ ಪ್ರಧಾನಮಂತ್ರಿಯಾಗಿ ಜಿ.ಎಸ್.ಟಿ.ಯನ್ನು ಜಾರಿಗೆ ತಂದರು. ಅದು ಒಂದು ಕಡೆ ಗುಜರಾತ್ ಮುಖ್ಯಮಂತ್ರಿಗಳಾಗಿ ಮಾನ್ಯ ನರೇಂದ್ರ ಮೋದಿಯವರು ಜಿ.ಎಸ್.ಟಿ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ, ಕೇಂದ್ರ ಸರ್ಕಾರದ ಟ್ಯಾಕ್ಸ್‌ಗಳ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಯಾವ ರಾಜ್ಯವು ಆ ರಾಜ್ಯದಿಂದ ಕೇಂದ್ರಕ್ಕೆ ಏನು ಟ್ಯಾಕ್ಸ್ ಅನ್ನು ಕೊಡುತ್ತದೆಯೋ ಅದರಲ್ಲಿ 50% ಟ್ಯಾಕ್ಸ್ in return ಆ ರಾಜ್ಯಕ್ಕೆ ಬರಬೇಕು ಎಂದು ಹೇಳಿದ್ದರು. ಇದನ್ನು ನಾವಲ್ಲ ಹೇಳಿದ್ದು. ಮಾನ್ಯ ನರೇಂದ್ರ ಮೋದಿಯವರು ಗುಜರಾತ್‌ನ

ಮುಖ್ಯಮಂತ್ರಿಯಾಗಿದ್ದಾಗ ನೀಡಿದ್ದ ಹೇಳಿಕೆಯಿದು. ಬೇರೆ ಬೇರೆ ಕಾರಣಗಳಿಗಾಗಿ ಅವರು ಅಂದು ಕೇಂದ್ರ ಸರ್ಕಾರದ ಯೋಜನೆಗಳನ್ನು ವಿರೋಧ ಮಾಡಿದ್ದಾರೆ. ಅದು ಬೇರೆ. ರಾಜಕೀಯವಾಗಿ ವಿರೋಧ ಮಾಡುವಂಥದ್ದು ಸ್ವಾಭಾವಿಕ. ಆದರೆ ಆಡಳಿತ ನಡೆಸಬೇಕಾದರೆ ಯಾವ ರೀತಿ ನಡೆದುಕೊಳ್ಳಬೇಕು ಎಂಬುದು ಪ್ರಮುಖವಾದುದು. ಕೇಂದ್ರದಲ್ಲಿ ಹಿಂದಿನ ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿರುವಂಥದ್ದು ಹಿಂದಿನ ಕಾಂಗ್ರೆಸ್ ಸರ್ಕಾರಗಳೇ. ಅಂದರೆ ಅದು ಶ್ರೀ ನೆಹರು ಸರ್ಕಾರ ಇರಬಹುದು, ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರ ಇರಬಹುದು ಅಥವಾ ಮಾನ್ಯ ರಾಜೀವ್ ಗಾಂಧಿಯವರ ಸರ್ಕಾರ ಇರಬಹುದು, ಶ್ರೀಯುತ ಪಿ.ವಿ.ನರಸಿಂಹರಾವ್ ಸರ್ಕಾರ ಇರಬಹುದು, ಡಾ:ಮನ್‌ಮೋಹನ್ ಸಿಂಗ್ ಅವರ ಸರ್ಕಾರ ಇರಬಹುದು. ಬಹಳಷ್ಟು ಕಾರ್ಯಕ್ರಮಗಳನ್ನು ಈ ದೇಶದಲ್ಲಿ ಕೊಟ್ಟಿರುವಂಥದ್ದು ಕಾಂಗ್ರೆಸ್ ಸರ್ಕಾರವಾಗಿದ್ದು, ಕರ್ನಾಟಕದಲ್ಲಿಯೂ ಕೂಡ ಯಾವತ್ತೂ ಸಹ ಜನಪರವಾದ ಯೋಜನೆಗಳನ್ನು ಕೊಟ್ಟಿರುವುದು ಕಾಂಗ್ರೆಸ್ ಸರ್ಕಾರವಾಗಿದೆ. ದಿವಂಗತ ದೇವರಾಜ ಅರಸು ಅವರು ಅಂದಿನ ಕಾಲಘಟ್ಟಕ್ಕೆ ಕ್ರಾಂತಿಕಾರಕ ಯೋಜನೆಗಳನ್ನು ತಂದರು. "ಉಳುವವನಿಗೆ ಭೂಮಿ" ಎಂದು ಇಡೀ ದೇಶದಲ್ಲಿ ಇಂಥ ಜನಪರವಾದಂಥ ಯೋಜನೆಯನ್ನು ಕರ್ನಾಟಕದಲ್ಲಿ ತರಲಾಯಿತು. ಯಾರು tenant ಆಗಿಯೋ ಅಥವಾ ಮತ್ತೊಂದು ಕಾರಣದಿಂದಲೋ ಭೂಮಿಯನ್ನು ಉಳುಮೆ ಮಾಡುತ್ತಿರುತ್ತಾರೆಯೋ ಅವರಿಗೆ ಭೂಮಿ ಎನ್ನುವಂಥ ಕ್ರಾಂತಿಕಾರಕ ಯೋಜನೆಯನ್ನು ಕೊಟ್ಟಿದ್ದು ಮಾನ್ಯ ದೇವರಾಜ ಅರಸು ಅವರ ಕಾಂಗ್ರೆಸ್ ಸರ್ಕಾರ. ಮತ್ತೆ ಶ್ರೀ ಎಸ್. ಬಂಗಾರಪ್ಪನವರ ಅವಧಿಯನ್ನು ನೋಡೋಣ. ಎಲ್ಲರೂ ಕೊಟ್ಟಿದ್ದಾರೆ. ಒಬ್ಬೊಬ್ಬರ ಕಾಲದಲ್ಲಿ ಒಂದೊಂದು ಯೋಜನೆಯಾಗಿದೆ. ಶ್ರೀ ಎಸ್. ಎಂ. ಕೃಷ್ಣ ಅವರಿರಬಹುದು, ಶ್ರೀ ವೀರಪ್ಪ ಮೊಯಿಲಿಯವರಿರಬಹುದು. ಬಹಳ ಪ್ರಮುಖವಾಗಿ ಮಾನ್ಯ ಬಂಗಾರಪ್ಪನವರ ವಿಚಾರಕ್ಕೆ ಬಂದರೆ ಇಡೀ ರಾಜ್ಯದಲ್ಲಿ ರೈತರಿಗೆ ಉಚಿತ ವಿದ್ಯುತ್ ಅನ್ನು ಕೊಟ್ಟಂಥ ಕೀರ್ತಿ ಶ್ರೀಯುತ ಬಂಗಾರಪ್ಪನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ. ಇವತ್ತು ಸುಮಾರು ರೂ.26,000 ಕೋಟಿ ವೆಚ್ಚದಲ್ಲಿ ಉಚಿತ ವಿದ್ಯುತ್ ಯೋಜನೆಯಡಿ ರೈತರಿಗೆ ಉಚಿತ ವಿದ್ಯುತ್ ಕೊಡುತ್ತಿರುವುದನ್ನು ನಾವು ನೋಡಬಹುದು. ಇಂದಿನ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅದನ್ನು ಮುಂದುವರೆಸುತ್ತಿದೆ. ಅದೇ ರೀತಿ ಮಾನ್ಯ ಸಿದ್ದರಾಮಯ್ಯನವರು ಎಲ್ಲಿಯೂ ಇಲ್ಲದೆ ಇದ್ದಂಥ ಅನ್ನಭಾಗ್ಯ ಯೋಜನೆಯನ್ನು ಕೊಟ್ಟರು. ಈಗ ಪುನಃ ಮಾನ್ಯ ಸಿದ್ದರಾಮಯ್ಯನವರು ಮತ್ತು ಮಾನ್ಯ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಂದು ಯೋಜನೆಯನ್ನು ರೂಪಿಸಿಕೊಂಡು ಇಡೀ ರಾಜ್ಯದಲ್ಲಿ ಗ್ಯಾರಂಟಿಯನ್ನು ತಂದಿದೆ. ಇಂದು ಸುಮಾರು ರೂ.58,000 ಕೋಟಿಗಳನ್ನು ಗ್ಯಾರಂಟಿ ರೂಪದಲ್ಲಿ ಕೊಡುತ್ತಿದೆ. ಬೇರೆ ಬೇರೆ ರೂಪದಲ್ಲಿ ಪ್ರತಿ ಕುಟುಂಬಕ್ಕೆ ವಾರ್ಷಿಕವಾಗಿ ರೂ.50-60 ಸಾವಿರಗಳನ್ನು ಕರ್ನಾಟಕದಲ್ಲಿರುವಂಥ ಸುಮಾರು 1.2 ಕೋಟಿ ಕುಟುಂಬಗಳಿಗೆ ಇವತ್ತು ಅನುಕೂಲವಾಗುತ್ತಿದೆ.

(ಮುಂದು)

(384) 13.03.2026, 1.20, ಕೆಜಿ : ಆರ್‌ಎನ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ರಮೇಶ್ ಬಾಬು (ಮುಂದು):-**

ಇದನ್ನು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿಯೇ ಉತ್ತರವನ್ನು ಮಂಡನೆ ಮಾಡಿದ್ದಾರೆ. ಅದು ದಾಖಲೆಯಲ್ಲಿದೆ. ಗ್ಯಾರಂಟಿಗಳನ್ನು ಕೊಟ್ಟಿದ್ದರಿಂದ ಏನಾದರೂ ಸಾಲ ಮಾಡುವಂತಹ ಅನಿವಾರ್ಯತೆ ಆಗಿದೆಯೇ ಎಂದು ಪ್ರಶ್ನೆ ಇರುವಂತಹದ್ದಾಗಿದೆ. ಖಂಡಿತವಾಗಿ ಇಲ್ಲ. ನಮ್ಮ ದೇಶದಲ್ಲಿ ಮಾನ್ಯ ಸಿದ್ದರಾಮಯ್ಯನವರ ಹಾಗೂ ಮಾನ್ಯ ಡಿ.ಕೆ.ಶಿವಕುಮಾರ್‌ರವರ ಸರ್ಕಾರ ಗ್ಯಾರಂಟಿಗಳನ್ನು ಕೊಟ್ಟ ನಂತರ, ಈ ದೇಶದಲ್ಲಿ 9 ರಾಜ್ಯ ಸರ್ಕಾರಗಳು ಗ್ಯಾರಂಟಿ ಯೋಜನೆಗಳನ್ನು ಕೊಡುತ್ತಿವೆ. ನಾನು ಇದನ್ನು ಹೇಳುವಂತಹದ್ದಲ್ಲ. ಇವತ್ತು PRS Legislative Research ಎಂಬ ಒಂದು ಸಂಸ್ಥೆ ಅಂಕಿ-ಅಂಶಗಳನ್ನು ಮಂಡನೆ ಮಾಡಿದೆ. ಆ ಸಂಸ್ಥೆ ಕೊಟ್ಟಿರುವಂತಹ ಅಂಕಿ-ಅಂಶಗಳಾಗಿವೆ. ಇವತ್ತು ಬೇರೆ ಬೇರೆ ಕಾರಣಕ್ಕೆ ಅವರು ಕೊಟ್ಟಿರುವಂತಹ ವರದಿಯಲ್ಲಿ ತಾವು ಯಾವುದೇ ಯೋಜನೆಯನ್ನು ತೆಗೆದುಕೊಂಡರೂ ಸಹ ಕರ್ನಾಟಕ ಅಗ್ರಸ್ಥಾನದಲ್ಲಿದೆ.

ಮಾನ್ಯ ಸಭಾಪತಿಯವರೇ, ಈಗ ಉದಾಹರಣೆಗೆ, own taxes revenue is the largest source of revenue for most States. ನಮ್ಮ own State ನಲ್ಲಿ ಜಿಎಸ್‌ಟಿ ಬಂದ ನಂತರ ತಾಂತ್ರಿಕವಾಗಿ ಕೆಲವು ಸಮಸ್ಯೆಗಳು ಇವೆ. GST Council ನಲ್ಲಿ ಹೆಚ್ಚು ರಾಜ್ಯಗಳು ಏನು ಅಭಿಪ್ರಾಯವನ್ನು ಕೊಡುತ್ತವೆಯೋ, ಆ ಅಭಿಪ್ರಾಯಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಮಾರ್ಪಡು ಮಾಡುವುದಕ್ಕೆ ಅವಕಾಶ ಇದ್ದರೂ ಸಹ, ಬಹುತೇಕ ಬಿಜೆಪಿ ಸರ್ಕಾರ ಇರುವ ರಾಜ್ಯಗಳು GST Council ನಲ್ಲಿ ಸದಸ್ಯರು ಇರುವುದರಿಂದ ಕರ್ನಾಟಕ ಆಗಲಿ, ತಮಿಳುನಾಡು ಆಗಲಿ, ಆಂಧ್ರ ಪ್ರದೇಶ ಆಗಲಿ ಅಥವಾ ಕೇರಳ ಆಗಲಿ ಕೊಟ್ಟಂತಹ ಬದಲಾವಣೆಯ proposal ಇವತ್ತು GST Council ನಲ್ಲಿ implement ಆಗುತ್ತಿಲ್ಲ. ನಾವು ಅನಿವಾರ್ಯವಾಗಿ ನಮ್ಮ ಸ್ವಂತ ತೆರಿಗೆಗಳ ಮೇಲೆ, ಸ್ವಂತ ಆದಾಯಗಳ ಮೇಲೆ ರಾಜ್ಯ ಸರ್ಕಾರಗಳು ಯೋಜನೆಗಳನ್ನು ರೂಪಿಸಬೇಕಾಗಿದೆ. ಇವತ್ತು, ದೆಹಲಿಯನ್ನು ಹೊರತು ಪಡಿಸಿದರೆ, own funds ನಲ್ಲಿ ಇರುವಂತಹ ಹೆಚ್ಚು ರೆವಿನ್ಯೂ ಇರುವಂತಹ ರಾಜ್ಯಗಳಲ್ಲಿ ನಾವು 4ನೇ ಸ್ಥಾನದಲ್ಲಿದ್ದೇವೆ. ದೆಹಲಿ 84%, ಕರ್ನಾಟಕ 71%, ಮಹಾರಾಷ್ಟ್ರ 69% ಹಾಗೂ ಹರಿಯಾಣ 72% ಇದೆ. ಇವತ್ತು ಕರ್ನಾಟಕ್ಕೆ ಬಂದರೆ, own tax 71%, own non-tax 6%, devolution of the funds, Central Government ನಿಂದ ಬರುವಂತಹದ್ದು 18%, ಮತ್ತೆ Central grants-in-aid 5% ಕರ್ನಾಟಕಕ್ಕೆ ಸಿಗುತ್ತಿದೆ. ಇನ್ನು ಬಿಹಾರ ಬಂದರೆ, own tax 23%, own non-tax 3%, devolution of funds 53%, grants-in-aid 21% ಇದೆ. ಅದೇ ರೀತಿ BJP rule ನಲ್ಲಿರುವಂತಹ ಉತ್ತರ ಪ್ರದೇಶಕ್ಕೆ ಬಂದರೆ, own tax 45%, own non-tax 4%, devolution of funds 39%, ಮತ್ತೆ grants-in-aid 13% ಇದೆ. ಅಂದರೆ, ನಾವು ಹೆಚ್ಚು ತೆರಿಗೆಯನ್ನು ಕೊಟ್ಟರೂ ಸಹ, ಕೇಂದ್ರ ಸರ್ಕಾರದ ಏನೊಂದು parameters ಇದೆ ಅಥವಾ ಅವರು

ಅನುಸರಿಸಿಕೊಂಡಿರುವಂತಹ Finance Commission ಮೂಲಕ ಮಾಡಿಕೊಂಡಿರುವಂತಹ ಪದ್ಧತಿ ಏನಿದೆ, ಅದಕ್ಕೆ ಅನುಗುಣವಾಗಿ ನಮಗೆ ಸಿಗುತ್ತಿರುವಂತಹ ಅನುದಾನಗಳು ಕಡಿಮೆ ಆಗಿವೆ.

ಮಾನ್ಯ ಸಭಾಪತಿಯವರೇ, ಈಗ ವಿಶೇಷವಾಗಿ Finance Commission, ರಾಜ್ಯಗಳಿಗೆ ಶಕ್ತಿಯನ್ನು ತುಂಬಬೇಕು ಎನ್ನುವ ಉದ್ದೇಶದಿಂದ Finance Commission ಅನ್ನು ಮಾಡಲಾಗಿದೆ. ಕೇಂದ್ರದಿಂದ ಬರುವಂತಹ ತೆರಿಗೆ ಅಥವಾ ಆದಾಯಗಳು ಏನಿದೆ, ಅದರಲ್ಲಿ ಹೆಚ್ಚು ಪಾಲನ್ನು ನಮಗೆ ಕೊಡಬೇಕು ಎನ್ನುವ ನಿಟ್ಟಿನಲ್ಲಿ ಚರ್ಚೆ ಆಗುತ್ತಿದೆ. 14th Finance Commission ನಲ್ಲಿ ಕರ್ನಾಟಕಕ್ಕೆ allocation 4.71% ಅನ್ನು ಕೊಡಲಾಗಿದೆ. ಅದೇ ರೀತಿ 15th Finance Commission ನಲ್ಲಿ ಕರ್ನಾಟಕಕ್ಕೆ allocation 3.65%, ಮತ್ತೆ, 16th Finance Commission ನಲ್ಲಿ ಕರ್ನಾಟಕಕ್ಕೆ allocation 4.13% ಅನ್ನು ಕೊಡಲಾಗಿದೆ. ಈಗ 16ನೇ ಹಣಕಾಸು ಆಯೋಗದಿಂದ ಸ್ವಲ್ಪಮಟ್ಟಿನ ಹಣಕಾಸು ಸೌಲಭ್ಯ ನಮಗೆ ಜಾಸ್ತಿಯಾಗಿದೆ. ಆದರೆ, ಉತ್ತರ ಪ್ರದೇಶಕ್ಕೆ 14th Finance Commission ನಲ್ಲಿ allocation 17.96%, 15ನೇ ಹಣಕಾಸು ಆಯೋಗದಲ್ಲಿ 17.94% ಹಾಗೂ 16ನೇ ಹಣಕಾಸು ಆಯೋಗದಲ್ಲಿ 17.62% ಸಿಗುತ್ತಿದೆ. ಇನ್ನು ಬಿಹಾರಕ್ಕೆ 14th Finance Commission 9.67%, 15ನೇ ಹಣಕಾಸು ಆಯೋಗದಲ್ಲಿ 10.06% ಹಾಗೂ 16ನೇ ಹಣಕಾಸು ಆಯೋಗದಲ್ಲಿ 9.95% ಅನ್ನು ಕೊಡಲಾಗಿದೆ. ನಮ್ಮ ರಾಜ್ಯದ ವಿಷಯ ಬಂದಾಗ, ನಾವು ರಾಜಕಾರಣ ಮಾಡಿ ಮಾತನಾಡುವಂತಹದ್ದಲ್ಲ ಎಂಬುದಕ್ಕೆ ನಾನು ಈ ಅಂಕಿ-ಅಂಶಗಳನ್ನು ಕೊಡುತ್ತಿದ್ದೇನೆ. ಕೇಂದ್ರ ಸರ್ಕಾರದ ನೀತಿಗಳು ಏನಿವೆ, ಕೇಂದ್ರ ಸರ್ಕಾರ ಜಾರಿಗೆ ಕೊಟ್ಟಿರುವಂತಹ scheme ಗಳು ಏನಿವೆ ಅಥವಾ ಅವರು ಏನು ಮಾಡುತ್ತಿದ್ದಾರೆ, ಅದರ ಕಾರಣಕ್ಕೆ ರಾಜ್ಯಕ್ಕೆ ಏನು ಅನ್ಯಾಯವಾಗುತ್ತಿದೆ ಎನ್ನುವುದರ ಬಗ್ಗೆ ಪಕ್ಷಾತೀತವಾಗಿ ಎಲ್ಲರೂ ಧ್ವನಿ ಎತ್ತಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಇವತ್ತು ನಮ್ಮ ರಾಜ್ಯಕ್ಕೆ ಏನು ಅನ್ಯಾಯವಾಗುತ್ತಿದೆ, ಇದನ್ನು ಪ್ರತಿಭಟನೆಯ ರೂಪದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಭಾಗಿಯಾಗಿ ದೆಹಲಿಯಲ್ಲಿ strike ಮಾಡಿ ಪ್ರತಿಭಟನೆಯನ್ನು ದಾಖಲು ಮಾಡಿದರು. ಸರ್ವೋಚ್ಚ ನ್ಯಾಯಾಲಯದಲ್ಲಿ petition ಅನ್ನು ದಾಖಲು ಮಾಡಿ ನಮ್ಮ ಪ್ರತಿಭಟನೆಯನ್ನು ದಾಖಲು ಮಾಡಿದರು. ಆದರೂ ಸಹ, ಇವತ್ತಿನವರೆಗೂ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಕೊಡಬೇಕಾದ ಪಾಲನ್ನು ನ್ಯಾಯಯುತವಾಗಿ ಹಂಚಿಕೆ ಮಾಡಿಲ್ಲ. ಈಗಾಗಲೇ ಏನು allocation declare ಮಾಡಿದ್ದಾರೆ. ಅದರ ಪ್ರಕಾರ, ಆ 14ನೇ ಹಣಕಾಸು ಆಯೋಗದಲ್ಲಿ ಹಣಕಾಸನ್ನು ಕೊಟ್ಟಿಲ್ಲ. 15ನೇ ಹಣಕಾಸು ಆಯೋಗದಲ್ಲಿ ಆದಂತಹ allocation of funds ಅನ್ನು ಇವತ್ತಿನವರೆಗೂ ಬಿಡುಗಡೆ ಮಾಡಿಲ್ಲ. ಅಲ್ಲದೇ, ಅವರು ಕೇಂದ್ರ ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತಹ ಆ ಅನುದಾನಗಳನ್ನು ಸಹ ಇವತ್ತಿನವರೆಗೂ ಕೊಟ್ಟಿಲ್ಲ. ಹಾಗಾಗಿ, ಇದನ್ನು ಪ್ರಶ್ನೆ ಮಾಡಿದರೆ ಅಥವಾ ಮಾನ್ಯ ಸಿದ್ದರಾಮಯ್ಯನವರು ದಾಖಲೆ ಸಮೇತವಾಗಿ ರಾಜ್ಯದ ಜನರ ಮುಂದೆ ಇಟ್ಟರೆ, ಅದಕ್ಕೆ ಟೀಕೆ ಮಾಡುವಂತಹದ್ದನ್ನು ನಾವು ರಾಜಕೀಯ ಟೀಕೆ ಎಂದು ಕರೆಯಬೇಕೇ ಅಥವಾ

ಅದನ್ನು ಓಲೈಕೈ ಎಂದು ಕರೆಯಬೇಕೇ? ಇದು ರಾಜ್ಯದಲ್ಲಿದೆ. ಸರಿಯೋ ಅಥವಾ ತಪ್ಪೋ ಈ ರಾಜ್ಯದ ಜನರು ಒಂದು ಬಾರಿ ಚುನಾವಣೆಯಲ್ಲಿ ತೀರ್ಮಾನವನ್ನು ಕೊಟ್ಟ ಸಂದರ್ಭದಲ್ಲಿ ನಾವು ಒಪ್ಪಿಕೊಳ್ಳಬೇಕಾಗುತ್ತದೆ. 1999 ನೇ ಸಾಲಿನಿಂದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳನ್ನು ನಿರಂತರವಾಗಿ ಲೋಕಸಭೆಗೆ ಹೆಚ್ಚು ಸ್ಥಾನಗಳನ್ನು ಕೊಟ್ಟು ಗೆಲ್ಲಿಸುತ್ತಿದ್ದಾರೆ. ಒಂದು ಬಾರಿ 19 ಸೀಟು, ಒಂದು ಬಾರಿ 20 ಸೀಟು, ಒಂದು ಬಾರಿ 22 ಸೀಟು ಹಾಗೂ ಮತ್ತೊಂದು ಬಾರಿ 25 ಸೀಟುಗಳನ್ನು ಕೊಟ್ಟು ಗೆಲ್ಲಿಸುತ್ತಿದ್ದಾರೆ. ಆದರೆ, ನಮ್ಮ ರಾಜ್ಯದ ವಿಚಾರ ಬಂದಂತಹ ಸಮಯದಲ್ಲಿ ಧ್ವನಿ ಎತ್ತಬೇಕಾಗಿರುವುದು ಲೋಕಾಸಭಾ ಸದಸ್ಯರ ಒಂದು ಕರ್ತವ್ಯ ಆಗಿದೆ. ಅವರು ರಾಜ್ಯದ ಬಗ್ಗೆ ಧ್ವನಿ ಎತ್ತದೆ, ಮಾನ್ಯ ಸಿದ್ದರಾಮಯ್ಯನವರು ತಪ್ಪು ದಾರಿ ಮಾಡುತ್ತಿದ್ದಾರೆಂದರೆ ಹೇಗೆ? ಅವರು ತಪ್ಪು ದಾರಿ ಮಾಡುವಂತಹ ಪ್ರಶ್ನೆಯೇ ಇಲ್ಲ. ಅವರು ಕೇಂದ್ರ ಸರ್ಕಾರದ ಅಂಕಿ-ಅಂಶಗಳನ್ನು ತೆಗೆದು ನೋಡಲಿ. ಇವತ್ತು ನಾವು ಎಷ್ಟು ಸಾಲವನ್ನು ಮಾಡಿಕೊಂಡು ಬಂದಿದ್ದೇವೆ. ಅದೇ ರೀತಿ ಕೇಂದ್ರ ಸರ್ಕಾರ ಸಾಲದ ವಿಚಾರದಲ್ಲಿ ಯಾವ ಸ್ಥಾನದಲ್ಲಿದೆ ಎಂಬುದನ್ನು ಅವರು ಹೇಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, State-wise grant-in-aid for 2026-2031, ಐದೈದು ವರ್ಷಕ್ಕೆ grant-in-aid ಕೊಡುವಂತಹ allocation ಕೇಂದ್ರ ಸರ್ಕಾರ ಏನು ಮಾಡಿದೆ, ಕರ್ನಾಟಕಕ್ಕೆ 15,111 ಕೋಟಿ ರೂಪಾಯಿಗಳ basic allocation ಅನ್ನು ಮಾಡಿದೆ. ಆದರೆ, performance ನಲ್ಲಿ ಕರ್ನಾಟಕಕ್ಕೆ 1,889 ಕೋಟಿ ರೂಪಾಯಿಗಳು ಸಿಕ್ಕಿದೆ. ಆ ಕೊಟ್ಟಂತಹ ಅಷ್ಟು ಹಣವನ್ನು State performance ಉಪಯೋಗವಾಗಿದೆ. ಅದೇ ರೀತಿ Local Bodies ಗೆ 14,786 ಕೋಟಿ ರೂಪಾಯಿಗಳು allocation ಆಗಿದೆ. ಇದುವರೆಗೆ 1,849 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. Disaster Management, ಏನು ಬೇರೆ ಬೇರೆ ಸಂದರ್ಭಗಳಲ್ಲಿ ಬರಗಾಲ ಇರಬಹುದು, ಅತಿವೃಷ್ಟಿ ಇರಬಹುದು, ಅನಾವೃಷ್ಟಿ ಇರಬಹುದು ಅದಕ್ಕೆ ಒಂದು allocation ಇರುತ್ತದೆ. ಅಲ್ಲೂ ಸಹ ಇವರು ಮಲತಾಯಿ ಧೋರಣೆ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರವನ್ನು ಗೌರವಯುತವಾಗಿ ಯಾವ ರೀತಿ ನಡೆಸಿಕೊಳ್ಳಬೇಕು ಆ ಕೆಲಸವನ್ನು ಮಾಡುತ್ತಿಲ್ಲ. ಅಲ್ಲೂ ಸಹ ಕರ್ನಾಟಕಕ್ಕೆ 6,419 ಕೋಟಿ ರೂಪಾಯಿಗಳು ಸಿಕ್ಕಿದೆ. ಬಿಹಾರಕ್ಕೆ 13,615 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಉತ್ತರ ಪ್ರದೇಶಕ್ಕೆ 15,321 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾನು ಕೇವಲ ಎರಡು ರಾಜ್ಯಗಳನ್ನು ಮಾತ್ರ ಉಲ್ಲೇಖ ಮಾಡಿ ಹೇಳುತ್ತಿದ್ದೇನೆ. ಏಕೆಂದರೆ, ಯಾರು ಬಿಜೆಪಿ ಪರವಾಗಿ ಇದ್ದಾರೆಯೋ, ಅಂತಹ ರಾಜ್ಯಗಳಿಗೆ ಓಲೈಕೆ ಮಾಡುವಂತಹದ್ದು, ಅವರಿಗೆ ಹೆಚ್ಚು ಅನುದಾನ ಕೊಡುವಂತಹದ್ದು, ನಮ್ಮ ರಾಜ್ಯಕ್ಕೆ ನ್ಯಾಯಯುತವಾಗಿ ಕೊಡುವಂತಹ ಹಣದಲ್ಲಿ ವ್ಯತ್ಯಾಸ ಮಾಡುವಂತಹದ್ದನ್ನು ಕೇಂದ್ರ ಸರ್ಕಾರ ಮಾಡಿಕೊಂಡು ಬಂದಿದೆ. ಆದ್ದರಿಂದ, ಕೇಂದ್ರ ಸರ್ಕಾರ ಇದರಿಂದ ಆಚೆ ಬರಬೇಕಾಗುತ್ತದೆ. ನಮ್ಮ ರಾಜ್ಯಕ್ಕೆ ಅವರು ಯಾವುದು favour ಮಾಡುವುದು ಬೇಕಾಗಿಲ್ಲ. ನಮ್ಮ ರಾಜ್ಯಕ್ಕೆ ನ್ಯಾಯಯುತವಾಗಿ ಏನು allocation ಕೊಡಬೇಕಾಗಿದೆ, ಅದನ್ನು ಕೊಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಇವತ್ತು ರಾಜ್ಯದಲ್ಲಿ GSDP growth ಎಷ್ಟಿದೆ ಎಂದು ಬಹಳ ಚರ್ಚೆಯಾಗುತ್ತದೆ. ಸಾಮಾನ್ಯವಾಗಿ ಸಾಲ ತೆಗೆದುಕೊಂಡರೆ, GSDP growth ಕಡಿಮೆಯಾಗಬೇಕು ಅಲ್ಲವೇ: ನಮ್ಮ ರಾಜ್ಯದಲ್ಲಿ 2020-2021 ನೇ ಸಾಲಿನಲ್ಲಿ 26% ಇತ್ತು. ಇವತ್ತು 27% ಇದೆ. 2021-2022ನೇ ಸಾಲಿನಲ್ಲಿ 26%. 2022-2023ನೇ ಸಾಲಿನಲ್ಲಿ 27%, ಮತ್ತೆ 2023-2024ನೇ ಸಾಲಿನಲ್ಲಿ 27%, 2024-2025ನೇ ಸಾಲಿನಲ್ಲಿ 27%, ಮತ್ತೆ 2025-2026ನೇ ಸಾಲಿನಲ್ಲಿ 27%. ಇದು GSDP. ಇದು 15th Finance Commission ನಲ್ಲಿ ಕೊಟ್ಟಿರುವಂತಹ ಅಂಕಿಅಂಶಗಳು. ಹಾಗಾಗಿ, ರಾಜ್ಯದಲ್ಲಿ ಏನು Fiscal Deficit Act ಒಳಗಡೆ ನಾವು ಸಾಲವನ್ನು ತೆಗೆದುಕೊಂಡು ಮಾಡುತ್ತಿರುವಂತಹ ಮಾನ್ಯ ಸಿದ್ದರಾಮಯ್ಯನವರ ಸಾಧನೆ ಏನಿದೆ, ಅದನ್ನು ಯಾರು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮದು average growth.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು yield ಆದರೆ, ಎರಡು ಮಾತುಗಳನ್ನು ಹೇಳುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಪರವಾಗಿಲ್ಲ. ಅವರಿಗೆ ಅವಕಾಶ ಇದ್ದಾಗ ಮಾತನಾಡಲಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು party stand ಅನ್ನು ಮತ್ತು ಬಜೆಟ್ ಬಗ್ಗೆ ಹೇಳಲಿ. ಈಗ ಉದಾಹರಣೆಗೆ, ಕರ್ನಾಟಕ ರಾಜ್ಯದ ವಿಷಯಕ್ಕೆ ಸಂಬಂಧಪಟ್ಟಂತೆ, ಬಹಳ experience ಇರುವಂತಹ Chief Minister, not like other States. ಅವರು ಒಬ್ಬ ಅನುಭವ ಇರುವಂತಹ ರಾಜಕಾರಣಿಗಳು.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, other States ಎಂದರೆ, ಯಾವುವು ಎಂದು ಮಾನ್ಯ ಸದಸ್ಯರು ಹೇಳಲಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ರಾಜ್ಯಗಳು ಇವೆ. ಈಗ ಉದಾಹರಣೆಗೆ ನಾವು ಹಗುರವಾಗಿ ಮಾತನಾಡುವುದಿಲ್ಲ. ಮೊದಲನೆಯದಾಗಿ, continuously deficit Budget. ಎರಡನೆಯದಾಗಿ, continuously ಸಾಲ ಹೆಚ್ಚಳ. Continuously, ಕೇಂದ್ರ ಸರ್ಕಾರವನ್ನು ಟೀಕೆ ಮಾಡುವುದು. ಈಗ ಉದಾಹರಣೆಗೆ, ಅವರು ಮಹಾರಾಷ್ಟ್ರದ ಬಜೆಟ್‌ನ್ನು ತೆಗೆದುಕೊಂಡಿದ್ದಾರೆ. ಅವರು ಸಾಲ ಮಾಡುವುದರಲ್ಲಿ decrease ಆದರು. ಎಷ್ಟು percent ಕಡಿಮೆ ಆಯಿತು ಎಂದು ಅವರು ಅಂಕಿ-ಅಂಶಗಳನ್ನು ತೆಗೆದುಕೊಳ್ಳಲಿ. ನಾನು ಬೇಕಾದರೆ, ಅವರಿಗೆ ಅಂಕಿ-ಅಂಶಗಳನ್ನುಕೊಡುತ್ತೇನೆ.

(ಮುಂದು)

(385) 13.03.2026 01.30 LL-RN (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎನ್. ರವಿಕುಮಾರ್ (ಮುಂದು):-**

ಅದು ಶೇಕಡ ಎಷ್ಟು ಕಡಿಮೆ ಆಯಿತು ಎಂಬ ಮಾಹಿತಿಯನ್ನು ಅವರು ತೆಗೆದುಕೊಳ್ಳಲಿ. ಬೇಕಾದರೆ ನಾನು ಕೂಡ ಮಾಹಿತಿಯನ್ನು ಕೊಡುತ್ತೇನೆ. ಈ ಹಿಂದೆ ಕೇಂದ್ರ ಸರ್ಕಾರ ಕೂಡ ಸಾಲ ಮಾಡುವುದರಲ್ಲಿ ಕೆಳಗಡೆ ಬಂದಿರುತ್ತದೆ. ಅದಕ್ಕೋಸ್ಕರ ತಾವು ಕಳೆದ ಸಾಲಿನ ಬಜೆಟ್ ಅನ್ನು ಹಾಗೂ ಈ ಪ್ರಸಕ್ತ ಸಾಲಿನ ಬಜೆಟ್ ಅನ್ನು ಪರಿಶೀಲನೆ ಮಾಡಲಿ.

**ಶ್ರೀ ಎನ್.ಎಸ್. ಭೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಾಲ ಮಾಡುವುದರಲ್ಲಿ ಕೇಂದ್ರ ಸರ್ಕಾರ ಯಾವಾಗ ಕೆಳಗಡೆ ಬಂದಿರುತ್ತದೆ? It is very clear.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿ ಹೋಗುತ್ತಿದೆ. ಒಂದು ನಿಮಿಷ ಅವರು ನನ್ನ ಮಾತನ್ನು ಕೇಳಲಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಶರಣಪ್ರಕಾಶ್‌ರವರೇ, ತಾವು ಮಾತನಾಡಿ. ಉದಾಹರಣೆಗೆ ಹೇಳುವುದಾದರೆ, ಇರುವಂತಹ ವಿಚಾರವನ್ನು ಯಾರೂ ಕೂಡ ಮುಚ್ಚುಮರೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ನಾನು ಏನು ಹೇಳುತ್ತಿದ್ದೇನೆಂದರೆ, ಮಾನ್ಯ ಸಿದ್ದರಾಮಯ್ಯನವರಂತಹ ಹಿರಿಯರು, ಅನುಭವಿ ಆರ್ಥಿಕ ಸಚಿವರು, continuously deficit, continuously ಲಕ್ಷಾಂತರ ಕೋಟಿ ಸಾಲ ಮಾಡುವುದು ಎಂದರೆ ಏನು ಅರ್ಥ? ಈ ವಿಚಾರದ ಬಗ್ಗೆ ಮಾನ್ಯ ಕೆ.ಎಸ್. ನವೀನ್‌ರವರು ಬಜೆಟ್ ಮೇಲಿನ ಭಾಷಣದಲ್ಲಿ ಮಾತನಾಡುತ್ತಾ, "ನಾವು ಸಾಲದ ಸುಳಿಯಲ್ಲಿ ಇದ್ದೇವೆ" ಎಂದು ಬಹಳ ಚೆನ್ನಾಗಿ ಹೇಳಿದರು. ಸುಳಿ ಎಂದರೇನು? ಸುಳಿಯಲ್ಲಿ ಇರುವುದು ಬೇರೆ, ಸಾಧಾರಣವಾಗಿ ಈಜುವುದು ಬೇರೆ. ಸಾಮಾನ್ಯವಾದ ಹಳ್ಳಿಭಾಷೆಯಲ್ಲಿ, "ಸುಳಿಯಲ್ಲಿ ಸಿಕ್ಕಿ ಹಾಕಿಕೊಳ್ಳಬೇಡ" ಎಂದು ಹೇಳುತ್ತಾರೆ. ಅಲ್ಲಿ ಸುಳಿ ಇದೆ, ಅಲ್ಲಿಗೆ ಹೋಗಬೇಡ ಎಂದು ಹೇಳುತ್ತಾರೆ. ಈ ವಿಚಾರ ನಮ್ಮ ಶ್ರೀ ಶಾಂತರಾಮ ಸಿದ್ದಿಯವರಿಗೆ ಚೆನ್ನಾಗಿ ಗೊತ್ತಿದೆ. ಯಾವುದಾದರೂ ನೀರು ಹರಿಯುವಂತಹ ಹಳ್ಳದಲ್ಲಿ ಅಥವಾ ನದಿಗಳಲ್ಲಿ ಈಜುವುದಕ್ಕೆ ಹೋದರೆ, ಅಲ್ಲಿ ಸುಳಿ ಇದೆ. ಅಲ್ಲಿಗೆ ಹೋಗಬೇಡ. ಆ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತೀಯಾ ಎಂದು ಹೇಳುತ್ತಾರೆ. ಆ ರೀತಿಯ ಸಾಲದ ಸುಳಿಯಲ್ಲಿ ನಮ್ಮ ರಾಜ್ಯದ ಜನರು ಸಿಕ್ಕಿಹಾಕಿಕೊಂಡಿರುತ್ತಾರೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸದಸ್ಯರು ನಂತರ ಮಾತನಾಡಲಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಿಂದ ಎಷ್ಟು ತೆರಿಗೆ ಸಂಗ್ರಹವಾಗುತ್ತಿದೆ. ಅದೇ ರೀತಿ, ಯಾದಗಿರಿ ಜಿಲ್ಲೆಯಿಂದ ಎಷ್ಟು ತೆರಿಗೆ ಸಂಗ್ರಹವಾಗುತ್ತಿದೆ?

**ವೈಸ್ ಛೇರ್ಮನ್:-** ಮಾನ್ಯ ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬುರವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಲಿ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾನ್ಯ ರವಿಕುಮಾರ್‌ರವರು ಹೇಳಿದಂತಹ ವಿಚಾರಕ್ಕೆ ನಾನು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. "ನಮ್ಮ ರಾಜ್ಯದಲ್ಲಿ ನಾವು ಸಾಲದ ಸುಳಿಯಲ್ಲಿ ಸಿಲುಕಿದ್ದೇವೆ" ಎಂದು ಅವರು ಹೇಳಿರುತ್ತಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಬಿಹಾರ ಮತ್ತು ಉತ್ತರ ಪ್ರದೇಶ ರಾಜ್ಯಗಳಿಗೆ ಹೆಚ್ಚು ಅನುದಾನ ಕೊಟ್ಟಿದ್ದಾರೆಂದು ಆಡಳಿತ ಪಕ್ಷದವರು ಹೇಳುತ್ತಿದ್ದಾರೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಹೇಳುವುದನ್ನು ಹೇಳಿ ಆಗಿದೆ. Their points have been taken. Kindly, they have to hear me.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದು ನನಗೆ ಅರ್ಥವಾಗಿದೆ. ದಯಮಾಡಿ ಅವರು ಕುಳಿತುಕೊಳ್ಳಲಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಬಿಹಾರ ಹಾಗೂ ಉತ್ತರ ಪ್ರದೇಶ ರಾಜ್ಯಗಳಿಗೆ ಹೆಚ್ಚಿನ ಅನುದಾನ ಕೊಟ್ಟಿದ್ದಾರೆಂದು ಹೇಳಿರುತ್ತಾರೆ. ಆದರೆ, ಅಲ್ಲಿನ ಜನಸಂಖ್ಯೆ ಏನು, ಅಲ್ಲಿ ಬಡತನ ಪ್ರಮಾಣ ಏನು?

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಲ್ಲಿನ ಬಡತನ ಎಂದು ಹೇಳಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಡತನ ಇರುವುದಿಲ್ಲವೇ?

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಒಬ್ಬ ಸದಸ್ಯರು ಮಾತನಾಡುವಾಗ ಈ ರೀತಿ ಕೌಂಟರ್ ಮಾಡುವುದು ಸರಿಯಲ್ಲ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವರು ಸದನಕ್ಕೆ ದಾರಿ ತಪ್ಪಿಸುವಂತಹ ಕೆಲಸ ಮಾಡುತ್ತಿದ್ದಾರೆ. ನಾನು ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ನಮ್ಮ ಬಜೆಟ್‌ನ್ನು ಮತ್ತು ಕೇಂದ್ರ ಸರ್ಕಾರದ ಬಜೆಟ್‌ನ್ನು ಹೋಲಿಕೆ ಮಾಡಿ ನೋಡಲಿ. ಯಾವುದೇ ರಾಜ್ಯದ ಬಜೆಟ್, ಅದು ಒಳ್ಳೆಯ ಬಜೆಟ್ ಎಂದು ಯಾವಾಗ ಹೇಳುವುದಕ್ಕೆ ಸಾಧ್ಯವಾಗುತ್ತದೆ ಎಂದರೆ, ನಾವೇ ಮಾಡಿಕೊಂಡಿರುವಂತಹ Fiscal Management Responsibility Act ನಲ್ಲಿ ಮೂರು ಮಾನದಂಡಗಳು ಇವೆ. ಅವುಗಳೆಂದರೆ, ನಾವು revenue deficit ಆಗಿರಬಾರದು; surplus ಆಗಿರಬೇಕು; ಮತ್ತು ನಮ್ಮ fiscal deficit ಶೇಕಡ 3 ಕ್ಕಿಂತಲೂ ಕೆಳಗಡೆ ಇರಬೇಕು ಮತ್ತು ನಮ್ಮ ರಾಜ್ಯದ ಸಾಲ, ನಮ್ಮ ದೇಶದ ಒಟ್ಟು G.S.D.P. ಗಿಂತಲೂ ಶೇಕಡ 25 ರ ಒಳಗಡೆ ಇರಬೇಕು. These are the three parameters adopted in our Fiscal Responsibility Act. ಕೇಂದ್ರ ಸರ್ಕಾರದ ಬಗ್ಗೆ ಮಾನ್ಯ ಸದಸ್ಯರು ಬಹಳ ಹೇಳುತ್ತಿದ್ದಾರೆ. ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ Fiscal Deficit is more than 4%. It will not within the 3%. ಅವರು ಶೇಕಡ 4 ಕ್ಕೆ ತಲುಪಿ, ಶೇಕಡ 5 ಕ್ಕೆ ಹೋಗಿರುತ್ತಾರೆ. ಅಲ್ಲದೇ, ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಸಾಲ ದೇಶದ ಒಟ್ಟಾರೆ G.S.D.P. ಗಿಂತಲೂ ಶೇಕಡ 25 ಅಲ್ಲ. They have crossed 30 to 40%. ನಾನು ಹೇಳುತ್ತಿರುವುದು ಸತ್ಯ. ಬೇಕಾದರೆ ಅವರು ಶ್ರೀ ನರೇಂದ್ರ ಮೋದಿಯವರನ್ನು ಕೇಳಲಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಬೇಕಾದರೆ ನಾನು ಆ ಎಲ್ಲಾ ಮಾಹಿತಿಗಳನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ತದನಂತರ, ನಾವು ನಮ್ಮ ರಾಜ್ಯದಲ್ಲಿ ಮೂರು ಪ್ಯಾರಾಮೀಟರ್‌ಗಳನ್ನು ಅಳವಡಿಸಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ, Hon'ble Chief Minister has maintained two of those parameters. ನಮ್ಮ ರಾಜ್ಯದ ಸಾಲ, ನಮ್ಮ ದೇಶದ ಒಟ್ಟಾರೆ G.S.D.P. ಗಿಂತಲೂ ಶೇಕಡ 25 ರ ಒಳಗಡೆ ಇದೆ. We are within the parameters. ಎರಡನೆಯದಾಗಿ, fiscal deficit is less than 3%. We are maintained that. Revenue surplus ಇಲ್ಲ. Revenue deficit ಇದೆ. ಕ್ರಮೇಣವಾಗಿ ನಾವು ಅದನ್ನು revenue surplus ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುತ್ತಾರೆ. ಈ ರೀತಿಯ ಬಜೆಟ್ ಯಾವ ರಾಜ್ಯದಲ್ಲಿ ಇದೆ ಎಂಬುದನ್ನು ಅವರು ಹೇಳಲಿ. ಅಷ್ಟೇ ಅಲ್ಲದೇ, ಕೇಂದ್ರ ಸರ್ಕಾರದ ಬಜೆಟ್ ಅನ್ನು ಸಹ ಅವರು ಒಮ್ಮೆ ತೆಗೆದು ನೋಡಲಿ. They have not maintained. ಕೇಂದ್ರ ಸರ್ಕಾರದ fiscal deficit is more than 4%. ಮಾನ್ಯ ರವಿಕುಮಾರ್‌ರವರು ಮಾತನಾಡುತ್ತಾ, "ನಮ್ಮ ರಾಜ್ಯದ ಜನರು ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ" ಎಂದು ಏನು ಹೇಳಿರುತ್ತಾರೆ. ಶ್ರೀ ನರೇಂದ್ರ ಮೋದಿಯವರು, ನಮ್ಮ ದೇಶದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸುತ್ತಿದ್ದಾರೆ. ನಮ್ಮ ದೇಶದ ಒಟ್ಟಾರೆ G.S.D.P. ಏನಿದೆ, ಅದರ ಶೇಕಡ 25 ರ ಒಳಗಡೆ ಇರಬೇಕಾಗಿತ್ತು. ಅದನ್ನು ಕೇಂದ್ರ ಸರ್ಕಾರದವರು breach ಮಾಡಿದ್ದಾರೆ. They have breached the Fiscal Responsibility Act. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ತಿಳಿದುಕೊಳ್ಳಲಿ. Our State is more prudent, because we have at least maintained two out of three parameters. ಇದನ್ನು ಕಟ್ಟು ಕಥೆ ಹೇಳುತ್ತಿಲ್ಲ. It is there in the book. ತದನಂತರ, ಶ್ರೀ ನರೇಂದ್ರ ಮೋದಿಯವರು ಮಂಡಿಸಿದಂತಹ ಬಜೆಟ್ ಒಳ್ಳೆಯದೇ ಅಥವಾ ಶ್ರೀ ಸಿದ್ಧರಾಮಯ್ಯನವರು ಮಂಡಿಸಿದಂತಹ ಬಜೆಟ್ ಒಳ್ಳೆಯದೇ ಎಂದು ಅವರು ನಿರ್ಧಾರ ಮಾಡಲಿ ಅಥವಾ ಮಾನ್ಯ ಸಿದ್ಧರಾಮಯ್ಯನವರು ಮಂಡನೆ ಮಾಡಿದಂತಹ ಬಜೆಟ್ ಸರಿಯಾಗಿದೆ ಎಂದು ಈಗ ಅವರು ಹೇಳಲಿ.

**ವೈಸ್ ಛೇರ್ಮನ್:-** ಮಾನ್ಯ ರಮೇಶ್ ಬಾಬುರವರೇ, ತಾವು ತಮ್ಮ ಮಾತುಗಳನ್ನು ಮುಂದುವರೆಸಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಶ್ರೀ ನರೇಂದ್ರ ಮೋದಿಯವರು ಬಜೆಟ್‌ನಲ್ಲಿ ಸಾಲ ಮಾಡಿ ಈ ದೇಶಕ್ಕೆ ಸಾಕಷ್ಟು ಆಸ್ತಿ ಮಾಡಿದ್ದಾರೆ. ಆದರೆ, ರಾಜ್ಯ ಸರ್ಕಾರದವರು ಬಜೆಟ್ ನಲ್ಲಿ ಸಾಲ ಮಾಡಿ, ಎಷ್ಟು ಆಸ್ತಿ ಮಾಡಿದ್ದಾರೆ?

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಶ್ರೀ ನರೇಂದ್ರ ಮೋದಿಯವರು ಸಾಲ ಮಾಡಿ ಯಾವ ಆಸ್ತಿ ಮಾಡಿದ್ದಾರೆ. ಅವರು ಇಡೀ ದೇಶದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದ್ದಾರೆ.

**ವೈಸ್ ಛೇರ್ಮನ್:-** ಮಾನ್ಯ ಶರಣಪ್ರಕಾಶ್‌ರವರೇ ಹಾಗೂ ಶ್ರೀಮತಿ ಭಾರತಿ ಶೆಟ್ಟಿಯವರೇ, ದಯಮಾಡಿ ತಾವುಗಳು ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇವರು ಸಾಲ ಮಾಡಿ, ಇಡೀ ರಾಜ್ಯವನ್ನು ದಿವಾಳಿ ಮಾಡಿದ್ದಾರೆ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಶ್ರೀ ನರೇಂದ್ರ ಮೋದಿಯವರು ಅಧಿಕಾರಕ್ಕೆ ಬಂದಾಗಿನಿಂದಲೂ ಯಾವುದಾದರೂ ಒಂದು ಅಣೆಕಟ್ಟನ್ನು ನಿರ್ಮಾಣ ಮಾಡಿದ್ದಾರೆಯೇ?

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಎರಡು ಲಕ್ಷ ಕೋಟಿ ರೂಪಾಯಿ ಸಾಲ ಮಾಡಿದ್ದು, ಶ್ರೀ ನರೇಂದ್ರ ಮೋದಿಯವರ ಸರ್ಕಾರ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಶ್ರೀ ನರೇಂದ್ರ ಮೋದಿಯವರ ಸರ್ಕಾರ ಸಾಲ ಮಾಡಿದ್ದರೆ, ಕೋವಿಡ್-19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ... ಶ್ರೀ ನರೇಂದ್ರ ಮೋದಿಯವರು ಇಡೀ ದೇಶದಲ್ಲಿ ಕ್ರಾಂತಿ ಮಾಡಿದರು, ರೈಲ್ವೆ ವ್ಯವಸ್ಥೆಯನ್ನು ಅಭಿವೃದ್ಧಿ ಮಾಡಿದರು, ರಸ್ತೆಗಳನ್ನು ಅಭಿವೃದ್ಧಿ ಮಾಡಿದರು ಮತ್ತು ಡ್ಯಾಂಗಳನ್ನು ಕಟ್ಟಿಸಿದರು. ನಮ್ಮ ರಾಜ್ಯ ಸರ್ಕಾರ ಏನು ಮಾಡಿರುತ್ತದೆ?

**(ಗೊಂದಲ)**

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಇಡೀ ದೇಶದ ಆರ್ಥಿಕತೆಯನ್ನು ಹಾಳು ಮಾಡಿರುತ್ತಾರೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, no dams have been constructed in India by them? What potential they have created? Nothing has happened.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ದಯಮಾಡಿ ತಾವು ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬು ತಾವು ಮಾತನಾಡಿ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ನಮ್ಮನ್ನು ಸಾಲದ ಸುಳಿಯಲ್ಲಿ ಸಿಲುಕಿಸುತ್ತಿದ್ದಾರೆಯೇ ಹೊರತು, ನಾವಲ್ಲ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅದಾನಿ ಮತ್ತು ಅಂಬಾನಿಯವರಿಗೆ ಮಾತ್ರ ಇವರು ಆಸ್ತಿ ಮಾಡಿಕೊಂಡಿರುತ್ತಾರೆ.

**ವೈಸ್ ಛೇರಮ್‌ನ್:-** ಮಾನ್ಯ ಸಭಾನಾಯಕರೇ, ದಯಮಾಡಿ ತಾವು ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬು ತಾವು ಮಾತನಾಡಿ.

**ಶ್ರೀ ದಿನೇಶ್ ಗುಂಡೂರಾವ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದವರು ಕೇಂದ್ರ ಸರ್ಕಾರದ ಬಜೆಟ್ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಬಾಬುರವರು ಬಜೆಟ್ ಭಾಷಣದ ಮೇಲೆ ಇನ್ನು ಅರ್ಧ ಗಂಟೆಗಳ ಕಾಲ ಮಾತನಾಡುವವರಿದ್ದಾರೆ. ಆದುದರಿಂದ, ಅವರಿಗೆ ಸಂಬಂಧಿಸಿದ ಚರ್ಚೆಯನ್ನು ಸೋಮವಾರಕ್ಕೆ ಮುಂದುವರೆಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಹೋಲಿಕೆ ಆಗಬೇಕಾಗಿರುವುದು ಯು.ಪಿ.ಎ. ಹಾಗೂ ಎನ್.ಡಿ.ಎ. ಸರ್ಕಾರಗಳ ವಿರುದ್ಧ ಆಗಬೇಕಾಗಿರುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ತಪ್ಪು.

**ಡಾ|| ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಾಗಿದೆ. ಏಕೆಂದರೆ, ಆರ್ಥಿಕ ಶಿಸ್ತು ರಾಜ್ಯ ಸರ್ಕಾರಗಳಿಗೆ ಮಾತ್ರ ಇದೆಯೇ? ಅದು ಕೇಂದ್ರ ಸರ್ಕಾರಕ್ಕೆ ಅನ್ವಯವಾಗುವುದಿಲ್ಲವೇ?

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಅವರು ತಾಳ್ಮೆಯಿಂದ ಕೇಳಲಿ. ಕಳೆದ 10 ವರ್ಷಗಳ ಹಿಂದೆ ನಮ್ಮ ಯು.ಪಿ.ಎ. ಸರ್ಕಾರದ growth rate ಏನಿತ್ತು ಮತ್ತು ಕಳೆದ 10 ವರ್ಷಗಳ ಎನ್.ಡಿ.ಎ. ಸರ್ಕಾರದ growth rate ಏನಿದೆ, ಎಂಬುದನ್ನು ಹೋಲಿಕೆ ಮಾಡಿ ನೋಡಿದರೆ, U.P.A. government performance on annual average growth rate…

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ದಿನಾಂಕ ನಿಗದಿ ಮಾಡಲಿ. ನಾನು ಚಾಲೆಂಜ್ ಮಾಡುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ದಿನಾಂಕ ನಿಗದಿ ಮಾಡಲಿ. ನಾವು ಚಾಲೆಂಜ್ ಮಾಡುತ್ತೇವೆ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, I am also challenging.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಕಳೆದ 50-60 ವರ್ಷಗಳಿಂದ ಅಭಿವೃದ್ಧಿ ಆಗದೇ ಇರುವುದನ್ನು ಶ್ರೀ ನರೇಂದ್ರ ಮೋದಿಯವರು ಕಳೆದ 15 ವರ್ಷಗಳಲ್ಲಿ ಮಾಡಿ ತೋರಿಸಿದ್ದಾರೆ. ನಾನು ಚಾಲೆಂಜ್ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀ ನರೇಂದ್ರ ಮೋದಿಯವರ ಸಾಧನೆಯನ್ನು ಇಡೀ ಪ್ರಪಂಚವೇ ಕೊಂಡಾಡುತ್ತಿದೆ.

**(ಗೊಂದಲ)**

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಯಾರು ಕೊಂಡಾಡಿದ್ದಾರೆ? ಅವರಿಗೆ ನಮ್ಮ ದೇಶದ ಪರಿಸ್ಥಿತಿ ಏನು ಗೊತ್ತಿದೆ?

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಅಭಿವೃದ್ಧಿಯ ವಿಷಯದಲ್ಲಿ ಇಡೀ ಜಗತ್ತೇ ಶ್ರೀ ನರೇಂದ್ರ ಮೋದಿಯವರ ಕಡೆ ನೋಡುತ್ತಿದೆ.

**ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದು ಇವರ ಕಲ್ಪನೆ ಅಷ್ಟೇ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಯು.ಪಿ.ಎ. ಸರ್ಕಾರದ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ರೈಲ್ವೇ ಎಷ್ಟು ಇತ್ತು, ಕಾಲೇಜು ಎಷ್ಟು ಇತ್ತು, ಎಂಬ ಬಗ್ಗೆ ಲೆಕ್ಕ ತೆಗೆಯಿರಿ.

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಈ ಚರ್ಚೆಯನ್ನು ಮೊದಲು ಶ್ರೀ ಎನ್. ರವಿಕುಮಾರ್‌ರವರು ಪ್ರಾರಂಭ ಮಾಡಿದ್ದಾರೆಯೇ ಹೊರತು, ನಾವು ಮಾಡಿರುವುದಿಲ್ಲ. ಯು.ಪಿ.ಎ. ಸರ್ಕಾರದ ಅವಧಿಯಲ್ಲಿ ಕಳೆದ 10 ವರ್ಷಗಳ ಅವಧಿಯ fiscal deficit ಎಷ್ಟು ಇತ್ತು, ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿ ಕಳೆದ 10 ವರ್ಷಗಳ ಅವಧಿಯ fiscal deficit ಎಷ್ಟು ಇತ್ತು ಎಂಬುದನ್ನು ಹೋಲಿಕೆ ಮಾಡೋಣ. ಅದರ ಜೊತೆಗೆ, ಯು.ಪಿ.ಎ. ಸರ್ಕಾರದ ಅವಧಿಯಲ್ಲಿನ growth rate ಮತ್ತು ಎನ್.ಡಿ.ಎ. ಸರ್ಕಾರದ ಅವಧಿಯಲ್ಲಿನ growth rate ಎಷ್ಟು ಆಗಿದೆ ಎಂಬುದನ್ನು ನೋಡೋಣ. ತದನಂತರ, ಯಾವ ಸರ್ಕಾರದಲ್ಲಿ better performance ಆಗಿತ್ತು ಎಂಬುದನ್ನು ನೋಡೋಣ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಆ ವಿಚಾರದ ಬಗ್ಗೆ ನಂತರ ಚರ್ಚೆ ಮಾಡೋಣ. ಆದರೆ, ಆಸ್ಪತ್ರೆಗಳಿಗೆ ಯಾವಾಗ ಔಷಧಿ ಕೊಡುತ್ತಾರೆ ಎಂಬುದನ್ನು ಮೊದಲು ಅವರು ತಿಳಿಸಲಿ. ಏಕೆಂದರೆ, ಈಗಾಗಲೇ ವೈದ್ಯರುಗಳು ಮುಷ್ಕರ ಮಾಡುತ್ತಿದ್ದಾರೆ. ಇವರ ತಟ್ಟೆಯಲ್ಲಿ ಹೆಗ್ಗಣ ಸತ್ತು ಬಿದ್ದಿದೆ. ಅದನ್ನು ಅವರು ಮೊದಲು ನೋಡಲಿ.

(ಗೊಂದಲ)

**ಶ್ರೀ ದಿನೇಶ್ ಗುಂಡೂರಾವ್:-** ಮಾನ್ಯ ಸಭಾಪತಿಯವರೇ, ಇವರು ಸಚಿವರಾಗಿದ್ದಾಗ ಏನೇನು ಮಾಡಿದ್ದಾರೆಂಬುದು ನಮಗೂ ಗೊತ್ತಿದೆ.

(ಗೊಂದಲ)

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಆಸ್ಪತ್ರೆಗಳಲ್ಲಿ ಇಂಜೆಕ್ಷನ್‌ಗಳು, ಮಾತ್ರೆಗಳು ಇಲ್ಲವೆಂದು ವೈದ್ಯರುಗಳು ಮುಷ್ಕರ ಮಾಡುತ್ತಿದ್ದಾರೆ. ಇವರಿಗೆ ನಾಚಿಕೆಯಾಗಬೇಕು.

(ಗೊಂದಲ)

**ವೈಸ್ ಛೇರ್ಮನ್:-** ಸದನವನ್ನು ಸೋಮವಾರ ಬೆಳಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು 1 ಗಂಟೆ 38 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ 16ನೇ ಸೋಮವಾರ, 2025ರಂದು ಸೇರಲು ನಿಶ್ಚಯಿಸಿತು).**